ಓಂ

॥ ಶ್ರೀ ಲಕ್ಷ್ಮೀವೆಂಕಟೇಶ್ವರ ಪ್ರಸನ್ನ ॥

ನಮ್ಮ ಪೂಜ್ಯ ತಂದೆಯವರಾದ ಶ್ರೀ ಎನ್. ಮಾಧವರಾಯರ ಸ್ಮರಣಾರ್ಥ

ಪಿತೃಕಾರ್ಯ ಧರ್ಮಸೂಕ್ಷ್ಮಗಳು

ಸಮರ್ಪಿಸುವವರು:

ಎಮ್. ರಾಘವೇಂದ್ರ
#159, 3ನೇ ಮುಖ್ಯ ರಸ್ತೆ, ಮಾರ್ಗೋಸಾ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003.
ದೂ. ಸಂ : 9845048558

ಗ್ರಂಥಕರ್ತರು:

ಜ್ಯೋತಿಷ್ಯ ಪ್ರವೀಣ, ಜ್ಯೋತಿಷ್ಯ ವಿಶಾರದ
ಶ್ರೀ ಹೆಚ್.ವಿ. ಶ್ರೀನಿವಾಸಮೂರ್ತಿ
ಪೆರಮಾಚನಹಳ್ಳಿ.

ಪಿತೃಋಣ

ತಂದೆಗೂ ಗುರುವಿಗೂ ಒಂದು ಅಂತರವುಂಟು
ತಂದೆ ತೋರುವನು ಸದ್ಗುರುವ
ಗುರುರಾಯ ಬಂಧನವ ಕಳೆವ ಸರ್ವಜ್ಞ

ಶ್ರೀಯುತ ಎನ್. ಮಾಧವರಾಯರು, ಯಗವಕೋಟೆ
19–03–1932 ಯಿಂದ 30–06–2013

ತಂದೆಗೂ ಗುರುವಿಗೂ ಒಂದೇ ಒಂದು ಅಂತರವುಂಟು. ಅದೇನೆಂದರೆ ತಂದೆಯು ಒಳ್ಳೆಯ ಗುರುವನ್ನು ತೋರಿಸುತ್ತಾರೆ ಮತ್ತು ಗುರುವರ್ಯರು ಬಂಧನವನ್ನು ಕಳೆಯುತ್ತಾರೆ. ಅಂತಹ ಒಳ್ಳೆಯ ದಾರಿಯಲ್ಲಿ ನಮ್ಮನ್ನು ನೆಡೆಯುವಂತೆ ಮಾಡಿದ, ನಮಗೆ ಒಳ್ಳೆಯ ವಿದ್ಯೆಯನ್ನು ನೀಡಿದಂತಹ, ಒಳ್ಳೆಯ ತಂದೆಯಾಗಿ, ಒಳ್ಳೆಯ ಗುರುವಾಗಿ, ಒಳ್ಳೆಯ ಮಾರ್ಗದರ್ಶಕರಾಗಿದ್ದಂತಹ ಪರಮಪೂಜ್ಯ ತಂದೆಯವರಿಗೆ ನಮ್ಮ ಅನಂತಾನಂತಕೋಟಿ ವಂದನೆಗಳೊಂದಿಗೆ ಸಮರ್ಪಿಸುತ್ತಿರುವ ಎಂ. ಭಾನುಮತಿ, ಎಂ. ರಮೇಶ್, ಎಂ, ರಾಮಚಂದ್ರ, ಎಂ.ರಾಘವೇಂದ್ರ ಮತ್ತು ಕುಟುಂಬದವರು.

ಶ್ರೀ ಎನ್. ಮಾಧವರಾವ್ – ನಮ್ಮ ಪ್ರೇರಕ ಶಕ್ತಿ

ಜಗದಲ್ಲಿ ಜೀವಿಗಳ ಹುಟ್ಟು ಸಾವುಗಳ ಪ್ರಕ್ರಿಯೆ ನಿರಂತರ. ಭಗವಂತನ ಮಾಯಾ ಲೋಕವಾದ ಈ ಪ್ರಪಂಚದಲ್ಲಿ ಮಾನವ ಜನ್ಮಕ್ಕೆ ಆತ್ಮೋನ್ನತಿಯ ಸಾಧನೆಗೆ ಅವಕಾಶವುಂಟು. ಅಂತಹ ಸಾಧನೆಗೈವ ಮನುಜರ ಬದುಕು ಸಾರ್ಥಕವೆನಸುವುದು. ಈ ಮಾದರಿಯ ಸಾರ್ಥಕ ಬದುಕು ಕಂಡ ಶ್ರೀ ಎನ್. ಮಾಧವರಾವ್ ರವರು ಈ ಪುಸ್ತಕದ ಪ್ರಕಟಣೆಯ ಪ್ರೇರೇಪಕರು. ಇವರು ನಮ್ಮ ತಂದೆಯವರೆಂದು ಹೇಳಿಕೊಳ್ಳಲು ನಮಗೆ ಹೆಮ್ಮೆಯೆನಿಸುತ್ತದೆ.

ಸಾಮಾನ್ಯ ಮಧ್ಯಮ ವರ್ಗದ ಕುಟುಂಬದಲ್ಲಿ ಜನಿಸಿದ ಶ್ರೀಯುತರು ಉತ್ತಮ ಸಂಸ್ಕಾರಗಳನ್ನು ಮೈಗೂಡಿಸಿಕೊಂಡು ಬೆಳೆದವರು. ಪರಿಶ್ರಮದೊಂದಿಗೆ ವಿದ್ಯಾರ್ಜನೆಯನ್ನು ಮಾಡಿ ಕರ್ನಾಟಕ ಸರ್ಕಾರದ ಕಂದಾಯ ಇಲಾಖೆಯಲ್ಲಿ ಸೇವೆಯನ್ನು ಸಲ್ಲಿಸುತ್ತಾ ದಕ್ಷತೆಗೆ ಹೆಸರುಗಳಿಸಿ ತಹಸೀಲ್ದಾರರಾಗಿ ನಿವೃತ್ತಿ ಹೊಂದಿದರು. ಸದಾ ಶ್ರೀ ಹರಿಯ ಸೇವೆಗೈಯುತ್ತ ಧಾರ್ಮಿಕ ಪುಸ್ತಕಗಳ ಓದಿನೊಂದಿಗೆ ತಮ್ಮ ಅರಿವನ್ನು ಉನ್ನತ ಮಟ್ಟವಾಗಿಸಲು ನಿರಂತರವಾಗಿ ಪ್ರಯತ್ನಿಸಿದರು. ತಂದೆ ತಾಯಿಗಳ ಬಗೆಗೆ ಅತೀವ ಭಕ್ತಿಗೌರವವನ್ನು ಬೆಳೆಸಿಕೊಂಡರು. ಜೀವನದಲ್ಲಿ ತಮ್ಮ ಮಕ್ಕಳಿಗೆ ಉತ್ತಮ ಸಂಸ್ಕಾರವನ್ನಿತ್ತರು. ಲೌಕಿಕದ ಧಾರ್ಮಿಕ ಆಚರಣೆಗಳನ್ನು ಶಿಸ್ತುಬದ್ಧವಾಗಿ ಆಚರಿಸಿ ಅದರ ಪ್ರಾಮುಖ್ಯತೆಯ ಬೀಜವನ್ನು ಮಕ್ಕಳಲ್ಲೂ ಬಿತ್ತಿದರು. ಶ್ರೀ ರಾಘವೇಂದ್ರ ಸ್ವಾಮಿಗಳ ಅಖಂಡ ಭಕ್ತರಾದ ಇವರು ತುಮಕೂರಿನಲ್ಲಿ ಶ್ರೀಗುರುರಾಯರ ಮಠದ ಸ್ಥಾಪನೆಗೆ ಕಾರಣೀಭೂತರು. ತಮ್ಮ ಹುಟ್ಟೂರಾದ ಚಿಂತಾಮಣಿ ತಾಲ್ಲೂಕಿನ ಯವಗಕೋಟೆಯಲ್ಲಿರುವ ದೇವೇಂದ್ರ ಪ್ರತಿಷ್ಠಿತ ಶ್ರೀ ವೀರನಾರಾಯಣಸ್ವಾಮಿ ದೇಗುಲದ ಜೀರ್ಣೋದ್ಧಾರ ಮಾಡಿ ದೈವ ಭಕ್ತಿಯನ್ನು ಮೆರೆದರು.

ಇಂತಹ ಸಜ್ಜನ ಸಾಧಕರಾದ ಶ್ರೀ ಮಾಧವರಾವ್ ರವರು ಸ್ವರ್ಗಸ್ಥರಾಗಿ ಒಂದು ವರ್ಷವಾದ ನೆನಪಿನಲ್ಲಿ ಈ ಪುಸ್ತಕ ಪ್ರಕಟಣೆಯಾಗಿದ್ದು, ಇದು ಎಲ್ಲಾ ವರ್ಗದ ಆಸ್ತಿಕ ಜನರ ಧಾರ್ಮಿಕ ಶ್ರದ್ಧೆಯನ್ನು ಹೆಚ್ಚಿಸುವದರಲ್ಲಿ ನೆರವಾಗುವುದೆಂದು ನಂಬಿದ್ದೇವೆ.

ಇಂತೀ: ಶ್ರೀಮತಿ ಸುಶೀಲಮ್ಮ ಮಾಧವರಾವ್,
ಶ್ರೀಮತಿ ಎಂ ಭಾನುಮತಿ,
ಶ್ರೀ ಎಂ ರಮೇಶ,
ಶ್ರೀ ಎಂ ರಾಮಚಂದ್ರ ಮತ್ತು
ಶ್ರೀ ಎಂ ರಾಘವೇಂದ್ರ ಹಾಗೂ ಕುಟುಂಬವರ್ಗದವರು.

ಶ್ರೀ ವೀರನಾರಾಯಣ ಸ್ವಾಮಿ, ಯಗವಕೋಟೆ



ಸನಾತನ ಧರ್ಮದ ಆಧಾರ ಸ್ಥಂಭಗಳು

ವಿಷಯಾನುಕ್ರಮಣಿಕೆ

ಮುನ್ನುಡಿ..12
ಶ್ರಾದ್ಧದ ಮಹಾತ್ಮೆ...16
ಲೇಖಕರ ನುಡಿ 18
ದಾಸವಾಣಿ..20
ಪಿತೃಕಾರ್ಯ ಧರ್ಮಸೂಕ್ಷ್ಮಗಳು 22
ಕರ್ಮಾನುಷ್ಠಾನ 27
ಭೀಷ್ಮೋವಾಚ ಪಾಪವಿರಾಪಹರಣ ಸ್ತೋತ್ರ.. 35
ಕಲಿಯುಗದ ಬಗ್ಗೆ ವ್ಯಾಸರ ವಿವರಣೆ 36
ಸಂಸ್ಕಾರ ವಿಧಿಗಳು 38
ಧನಿಷ್ಟಾಪಂಚಕ, ತ್ರಿಪಾದಿ ನಕ್ಷತ್ರ ಶಾಂತಿ 41
ಪಂಚಕ ಶಾಂತಿ ಹಾಗೂ ತ್ರಿಪಾದಿ ಶಾಂತಿ 43
ಅಸ್ಥಿ ಸಂಚಯನ 46
ಶುಭ ಸ್ವೀಕಾರ ವಿಚಾರ 48
ಮಾಸಿಕ ವಿಚಾರಗಳು..50
ದಾನ ಪ್ರಕರಣ 52
ಪಂಚ ಗೋದಾನಗಳು 55
ಶ್ರಾದ್ಧಗಳು 57
ಷಣ್ಣವತಿ ಶ್ರಾದ್ಧಗಳು 61
ತೀರ್ಥಶ್ರಾದ್ಧಗಳು ಮತ್ತು ಅದರ ಮಹಿಮೆ 64
ಜ್ಯೋತಿಷ್ಯ ಶಾಸ್ತ್ರದಲ್ಲಿ ಪಿತೃಕರ್ಮದ ವಿವರಣೆ*..94
ಮೋಕ್ಷ ವಿಚಾರ...96
ಲೇಖಕರ ಬಗ್ಗೆ...100

* ಮೊದಲ ಮಾತು *

॥ ಶ್ರೀರಾಮ ॥

ಪ್ರಪಂಚದ ರಾಷ್ಟ್ರಗಳಲ್ಲಿ ನಮ್ಮ ಭಾರತ ದೇಶಕ್ಕೆ ವಿಶಿಷ್ಟವಾದ ಸ್ಥಾನವಿದೆ. 'ಭಾರತ'

ಎಂಬ ಪದದ ವಿಶ್ಲೇಷಣೆ ಮಾಡುವಾಗ, 'ಭಾ' ಎಂದರೆ ಜ್ಞಾನ, 'ರತ' ಎಂದರೆ ಮಗ್ನನಾಗುವುದು ಎಂಬರ್ಥದಲ್ಲಿ ಭಾರತ ಎಂದರೆ ಜ್ಞಾನದ ಆಕಾರ, ಜ್ಞಾನಿಗಳ ಬೀಡು ಎಂದು ವರ್ಣಿಸಲಾಗುತ್ತದೆ.

ಇಲ್ಲಿ ಅನಾದಿಕಾಲದಿಂದಲೂ ಜನ ಪರಿಪಾಲಿಸುವ ಧರ್ಮಕ್ಕೆ 'ಸನಾತನ ಧರ್ಮ' ಎಂದು ಹೆಸರಿಸುವುದುಂಟು. 'ಸನಾತನ' ಎಂದರೆ ಎಲ್ಲಾ ಕಾಲದಲ್ಲೂ ಇರುವಂತಹದ್ದು ಎಂದರ್ಥ. ಎಂದರೆ ಈ ಧರ್ಮವು ಯಾವುದೋ ಒಂದು ಕಾಲಮಾನದಲ್ಲಿ ಇದ್ದು ಇನ್ನೊಂದು ಕಾಲಮಾನದಲ್ಲಿ ಇರುವುದಿಲ್ಲ ಎಂಬುದಿಲ್ಲ. ಇಂತಹ ಸನಾತನಧರ್ಮಕ್ಕೆ ಅಡಿಪಾಯ ವೈದಿಕವಾಙ್ಮಯ. ಇದು ಶೃತಿ, ಸ್ಮೃತಿ, ಪುರಾಣ, ಇತಿಹಾಸ ಇತ್ಯಾದಿಗಳನ್ನು ಒಳಗೊಂಡಿದೆ. ಇವುಗಳಲ್ಲಿ ಶೃತಿಗಳಿಗೆ ವೇದಗಳೆಂದು ವ್ಯವಹಾರ ಉಂಟು. ಈ ಶೃತಿಗಳು ಯಾವುದೇ ಒಬ್ಬ ವ್ಯಕ್ತಿ ತನ್ನ ಬುದ್ಧಿಶಕ್ತಿಯಿಂದ ಕಲ್ಪಿಸಿಕೊಂಡು ಬರೆದಿದ್ದಲ್ಲ. ಪುರಾತನ ಋಷಿಗಳು ದೀರ್ಘ ತಪಸ್ಸಿನ ಫಲವಾಗಿ ದರ್ಶಿಸಿದ "ಮಂತ್ರ ಸಮೂಹ". ಋಷಿಗಳು ತಾವು ದರ್ಶಿಸಿದ ಮಂತ್ರಗಳನ್ನು ಉಚ್ಚರಿಸಿದಾಗ ಶಿಷ್ಯರು ಅದನ್ನು ಗ್ರಹಿಸಿ ಅದನ್ನು ಧಾರಣೆ ಮಾಡಿ ಪುನರುಚ್ಚರಿಸಿ ಕರಗತ ಮಾಡಿಕೊಂಡು ಅದನ್ನು ತಮ್ಮ ಶಿಷ್ಯರಿಗೆ ಹೇಳಿಕೊಡುತ್ತಿದ್ದರು. ಅದರಿಂದಾಗಿ ವೇದಗಳಿಗೆ "ದರ್ಶನಶಾಸ್ತ್ರ" ಎಂಬ ಹೆಸರೂ ಇದೆ.

ಈ ರೀತಿ ಪರಂಪರಾಗತವಾಗಿ ಬಂದ ಶೃತಿಗಳನ್ನು ಅನುಕೂಲಕ್ಕಾಗಿ ಕರ್ಮಕಾಂಡ, ಉಪಾಸನಾಕಾಂಡ ಮತ್ತು ಜ್ಞಾನಕಾಂಡ ಎಂದು ಮೂರು ಭಾಗವಾಗಿ ವ್ಯವಹ–ರಿಸುವುದುಂಟು. ಇದರಲ್ಲಿ ಮೊದಲನೆಯದಾದ ಕರ್ಮಕಾಂಡದಲ್ಲಿ ನಾವು ಆಚ–ರಿಸಬೇಕಾದ ನಾನಾ ರೀತಿಯ ಕರ್ಮಗಳನ್ನೂ, ಅವುಗಳಿಗೆ ಸಿಗಬಹುದಾದ ಫಲಗಳನ್ನೂ ಪ್ರಸ್ತಾಪಿಸಲಾಗಿದೆ. ಎರಡನೇ ಭಾಗವಾದ ಉಪಾಸನಾಕಾಂಡದಲ್ಲಿ ನಾನಾ ದೇವತೆಗಳ ಉಪಾಸನಾಕ್ರಮ, ಅದಕ್ಕೆ ಫಲವಾಗಿ ಪ್ರಾಪ್ತವಾಗುವ ಆಯಾ ದೇವತೆಗಳ ಲೋಕಗಳು ಪ್ರಸ್ತಾಪಿಸಲ್ಪಟ್ಟಿವೆ. ಮೂರನೇ ಭಾಗವಾದ ಜ್ಞಾನಕಾಂಡದ ವಿಷಯವೇನೆಂದರೆ ವೇದಗಳ ಕೊನೆಯ ಭಾಗವಾದ ಉಪನಿಷತ್ತುಗಳು, ಇವುಗಳಿಗೆ 'ವೇದಾಂತ' ಎಂಬ ಹೆಸರೂ ಬಳಕೆಯಲ್ಲಿದೆ. ವೇದಾಂತದ ಮುಖ್ಯ ಉದ್ದೇಶ ಮೋಕ್ಷ ಪ್ರಾಪ್ತಿಯೇ ಆಗಿದೆ.

ಉಪನಿಷತ್ತುಗಳು, ಬ್ರಹ್ಮಸೂತ್ರ ಮತ್ತು ಭಗವದ್ಗೀತೆ ಈ ಮೂರೂ ಸೇರಿ ಪ್ರಸ್ಥಾನತ್ರಯಗಳೆಂದು ಕರೆಯಲ್ಪಟ್ಟಿವೆ. ಇವುಗಳ ಅಧ್ಯಯನಕ್ಕೆ ಶ್ರವಣ, ಮನನ, ನಿದಿಧ್ಯಾಸನ ಎಂಬ ಕ್ರಮವನ್ನು ಹೇಳಲಾಗಿದೆ. ಇದರ ಫಲ ಕೇವಲ ಮೋಕ್ಷವೇ ಆಗಿದೆ.

ಮಾನವ ಜನ್ಮದ ಗುರಿ ಮೋಕ್ಷ ಪ್ರಾಪ್ತಿಯೇ ಎಂಬುದು ಸನಾತನ ಧರ್ಮದ ಅನುಯಾಯಿಗಳ ದೃಢವಾದ ನಂಬಿಕೆ. ಆದರೆ ಅದು ಅಷ್ಟು ಸುಲಭವೇ ಎಂಬ ಪ್ರಶ್ನೆ ಏಳುತ್ತದೆ. ಸಕಲ ಜೀವರಾಶಿಗಳಲ್ಲಿ ಮಾನವನಿಗೆ ಮಾತ್ರ ಇದು ಸಾಧ್ಯ. ಅದರಲ್ಲೂ ಭಾರತದಲ್ಲಿ ಜನ್ಮ ಪಡೆದವರಿಗೆ ಪರಂಪರಾಗತವಾಗಿ ಬಂದಿರುವ ಈ ಜ್ಞಾನ ಲಭ್ಯವಿರುವುದರಿಂದ, ಖಂಡಿತವಾಗಿಯೂ ಇದು ಸಾಧ್ಯ. ಅದಕ್ಕೆ ಬೇಕಿರುವುದು ವೈದಿಕ ವಾಙ್ಮಯದಲ್ಲಿ ಶ್ರದ್ಧೆ, ನಿಷ್ಕಾಮ ಕರ್ಮಾಚರಣೆ, ಇಷ್ಟ ದೇವತೋಪಾಸನೆ, ವೇದಾಂತ ಶ್ರವಣ, ಮನನ, ನಿದಿಧ್ಯಾಸನ ಇವುಗಳು.

ಈ ಕ್ರಮದಲ್ಲಿ ನಿಷ್ಕಾಮಕರ್ಮಕ್ಕೆ ಅತ್ಯಂತ ಪ್ರಾಧಾನ್ಯತೆ ಇದೆ. ನಿಷ್ಕಾಮಕರ್ಮದಿಂದ ಚಿತ್ತಶುದ್ಧಿಯನ್ನು ಪಡೆದವನು ತನ್ನ ಅಂತಃಕರಣದಲ್ಲಿ ಜ್ಞಾನದ ಬೆಳಕನ್ನು ಕಾಣಬಹುದು. ಚಿತ್ತಶುದ್ಧಿಯನ್ನು ಪಡೆದವನು, ಶ್ರೋತ್ರೀಯ ಬ್ರಹ್ಮನಿಷ್ಠನಾದ ಸದ್ಗುರುವನ್ನಾಶ್ರಯಿಸಿ, ಸೇವೆಯಿಂದ ಗುರುವಿನ ಕೃಪೆಗೆ ಪಾತ್ರನಾಗಿ, ವೇದಾಂತ ಶ್ರವಣದ ಮೂಲಕ ಜ್ಞಾನವನ್ನು ಪಡೆಯಬಹುದು.

ಚಿತ್ತ ಶುದ್ಧಿ ಇಲ್ಲದೆ ಜ್ಞಾನ ಪ್ರಾಪ್ತಿ ಇಲ್ಲ. ನಿಷ್ಕಾಮನಾಗಿ ಸತ್ಕರ್ಮಾಚರಣೆ ಮಾಡದಿದ್ದರೆ ಚಿತ್ತ ಶುದ್ಧಿ ಇಲ್ಲ. ಇದರಿಂದ ಮಾನವನ ಜೀವನದಲ್ಲಿ ಸತ್ಕರ್ಮಾಚರಣೆಗೆ ಇರುವ ಪ್ರಾಧಾನ್ಯತೆ ತಿಳಿಯುತ್ತದೆ. ಈ ರೀತಿಯ ಸತ್ಕರ್ಮಾಚರಣೆ ನಮಗೆ ಕರ್ಮಕಾಂಡದ ಮೂಲಕ ತಿಳಿಯಲ್ಪಡುತ್ತದೆ.

ಆದರೆ ಇತ್ತೀಚಿನ ದಿನಗಳಲ್ಲಿ ಈ ರೀತಿಯ ಸತ್ಕರ್ಮಾಚರಣೆಯ ಬಗ್ಗೆ ಶ್ರದ್ಧೆ ಮತ್ತು ಆಸಕ್ತಿಗಳು ಕಡಿಮೆಯಾಗುತ್ತಿರುವುದನ್ನು ನಾವು ಕಾಣಬಹುದು. ಒತ್ತಡದ ಜೀವನ, ಐಹಿಕ ಭೋಗಾಸಕ್ತಿಯಿಂದ ಬಹಳ ಮಟ್ಟಿಗೆ ಶ್ರದ್ಧೆ ಕಡಿಮೆಯಾಗುತ್ತಿದೆ. ಕೆಲವರಿಗೆ ಆಸಕ್ತಿಯಿದ್ದರೂ ಕರ್ಮದ ಬಗ್ಗೆ ಸರಿಯಾದ ಮಾಹಿತಿ ಇಲ್ಲದಿರುವುದೂ, ಕರ್ಮಾಚರಣೆಯನ್ನೂ ವ್ಯಾಪಾರೀಕರಿಸಿ ಕೆಲವು ಪಂಡಿತರು ಮಾಡುತ್ತಿರುವ ವ್ಯಾಪಾರ, ಕಾಯಕ್ಲೇಶಭಯ ಇತ್ಯಾದಿಯಿಂದಾಗಿ ಕರ್ಮಾಚರಣೆಯಲ್ಲಿ ಆಸಕ್ತಿ ಕಳೆದುಕೊಳ್ಳುತ್ತಿದ್ದಾರೆ. ಇನ್ನು, ಕೆಲವೇ ವಿದ್ಯಾವಂತರು ಎನಿಸಿಕೊಂಡವರು, ಕರ್ಮಾಚರಣೆ ಮಾಡುವಂತವರು ಕೇವಲ ದಡ್ಡರು ಹಾಗೂ ಸಂಕಷ್ಟದಲ್ಲಿರುವವರು ಮಾತ್ರ ಎಂದು ಭಾವಿಸಿದ್ದಾರೆ. ವಿದ್ಯಾವಂತರಾದವರು ತಮ್ಮ ವೃದ್ಧಾಪ್ಯದಲ್ಲಿ ಅಂಗಡಿಗೆ ಹೋಗಿ ಉಪನಿಷತ್ತು ಹಾಗೂ ಭಗವದ್ಗೀತೆ ಪುಸ್ತಕಗಳನ್ನು ಕೊಂಡು ತಂದು ಸುಖಾಸನದಲ್ಲಿ ಕುಳಿತು ಕಾಫಿ ಸೇವನೆ ಮಾಡುತ್ತಾ, ಓದಿಕೊಂಡರೆ ಸಾಕು ಜ್ಞಾನಪ್ರಾಪ್ತಿಯಾಗುತ್ತದೆ ಎಂದು ಭಾವಿಸಿದ್ದಾರೆ. ಇದಕ್ಕಿಂತಲೂ ಹಾಸ್ಯಾಸ್ಪದ ಸಂಗತಿ ಇನ್ನೊಂದಿಲ್ಲ.

'ಪುಸ್ತಕಾನಾಂ ಸಹಸ್ರೇಣ ಶ್ಲೋಕಾನಾಮಯುತೇನವಾ ।
ಅನುಷ್ಠಾನ ವಿಹೀನಸ್ಯ ತಸ್ಯಾ ಲಾಭೋ ನರಸ್ಸಹೀ' ॥

ಎಂಬಂತೆ ಸಾವಿರ ಪುಸ್ತಕಗಳಿದ್ದರೂ, ಹತ್ತು ಸಾವಿರ ಶ್ಲೋಕಗಳಿದ್ದರೂ, ಅನುಷ್ಠಾನವಿಲ್ಲದವನಿಗೆ ಪುಸ್ತಕದ ಲಾಭವಿಲ್ಲ.

ಕರ್ಮಕಾಂಡದಲ್ಲಿ ಹೇಳಿರುವ ಸಂಧ್ಯಾವಂದನೆ, ದೇವತಾರ್ಚನೆ ಇತ್ಯಾದಿ ನಿತ್ಯಕರ್ಮಗಳೂ, ಶ್ರಾದ್ಧ, ತರ್ಪಣಾದಿ ನೈಮಿತ್ತಿಕಕರ್ಮಗಳೂ, ಕಾಮ್ಯಕರ್ಮಗಳೂ ಎಲ್ಲವೂ ಮಾನ್ಯವೇ. ಒಂದು ವೇಳೆ ಕಾಮ್ಯಕರ್ಮಗಳು ಬೇಡವೆಂದು ಭಾವಿಸಿದರೂ, ನಿತ್ಯನೈಮಿತ್ತಿಕ ಕರ್ಮಗಳನ್ನು ಆಚ-ರಿಸಲೇಬೇಕು. ಅದರಲ್ಲೂ ಶ್ರಾದ್ದ, ತರ್ಪಣ ಮುಂತಾದ ಪಿತೃಕರ್ಮಗಳನ್ನು ಆಚರಿಸದೆ ಬಿಟ್ಟರೆ ಪ್ರಬಲವಾದ ದೋಷ ಉಂಟಾಗುತ್ತದೆ. ಅದರ ಪರಿಣಾಮ ತುಂಬಾ ಅಪಾಯಕಾರಿ. ಕೇವಲ ತಾನಲ್ಲದೆ ತನ್ನ ವಂಶಸ್ಥರನ್ನೂ ಸಂಕಷ್ಟಕ್ಕೆ ತಳ್ಳುವ ಈ ಕರ್ಮ ತ್ಯಾಗದ ಬಗ್ಗೆ ಎಲ್ಲರೂ ಎಚ್ಚರದಿಂದಿರಬೇಕು. ಇತ್ತೀಚಿನ ದಿನಗಳಲ್ಲಿ ಶ್ರಾದ್ಧ ಕರ್ಮಗಳನ್ನು ಉದಾಸೀನತೆಯಿಂದ ಬಿಡುವುದನ್ನು ಕಾಣುತ್ತೇವೆ. ಕೆಲವರು ಯಾವಾಗಲೋ ಅನುಕೂಲ ಆದ-ಾಗ ಗಯೆಗೆ ಹೋಗಿ 'ಗಯಾಶ್ರಾದ್ಧ' ಮಾಡಿಬಿಟ್ಟರೆ ಸಾಕು, ಪ್ರತಿ ವರ್ಷವೂ ಮಾಡಬೇಕಾದ ಅಗತ್ಯವಿರುವುದಿಲ್ಲ ಎಂದು ಭಾವಿಸುತ್ತಾರೆ. ಇದೂ ಸಹ ಬಹಳ ತಪ್ಪು ಕಲ್ಪನೆ. ಪ್ರತಿ ವರ್ಷವೂ ಶ್ರಾದ್ಧ, ತರ್ಪಣಾದಿಗಳನ್ನು ನಡೆಸದಿದ್ದರೆ ಕರ್ತವ್ಯ ಭ್ರಷ್ಟತೆ ಉಂಟಾಗುತ್ತದೆ. ಅದರ ದುಷ್ಫಲಗಳನ್ನು ತಪ್ಪಿಸಿಕೊಳ್ಳುವಂತಿಲ್ಲ.

ಇನ್ನು ಈ ಪುಸ್ತಕದ ಪ್ರಕಟಣೆಯ ಹಿನ್ನಲೆಯ ಬಗ್ಗೆ ಬಂದರೆ, ಕಳೆದ ವರ್ಷ ಎಂದರೆ 30-06-2013 ರಂದು ನನ್ನ ಅಣ್ಣನವರಾದ ಶ್ರೀ ಮಾಧವರಾಯರು ತಮ್ಮ 81ನೇ ವರ್ಷದಲ್ಲಿ ಬೆಂಗಳೂರಿನಲ್ಲಿ ಸ್ವರ್ಗಸ್ಥರಾದರು. ಅಂದಿನಿಂದ ಪ್ರಾರಂಭಿಸಿ ಒಂದು ವರ್ಷದ ಕಾಲ ಅವರ ಅಂತ್ಯಾಬ್ಧಿಗೆ ಸಂಬಂಧಿಸಿದ ಎಲ್ಲಾ ಕಾರ್ಯಕ್ರಮಗಳನ್ನೂ, ಷೋಡಷ ಮಾಸಿಕಗಳನ್ನೂ, ಅವರ ಮಕ್ಕಳು ಅತ್ಯಂತ ಶ್ರದ್ಧಾ ಭಕ್ತಿಯಿಂದ ನಡೆಸಿಕೊಂಡು ಬಂದಿದ್ದಾರೆ. ಗಣಕಯಂತ್ರಗಳ ಈ ಕಾಲದಲ್ಲಿ "ಸಾಫ್ಟವೇರ್" ಉದ್ಯಮದಲ್ಲಿ ಅತ್ಯಂತ ಜವಾಬ್ದಾರಿ ಕಾರ್ಯಭಾರವನ್ನು ನಿರ್ವಹಿಸುತ್ತಿದ್ದರೂ ಸಮಯದ ಅಭಾವದ ನೆಪವನ್ನು ಒಡ್ಡದೆ ಅತ್ಯಂತ ಶ್ರದ್ಧಾ ಭಕ್ತಿಗಳಿಂದ ತಂದೆಗೆ ಮಾಡಬೇಕಾದ ಕಾರ್ಯಗಳನ್ನು ನಿರ್ವಹಿಸಿದ್ದಾರೆ. ಇವರ ಶ್ರದ್ಧಾ ಭಕ್ತಿ ಇತರರಿಗೆ ಮಾದರಿ.

ಈ ಸತ್ಕಾರ್ಯದಲ್ಲಿ ಮೊದಲಿನಿಂದ ಕೊನೆಯ ತನಕ ಇವರಿಗೆ ಮಾರ್ಗದರ್ಶನ ನೀಡಿ ಎಲ್ಲಾ ಶಾಸ್ತ್ರೀಯವಾದ ಅನುಕೂಲಗಳನ್ನೂ ಮಾಡಿಕೊಟ್ಟವರು ಶ್ರೀಯುತ ಹೆಚ್. ವಿ. ಶ್ರೀನಿವಾಸಮೂರ್ತಿ

ಪೆರವಾಚನಹಳ್ಳಿ ಯುವರು. ಶ್ರೀಯುತರ ವಯಸ್ಸು ಚಿಕ್ಕದಾದರೂ ಇವರ ಪಾಂಡಿತ್ಯ ಮಾತ್ರ ಹಿರಿದು. ಸದಾ ಶಾಸ್ತ್ರಾಧ್ಯಯನ, ಸ್ವಧರ್ಮಾಚರಣೆ, ಸತ್ಕರ್ಮಾನುಷ್ಠಾನಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವ ಇವ-ರಿಗೆ ಜ್ಞಾನದ ಅಭಾವವಿಲ್ಲದಿದ್ದರೂ, ಸಮಯದ ಅಭಾವ ತುಂಬಾ ಇದೆ. ಆದರೂ ಯಾರೇ ಆಗಲಿ ಸತ್ಕರ್ಮದಲ್ಲಿ ತೊಡಗಿದ್ದರೆ ಅವ-ರಿಗೆ ಸದಾ ಇವರ ಸಹಾಯ ಹಸ್ತ ಸಿದ್ಧವಾಗಿರುತ್ತದೆ. ಕಾಲ ಕಾಲಕ್ಕೆ ಸೂಕ್ತವಾದ ಸಲಹೆ, ಮಾರ್ಗದರ್ಶನ ಮಾಡುವುದಲ್ಲದೆ, ತಾವೇ ಕಾಶೀ ಕ್ಷೇತ್ರಕ್ಕೆ ಕರ್ತೃಗಳೊಂದಿಗೆ ತೆರಳಿ, ಅಲ್ಲಿ ಎಲ್ಲಾ ಏರ್ಪಾಟುಗಳನ್ನು ಮಾಡಿ ಅಸ್ಥಿ ವಿಸರ್ಜನೆ, ಶ್ರಾದ್ಧಾದಿಗಳನ್ನು ಅಲ್ಲಿನ ಸ್ಥಳ ಪುರೋಹಿತರೊಂದಿಗೆ ಸಹಕರಿಸಿ ತುಂಬಾ ಚೊಕ್ಕವಾಗಿ ನೆರವೇರಿಸಿಕೊಟ್ಟಿದ್ದಾರೆ. ಇವರ ಜ್ಞಾನದ ಲಾಭ ಕೆಲವು ಆಸ್ತಿಕ ಮಹಾಶಯರಿಗಾದರೂ ಲಭಿಸಲೆಂಬ ಉದ್ದೇಶದಿಂದ, ವರ್ಷಾಬ್ದಿಕದ ಸಮಯಕ್ಕೆ ಪಿತೃಯಜ್ಞಕ್ಕೆ ಸಂಬಂಧಿಸಿದಂತೆ ಸಮಗ್ರ ಮಾಹಿತಿಯನ್ನೊಳಗೊಂಡ ಒಂದು ಕಿರುಹೊತ್ತಿಗೆಯನ್ನು ಪ್ರಕಟಣೆಗಾಗಿ ಬರೆದುಕೊಡಬೇಕೆಂದು ವಿನಂತಿಸಿಕೊಂಡಾಗ, ಸಮಯದ ಅಭಾವ ಬಹಳವಿದ್ದರೂ, ರಾತ್ರಿ ಸಮಯವನ್ನು ಇದಕ್ಕಾಗಿ ಮೀಸಲಿಟ್ಟು, ನಾನಾ ಮೂಲಗಳಿಂದ ವಿಷಯವನ್ನು ಸಂಗ್ರಹಿಸಿ ಎಲ್ಲವನ್ನೂ ಕ್ರೋಢೀಕರಿಸಿ ಕರ್ಮನಿಷ್ಠರಿಗೆ ಉಪಯುಕ್ತವಾಗುವಂತೆ ಈ ಕಿರು ಹೊತ್ತಿಗೆಯನ್ನು ರಚಿಸಿಕೊಟ್ಟಿರುತ್ತಾರೆ. ಅದಕ್ಕಾಗಿ ಸಂಬಂಧಪಟ್ಟ ನಾವೆಲ್ಲರೂ ಅವ-ರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ. ಈ ಕಿರು ಹೊತ್ತಿಗೆಯು ಎಲ್ಲಾ ಆಸ್ತಿಕ ಮಹಾಶಯರಿಗೂ, ಪುರೋಹಿತ ವರ್ಗಕ್ಕೂ ಹಾಗೂ ವೈದಿಕಕರ್ಮಾಚರಣೆಯ ಬಗ್ಗೆ ಕಳಕಳಿ ಇರುವವರಿಗೂ ಉಪಯೋಗ ಆಗುತ್ತದೆಂಬ ಬಗ್ಗೆ ಸಂದೇಹವಿಲ್ಲ.

ಡಾ॥ ಎನ್. ಗೋಪಾಲರಾವ್
32, ಜಕ್ಕೂರು ಪ್ಲಾಂಟೇಷನ್,
ಬಳ್ಳಾರಿ ರಸ್ತೆ, ಬೆಂಗಳೂರು – 560064
ಮೊ. ಸಂ: 9740391916

ಮುನ್ನುಡಿ

ಶುಭಾಶಂಸನೆ

ಯಕ್ಷಪ್ರಶ್ನೆಯಲ್ಲಿ ಯಕ್ಷನು ಧರ್ಮರಾಜನಿಗೆ 122 ಪ್ರಶ್ನೆಗಳನ್ನು ಕೇಳುತ್ತಾನೆ. ಎಲ್ಲವೂ ನಮ್ಮ ಜೀವನಕ್ಕೆ ಅತ್ಯಗತ್ಯವಾದ ವಿಚಾರಗಳನ್ನು ತಿಳಿಸುತ್ತವೆ. ಅವುಗಳಲ್ಲಿ ನಮ್ಮನ್ನು ಮತ್ತೆ ಮತ್ತೆ ಯೋಚಿಸುವಂತೆ ಮಾಡುವ ಪ್ರಶ್ನೆ ಎಂದರೆ "ಕಿಂ ಆಶ್ಚರ್ಯಮ್?" ಈ ಪ್ರಪಂಚದಲ್ಲಿ ಯಾವುದು ಆಶ್ಚರ್ಯಕರ? ಎನ್ನುವುದು. ಅದಕ್ಕೆ ಧರ್ಮರಾಜನು ಹೇ ಯಕ್ಷ!

ಅಹನ್ಯಹನಿ ಭೂತಾನಿ ಗಚ್ಛಂತಿಹ ಯಮಾಲಯಂ ।
ಶೇಷಾಃ ಸ್ಥಾವರಮಿಚ್ಛಂತಿ ಕಿಮಾಶ್ಚರ್ಯಮತಃಪರಂ? ॥

"ಪ್ರತಿನಿತ್ಯವೂ ಪ್ರಾಣಿಗಳೂ–ಮನುಷ್ಯರೂ ಯಮನ ಅತಿಥಿಯಾಗಿ, ಯಮನ ಮನೆಗೆ ಹೋಗುತ್ತಲೇ ಇರುತ್ತಾರೆ. ಹಾಗಿದ್ದೂ ಕೂಡ, ಅವರನ್ನು ನೋಡಿಯೂ ಕೂಡ ಬದುಕುಳಿದವರು ಎರಡು ತುತ್ತು ಅನ್ನ ಒಳಕ್ಕೆ ಹೋಗಿದ್ದೇ ತಡ ತಾವು ಮಾತ್ರ ಶಾಶ್ವತ ಎಂದು ಭಾವಿಸುತ್ತಾರೆ. ಇದಕ್ಕಿಂತ ಇನ್ನೂ ಆಶ್ಚರ್ಯ ಬೇಕೆ?" ಎನ್ನುತ್ತಾನೆ.

ಹುಟ್ಟಿದವನಿಗೆ ಮರಣವು ("ಜಾತಸ್ಯಹಿ ಧ್ರುವೋ ಮೃತ್ಯುಃ") ಶತಃಸಿದ್ಧ ಎಂದು ಗೊತ್ತಾದ ಮೇಲೆ ನಾವು ನಮಗೂ, ನಮಗೆ ಈ ಭವ್ಯವಾದ ಜನ್ಮವನ್ನು ಕೊಟ್ಟ ಮಾತಾ–ಪಿತೃಗಳಿಗೂ ಏನಾದರೂ ಒಳ್ಳೆಯದನ್ನು ಮಾಡಬೇಕಲ್ಲವೇ? ಮನುಷ್ಯನಿಗೆ ಮನುಷ್ಯ ಜನ್ಮ ಬರುವುದು ತಾನು ಮಾಡಿದ ಉಪಕಾರಗಳಿಂದ. ಅಂತಹ ಮನುಷ್ಯನಿಗೆ ಹುಟ್ಟುತ್ತಲೇ ಅವನ ಮೇಲೆ ಮೂರು ಋಣಗಳು ಬಂದೊದುಗುತ್ತವೆ.

"ಜಾಯಮಾನೋವೈ ಬ್ರಾಹ್ಮಣಃ ತ್ರಿಭಿಃ ಋಣವಾನ್ ಜಾಯತೇ।
ಬ್ರಹ್ಮಚರ್ಯೇಣ ಋಷಿಭ್ಯಃ ಯಜ್ಞೇನ ದೇವೇಭ್ಯಃ ಪ್ರಜಯಾ ಪಿತೃಭ್ಯಃ"॥

ಅವು ಋಷಿಋಣ, ದೇವಋಣ ಮತ್ತು ಪಿತೃಋಣ ಎಂಬುದಾಗಿವೆ. ಕಲಿತವಿದ್ಯೆಯನ್ನು ಪ್ರಸಾರ ಮಾಡುವುದರಿಂದ ಋಷಿಋಣವನ್ನೂ, ಪೂಜಾಯಜ್ಞಾದಿಗಳಿಂದ ದೇವಋಣವನ್ನೂ, ಬದುಕಿರುವಾಗ ಮಾತಾಪಿತೃಗಳ ಶುಶ್ರೂಷೆಯಿಂದ, ವಯಸ್ಸಾಗಿ ದೈವಾಧೀನರಾದ ಮಾತಾಪಿತೃಗಳ ಔರ್ಧ್ವದೈಹಿಕ ಸತ್‌ಕ್ರಿಯೆಗಳಿಂದ (ಪವಿತ್ರವಾದ ದೇಹವನ್ನು ಪವಿತ್ರವಾದ ಅಗ್ನಿಯಲ್ಲಿ ಇಡುವುದು, ತರ್ಪಣ, ಪಿಂಡ ಪ್ರದಾನ, ಅಸ್ಥಿಸಂಚಯನ, ಶ್ರಾದ್ಧಕರ್ಮ) ಪಿತೃಋಣವನ್ನೂ ತೀರಿಸಿಕೊಳ್ಳುವುದು ಬಹಳ ಮುಖ್ಯ. ಭವ್ಯವಾದ ದೇಹವನ್ನು ಕೊಟ್ಟ, ನಮ್ಮ ಜೀವನವನ್ನು ಮುಂದಕ್ಕೆ ತಂದ, ನಮ್ಮ ಸಂತಸದಲ್ಲಿಯೇ ಅವರ ಸಂತಸವನ್ನು

ಕಂಡ ತಂದೆತಾಯಿಯರಿಗೆ ನಾವು ಅಷ್ಟನ್ನೂ ಮಾಡದೆ ಇದ್ದರೆ ನಾವು ಹೇಗೆ ತಾನೆ ಪುತ್ರ-ಪುತ್ರಿಯರು ಆಗುತ್ತೇವೆ. ಸಂಸ್ಕೃತದ ಪ್ರತಿಶಬ್ದಗಳೂ ತುಂಬ ಅರ್ಥವತ್ ಆಗಿವೆ. "ಪುಂ" ನಾಮ ನರಕಾತ್ ತ್ರಾಯತೇ ಇತಿ ಪುತ್ರಃ, ಪುತ್ರೀಃ. ಹಿರಿಯರ ಮರಣದ ನಂತರ, ಯಾವ ಮಕ್ಕಳು ಅವರ ತಾಯಿತಂದೆಗಳನ್ನು "ಪುಂ" ಎಂಬ ನರಕದಿಂದ ದಾಟಿಸುತ್ತಾರೋ ಅವರಿಗೆ ಪುತ್ರ ಅಥವಾ ಪುತ್ರೀ ಎಂಬ ಅನ್ವರ್ಥ ನಾಮ.

ಮನುಷ್ಯಜನ್ಮ ಸುಲಭವಾಗಿ ಬರುವುದಿಲ್ಲ. ಶ್ರೀ ಶಂಕರರು ವಿವೇಕ ಚೂಡಾಮಣಿಯಲ್ಲಿ

"ದುರ್ಲಭಂ ತ್ರಯಮೇವೈತತ್ ದೈವಾನುಗ್ರಹ ಹೇತುಕಂ ।
ಮನುಷ್ಯತ್ವಂ ಮುಮುಕ್ಷತ್ವಂ ಮಹಾಪುರುಷ ಸಂಶ್ರಯಃ ॥

ಮನುಷ್ಯಜನ್ಮ ಸಿಗುವುದು ಬಹಳ ದುರ್ಲಭ ಎಂದು ತಿಳಿಸಿ ಅದು ಬಂದಾಗ ಅದನ್ನು ಸದುಪಯೋಗ ಪಡಿಸಬೇಕು ಎಂದಿದ್ದಾರೆ. ಮನುಷ್ಯಜನ್ಮ ಪಡೆಯಲು ನಾವು ಜನ್ಮಾಂತರದಲ್ಲಿ ತುಂಬ ಪುಣ್ಯವನ್ನು ಮಾಡಿದ್ದೇವೆ. "ಹೇ ಮನುಷ್ಯ, ಮಹತ್ತರವಾದ ಪುಣ್ಯ ಎಂಬ ಧನರಾಶಿಯಿಂದ ಶರೀರ ಎಂಬ ಈ ದೋಣಿಯನ್ನು ಖರೀದಿಸಿ ಪಡೆದುಕೊಂಡಿದ್ದೀಯ. ಇದರ ಉದ್ದೇಶ ದುಃಖಸಾಗರವನ್ನು ನಾವು ದಾಟಲು ಹಾಗೂ ಬೇರೆಯವರನ್ನು ದಾಟಿಸಲು. ಆದ್ದರಿಂದ ಈ ದೋಣಿ ತೂತಾಗಿ, ಜೀರ್ಣವಾಗಿ ಬಿದ್ದು ಹೋಗುವಷ್ಟರಲ್ಲಿಯೇ ಈ ದುಃಖಸಾಗರದ ಇನ್ನೊಂದು ಪಾರದಲ್ಲಿರುವ, ಆನಂದ ಸಾಗರಕ್ಕೆ ದಾಟಿಕೋ" ಎಂಬ

"ಮಹತಾ ಪುಣ್ಯಪಣ್ಯೇನ ಕ್ರೀತೇಯಂ ಕಾಯಸೌಸ್ತ್ಯಯಾ ।
ದುಃಖಂ ಪಾರೋಧದೇಃ ಗಂತುಂ ತರ ಯಾವನ್ನಭಿದ್ಯತೇ" ॥

ಈ ಸುಭಾಷಿತ ಎಷ್ಟು ಮಾರ್ಮಿಕವಾಗಿದೆ. ಆದ್ದರಿಂದ ಯೋಗ್ಯರಾದ ನಾವು ಪಿತೃಸಂಬಂಧವಾದ ಈ ಕ್ರಿಯೆಗಳನ್ನು ಶಾಸ್ತ್ರದೃಷ್ಟಿಯಿಂದ ಮಾಡಿ ನಾವೂ ಪುನೀತರಾಗಿ ನಮ್ಮ ಮಾತಾಪಿತೃಗಳಿಗೂ ಸದ್ಗತಿಯನ್ನು ಉಂಟುಮಾಡೋಣ. ಶ್ರದ್ಧೆಯಿಂದ ನಮ್ಮ ಮಾತಾ ಪಿತೃಗಳಿಗೆ ನಾವು ಏನು ಅರ್ಪಿಸುವೆವೋ ಅದಕ್ಕೆ ಶ್ರಾದ್ಧ ಎಂದು ಹೆಸರು. "ಶ್ರದ್ಧಯಾ ಅನ್ನ ಹಿರಣ್ಯಾದೀನಾಂ ದ್ರವ್ಯಸ್ಯ ವಿಧಿಪೂರ್ವಕಂ ತ್ಯಾಗಃ - ಶ್ರಾದ್ಧಮ್"॥ ಅದು ಕೊಡಬೇಕು - ಇದು ಕೊಡಬೇಕು ಎಂದು ಉದ್ದೇಶವಲ್ಲ. ಯೋಗ್ಯತೆ ಇಲ್ಲದವರು ಒಂದು ಉದ್ಧರಣೆ ಎಳ್ಳು-ನೀರನ್ನು ಭಕ್ತಿಯಿಂದ ಅರ್ಪಿಸಿದರೂ ಮಾತಾಪಿತೃಗಳು ಸ್ವೀಕರಿಸಿಯೇ ಸ್ವೀಕರಿಸುತ್ತಾರೆ. ಯೋಗ್ಯತೆ ಇರುವವರು, ನಮ್ಮ ಪೂರ್ವಿಕರಿಂದ ಎಲ್ಲವೂ ಬಂದಿದೆ, ಅಂತಹ ವಸ್ತುಗಳನ್ನು ಪಿತೃರೂಪಿಯಾದ ಭಗವಂತನಿಗೆ, ತನ್ಮೂಲಕ ಈ ಸಮಾಜ-ಕ್ಕೆ ಅರ್ಪಿಸುತ್ತೇನೆ ಅಂದಾಗ ಕೃತಕೃತ್ಯತೆ, ಧನ್ಯತೆಯ ಭಾವನೆ ಮೂಡಿ ತನಗೆ

ತಾನೇ ಸಂತಸವನ್ನು ಅನುಭವಿಸುತ್ತಾನೆ. ಮರಣವನ್ನು ಪಡೆದವರಿಗೆ ಇದು ಬುತ್ತಿಯಾಗುತ್ತದೆ, ಸದ್ಗತಿಯಾಗುತ್ತದೆ.

'ಜೀವತೋ ವಾಕ್ಯಕರಣಾತ್ ಔರ್ಧ್ವದೈಹಿಕ ಸತ್ಕ್ರಿಯಾತ್ ।
ಗಯಾಯಾಂ ಪಿಂಡದಾನೇನ ತ್ರಿಭಿಃ ಪುತ್ರಸ್ಯ ಪುತ್ರತಾ' ॥

ಇರುವಾಗ ಅವರ ಮಾತುಗಳನ್ನು ಪಾಲಿಸುತ್ತಾ, ವಯಸ್ಸಾಗಿ ದೈವಾಧೀನರಾದಾಗ ಅಗ್ನಿ ಸಂಸ್ಕಾರಾದಿಗಳಿಂದ, ಮುಂದಕ್ಕೆ ಗಯೆಗೆ ಹೋಗಿ ಪಿಂಡದಾನ ಮಾಡುವುದರಿಂದ ಪುತ್ರಪುತ್ರಿಯರು ನಿಜವಾದ ಪುತ್ರಪುತ್ರಿಯರೇ ಆಗುತ್ತಾರೆ. ಆದ್ದರಿಂದ ಅಧಿಕಾರಿಗಳಾದ ಮಕ್ಕಳು ಶಾಸ್ತ್ರದಲ್ಲಿ ತಿಳಿಸಿದಂತೆ ವಿಷಯಗಳನ್ನು ಮನಸ್ಸಿಗೆ ತಂದುಕೊಂಡು ಶ್ರದ್ಧಾ ಭಕ್ತಿಗಳಿಂದ ನೆರವೇರಿಸಬೇಕು. ಅನೇಕ ಮಹಾತ್ಮರು ಒಳ್ಳೆ ಒಳ್ಳೆಯ ಪುಸ್ತಕಗಳನ್ನು ಮುದ್ರಿಸಿ ಸಾಮಾನ್ಯ ಜನರಿಗೂ ತಿಳಿಯುವಂತೆ ಪಿತೃಕರ್ಮ ಮತ್ತು ಶ್ರಾದ್ಧಪ್ರಯೋಗಗಳನ್ನು ಬರೆದಿದ್ದಾರೆ. ಇಂದಿನ ಈ ಹೊಸಯುಗದಲ್ಲಿ ಮುಖ್ಯವಾದ ಮಂತ್ರಗಳನ್ನು ಬಿಡದೆ, ದಾನಾದಿಗಳನ್ನು ವಿಹಿತವಾಗಿ ಯೋಗ್ಯರಿಗೆ, ಸತ್ಪಾತ್ರರಿಗೆ ಕೊಟ್ಟು ತನ್ಮೂಲಕ ತಮಗೂ ತಮ್ಮ ಹಿರಿಯರಿಗೂ ಹಿತವನ್ನೇ ಮಾಡಿಕೊಳ್ಳಲಿ.

ಶ್ರೀ ಶ್ರೀನಿವಾಸಮೂರ್ತಿಗಳು ಬಹಳ ಶ್ರಮವಹಿಸಿ ಅನೇಕ ಉಪಯುಕ್ತ ವಿಚಾರಗಳನ್ನು ಕಲೆಹಾಕಿ, ಈ ರೀತಿಯ ಪುಸ್ತಕವನ್ನು ಹೊರತರುತ್ತಿರುವುದು ಬಹಳ ಉತ್ತಮವಾದ, ಪುಣ್ಯಪ್ರದವಾದ ಕೆಲಸ. ಹಾಗೂ ನನ್ನ ಮಹತ್ತರ ಅಪೇಕ್ಷೆಯಂತೆ ಇದರ ಜೊತೆಯಲ್ಲಿ ವೇ॥ ಅಶ್ವತ್ಥನಾರಾಯಣ ಅವಧಾನಿಗಳು, ಪೂಜ್ಯ ವೇ॥ ಶ್ಯಾಮಭಟ್ಟರ್, ವೇ॥ ಕಪನೀಪತಯ್ಯ ಮತ್ತು ಪ್ರೊ. ಆರ್.ಕೆ. ಶ್ರೀಕಂಠಕುಮಾರಸ್ವಾಮಿ, ಪರಮಪೂಜ್ಯ ರಂಗಪ್ರಿಯಸ್ವಾಮಿಗಳ ಮುನ್ನುಡಿಗಳಿಂದ ಆಯ್ದ ಕೆಲವು ಭಾಗಗಳನ್ನು ಸ್ವೀಕರಿಸಿರುವುದು ಈ ಪುಸ್ತಕದ ಯೋಗ್ಯತೆಯನ್ನು ಹೆಚ್ಚಿಸಲಿದೆ ಎಂದರೆ ಅತಿಶಯೋಕ್ತಿಯಲ್ಲ. ಆ ಎಲ್ಲಾ ಮಹಾನುಭಾವರಿಗೆ ನನ್ನ ನಮನಗಳು.

ಯೋಗ್ಯ ಅಧಿಕಾರಿಗಳು ಇವುಗಳನ್ನು ಓದಿ, ಮನನ ಮಾಡಿ ಪಿತೃಕೈಂಕರ್ಯವನ್ನು, ಭಕ್ತಿಯಿಂದ ಮಾಡಿ ಕೃತಕೃತ್ಯರಾಗಲಿ. ಇಷ್ಟು ಉಪಯೋಗವಾಗುವ, ಮಾಡಬಯಸುವ ಅಧಿಕಾರಿಗಳಿಗೆ ದಿಕ್ಕನ್ನು ತೋರಿಸುವ ಈ ಪುಸ್ತಕವನ್ನು ಪ್ರಕಟಿಸಲು ನೆರವಾಗುತ್ತಿರುವ ಕೀರ್ತಿಶೇಷ ಶ್ರೀ ಮಾಧವರಾಯರ ಸುಪುತ್ರರಾದ ಶ್ರೀ ರಮೇಶ್, ಶ್ರೀ ರಾಮಚಂದ್ರ, ಶ್ರೀ ರಾಘವೇಂದ್ರ, ಇವರುಗಳಿಗೆ ವಿಶ್ವೇದೇವಾದಿ ಪಿತೃದೇವತೆಗಳು ಸನ್ಮಂಗಳವನ್ನು ಉಂಟುಮಾಡಲಿ.

ಶ್ರೀ ಎಂ.ಎನ್.ಚಂದ್ರಶೇಖರ
ನಿವೃತ್ತ ಸಂಸ್ಕೃತ ಅಧ್ಯಾಪಕರು, ಶೇಷಾದ್ರಿಪುರಂ ಕಾಲೇಜು
ಬೆಂಗಳೂರು – 03

ಪಿತೃಕಲ್ಪಕ್ಕೆ ಸಂಬಂಧಿಸಿದ ಕೆಲವು ಸ್ವಾರಸ್ಯ ಘಟನೆಗಳು

ಶರಶಯ್ಯೆಯಲ್ಲಿ ಮಲಗಿರುವ ಭೀಷ್ಮರನ್ನು ಧರ್ಮರಾಜನು ಕಂಡು, ತನಗೆ ಆಪದ್ಧರ್ಮ, ರಾಜಧರ್ಮ, ಮೋಕ್ಷಧರ್ಮಗಳ ಬಗ್ಗೆ ಉಪದೇಶಿಸಬೇಕೆಂದು ಕಳಕಳಿಯಿಂದ ಪ್ರಾರ್ಥಿಸುತ್ತಾನೆ. ಆ ಸಂದರ್ಭದಲ್ಲಿ ಭೀಷ್ಮರ ಮನಸ್ಸು ಕೃಷ್ಣನ ಸಾನ್ನಿಧ್ಯದಿಂದ ಹಾಗೂ ಅರ್ಜುನ ಕುಡಿಸಿದ ಗಂಗೆಯಿಂದ ಸ್ವಚ್ಛವಾಗಿದೆ ಪವಿತ್ರವಾಗಿದೆ. ಜೀವನದಲ್ಲಿ ನಡೆದ ಅನೇಕ ಘಟನೆಗಳ ಮೂಲಕ ಧರ್ಮರಾಜನಿಗೆ ಧರ್ಮಪ್ರಜ್ಞೆಯನ್ನು ಉಂಟುಮಾಡುತ್ತಾರೆ. ಪಿತೃಮೇಧ, ಶ್ರಾದ್ಧಗಳ ಬಗ್ಗೆ ಕೇಳಿದಾಗ ಭೀಷ್ಮರು–

"ಪಿತರೋ ಧರ್ಮಕಾಮಸ್ಯ ಪ್ರಜಾಕಾಮಸ್ಯ ಚ ಪ್ರಜಾಂ ।
ಪುಷ್ಟಿಕಾಮಸ್ಯ ಪುಷ್ಟಿಂ ಚ ಪ್ರಯಚ್ಛಂತಿ ಯುಧಿಷ್ಠಿರ" ॥

ಹೇ ಧರ್ಮಜ! ಪಿತೃಗಳಿಗೆ ಅಧಿಕಾರೀ ಮಕ್ಕಳು ಕೊಡುವ ಪಿಂಡದಾನ, ಜಲತರ್ಪಣ, ಪಾನತರ್ಪಣ ಹೋಮಗಳಿಂದ ಸಂತುಷ್ಟರಾಗಿ, ಅವರು ತಮ್ಮ ತಮ್ಮ ವಂಶದವರಿಗೆ ಬೇಕು ಬೇಕಾದ ಐಶ್ವರ್ಯ, ಸಂತತಿ, ಮನೆ, ಧರ್ಮದಿಂದ ಬರುವ ಪುಣ್ಯ ಮುಂತಾದ ಎಲ್ಲವನ್ನೂ ದಯಪಾಲಿಸುತ್ತಾರೆ.

ನನ್ನ ಜೀವನದಲ್ಲೇ ನಡೆದ ಈ ಘಟನೆಯನ್ನು ನಿನ್ನ ನಂಬಿಕೆಗಾಗಿ ತಿಳಿಸುತ್ತೇನೆ ಎನ್ನುತ್ತಾರೆ ಭೀಷ್ಮರು. ಹೇ ಯಮನಂದನ! ನನ್ನ ತಂದೆ ಶಂತನು ಮಹಾರಾಜನು ಚೆನ್ನಾಗಿ ರಾಜ್ಯಭಾರ ಮಾಡಿ ಮರಣವನ್ನಪ್ಪಿದ. ನಾನು ಶಾಸ್ತ್ರದಲ್ಲಿ ಹೇಳಿದಂತೆ ಪಿತೃಕೆಲಸಗಳನ್ನು ಮಾಡಿದೆ. ಆಗ ಧರ್ಭೆಯ ಮೇಲೆ ಮಂತ್ರವತ್ತಾಗಿ ಪಿಂಡಪ್ರದಾನ ಮಾಡುತ್ತಿದ್ದಾಗ ನನ್ನ ತಂದೆಯ ಕೈಗಳು ದರ್ಭೆಯ ಮೇಲೆ ಚಾಚಲ್ಪಟ್ಟಿದ್ದನ್ನು ನೋಡಿ ನಾನು ಆಶ್ಚರ್ಯಚಕಿತನಾದೆ. ನನ್ನ ಕೈಯಲ್ಲಿಡು ನಾನು ಸಂತೋಷದಿಂದ ಸ್ವೀಕರಿಸುತ್ತೇನೆ ಎಂದು ನನ್ನ ತಂದೆ ಹೇಳಿದಾಗ ನಾನು ಇಡಲಿಲ್ಲ. ಅಪ್ಪ! ಅಪ್ಪ! ಇದು ಯುಕ್ತವಲ್ಲ. ಶಾಸ್ತ್ರದಲ್ಲಿ ಹೇಳಿದಂತೆ ನಾನು ಮಂತ್ರೋಚ್ಚಾರಣೆ ಮಾಡಿ ಪವಿತ್ರವಾದ ದರ್ಭೆಯ ಮೇಲೇ ಇಡುತ್ತೇನೆ. ಆ ಮೇಲೆ ನೀವು ಸ್ವೀಕರಿಸಿ ಅಂದಾಗ ಅವರು ಸಂತಸ ಪಟ್ಟು ನುಡಿದರು. ನಿನ್ನ ಮೇಲೆ ನನಗೆ ಬಹಳ ಮಮತೆಯಿದೆ ನಿನ್ನನ್ನು ಪರೀಕ್ಷಿಸಿದೆ. ನೀನು ಶಾಸ್ತ್ರದಂತೆಯೇ ಮಾಡು. ಆಮೇಲೆಯೇ ನಾನು ಸ್ವೀಕರಿಸುವೆ. ಇದರಿಂದ ಜನರಿಗೂ ಶಾಸ್ತ್ರದ ವಿಷಯದಲ್ಲಿ ಧರ್ಮದ ವಿಚಾರದಲ್ಲಿ ಆಸಕ್ತಿ ಮೂಡುತ್ತದೆ ಎನ್ನುತ್ತಾನೆ ಶಂತನು.

"ತ್ವಯಾ ದಾಯಾದವಾನಸ್ಮಿ ಕೃತಾರ್ಥೋಮುತ್ರೇಹ ಚ ।
ಸತ್ಪುತ್ರೇಣ ತ್ವಯಾಪುತ್ರ ಧರ್ಮಜ್ಞೇನ ವಿಪಶ್ಚಿತಾ ॥" (ಹರಿವಂಶ. 16)

ಶ್ರಾದ್ಧದ ಮಹಾತ್ಮೆ

ಸಪ್ತ ವ್ಯಾಧಾ ದಶಾರ್ಣೇಷು ಮೃಗಾಃಕಾಲಾಂಜನೇ ಗಿರೌ ।
ಚಕ್ರವಾಕಾಶರದ್ವೀಪೇ ಹಂಸಾಃ ಸರಸಿ ಮಾನಸೇ॥
ತೇಭಿಜಾತಾಃ ಕುರುಕ್ಷೇತ್ರೇ ಬ್ರಾಹ್ಮಣಾ ವೇದಪಾರಗಾಃ।
ಪ್ರಸ್ಥಿತಾ ದೀರ್ಘಮಧ್ವಾನಂ ಯೂಯಂ ತೇಭ್ಯೋ ವಸೀದಥ ॥

ಬಹು ಹಿಂದೆ ಗಾರ್ಗ್ಯ ಎಂಬ ಮಹಾನ್ ಗುರು ಇದ್ದರು. ಇವರು ತಮ್ಮ ಆಶ್ರಮದಲ್ಲಿ ಅನೇಕ ವಿದ್ಯಾರ್ಥಿಗಳಿಗೆ ಪಾಠ ಹೇಳುತ್ತಿದ್ದರು. ಅವರಲ್ಲಿ ಏಳು ಜನ ವಿದ್ಯಾರ್ಥಿಗಳು ಜೊತೆಯಾಗಿ ಗುರುಗಳ ಹಸು ಮತ್ತು ಕರುವನ್ನು ಮೇಯಿಸಿಕೊಂಡು ಬರಲು ಹೋಗುತ್ತಿದ್ದರು. ಆ ವರ್ಷ ಬಹಳ ಕ್ಷಾಮ. ಎಲ್ಲೂ ನೀರಾಗಲಿ, ಹುಲ್ಲಾಗಲಿ, ಸಿಗುತ್ತಲೇ ಇರಲಿಲ್ಲ. ಚಿಕ್ಕವಯಸ್ಸಿನ ಇವರಿಗೂ ತುಂಬ ಹಸಿವು – ಬಾಯಾರಿಕೆಯಾಗಿದೆ. "ಬುಭುಕ್ಷಿತ: ಕಿಂ ನ ಕರೋತಿ ಪಾಪಂ" ಅನ್ನುವಂತೆ, ಇವರಲ್ಲಿ ಕೆಲವರಿಗೆ ದುರ್ಬುದ್ಧಿ ಉಂಟಾಗಿ ಹಸುವನ್ನು ಕೊಂದು, ತಮ್ಮ ಹಸಿವನ್ನು ತೀರಿಸಬೇಕೆಂಬ ಭಾವನೆ ಉಂಟಾಯಿತು. ಆದರೆ ಅವರಲ್ಲಿ ಒಬ್ಬ, ಇದು ಖಂಡಿತಾ ಅಯುಕ್ತ, ಗೋವಧೆ ಒಳ್ಳೆಯದಲ್ಲ. ಗುರುಗಳ ಈ ಧೇನುವನ್ನು ಕೊಲ್ಲುವುದು ಇನ್ನೂ ತಪ್ಪು ಎಂದರೂ ಅವರು ಕೇಳಲಿಲ್ಲ. ಆಗ ಅವನು ಪಿತೃ ಉದ್ದೇಶದಿಂದ ಪಿತೃದೇವತೆಗಳಿಗೆ ಇದನ್ನು ಅರ್ಪಿಸಿ, ಉಳಿದಿದ್ದನ್ನು ಪ್ರಸಾದರೂಪದಲ್ಲಿ ಭಕ್ಷಿಸುತ್ತೇವೆ ಎಂಬ ಕಾರಣದಿಂದ ಭಕ್ಷಿಸಿ, ಆಗ ಬರಬಹುದಾದ ದೋಷ, ಪಾಪ ಕಡಿಮೆಯಾಗಿ ಮುಂದಕ್ಕೆ ಒಳ್ಳೆಯದಾಗುತ್ತದೆ ಎನ್ನುತ್ತಾನೆ.

ಉಳಿದವರು ಇಷ್ಟಾದರೂ ರಿಯಾಯಿತಿ ಸಿಕ್ಕಿತಲ್ಲ ಎಂಬ ಸಂತಸದಿಂದ ಪಿತೃದೇವತೆಗಳನ್ನು ಪೂಜಿಸಿ, ಅವರಿಗೂ ನಿವೇದಿಸಿ ತಾವೂ ತಿನ್ನುತ್ತಾರೆ. ಸದ್ಯ ಜೀವ ಉಳಿಯಿತಲ್ಲ ಎಂಬ ಭಾವನೆಯಿಂದ, ಆಶ್ರಮಕ್ಕೆ ಹಿಂದಿರುಗಿ ಕರುವನ್ನು ಗುರುಗಳಿಗೆ ಅರ್ಪಿಸುತ್ತಾರೆ. ಹಸುವನ್ನು ಕಾಡಿನಲ್ಲಿ ಹುಲಿ ತಿಂದು ಹೋಯಿತು ಎಂದಾಗ ಮುಗ್ಧರಾದ ಗುರುಗಳು ನಂಬಿ ಎಂದಿನಂತೆ ತಮ್ಮ ಪಾಠಪ್ರವಚನದಲ್ಲಿ ತಲ್ಲೀನರಾಗುತ್ತಾರೆ.

ಮುಂದಕ್ಕೆ ಕಾಲಕ್ರಮದಲ್ಲಿ ಈ ಏಳು ಜನಗಳು ಸತ್ತನಂತರ, ಗೋವಧೆ, ಗುರುವಿನ ದ್ರೋಹ, ಸುಳ್ಳು ಹೇಳಿದ ಪರಿಣಾಮವಾಗಿ ಅನೇಕಜನ್ಮಗಳನ್ನು ಪಡೆಯುತ್ತಾರೆ. ಹಸುವನ್ನು ಕೊಂದರೂ ಪಿತೃ ಉದ್ದೇಶಕ್ಕಾಗಿ ಮಾಡಿದ ಒಂದೇ ಒಂದು ಪುಣ್ಯದ ಫಲವಾಗಿ ಎಲ್ಲ ಜನ್ಮಗಳಲ್ಲೂ ಹಿಂದೆ ಮಾಡಿದ ಪಾಪದ ಅರಿವಾಗಿ ಬಹಳವಾಗಿ ಪಶ್ಚಾತ್ತಾಪ ಪಡುತ್ತಾರೆ. ಎಂತಹ ದುರ್ಲಭ ಜನ್ಮವನ್ನು "ಜಂತೂನಾಂ ನರಜನ್ಮ ದುರ್ಲಭಂ" ಎಂಬಂತೆ ಪಡೆದೂ ಈ ಘೋರ ತಪ್ಪನ್ನು ಮಾಡಿದ್ದೆವಲ್ಲ ಎಂದು ಕೊರಗಿ ಆಯಾ ಜನ್ಮದಲ್ಲಿ ಉದಾತ್ತವಾಗಿ ನಡೆದು ಕೊಳ್ಳುತ್ತಾರೆ. ಹಾಗಾಗಿ ಅವರು ದಶಾರ್ಣದೇಶದಲ್ಲಿ ಸಪ್ತವ್ಯಾಧರಾಗಿ ಒಂದು ಜನ್ಮದಲ್ಲಿ ಹುಟ್ಟುತ್ತಾರೆ. ನಂತರ ಕಾಳಾಂಜನ ಎಂಬ ಪರ್ವತದಲ್ಲಿ ಜಿಂಕೆಗಳಾಗಿ,

ಮುಂದೆ ಸ್ವಚ್ಛವಾದ ಮಾನಸಸರೋವರದಲ್ಲಿ ಹಂಸಪಕ್ಷಿಗಳಾಗಿ ಆಮೇಲೆ ಕುರುಕ್ಷೇತ್ರದಲ್ಲಿ ವೇದವಿದ್ಯಾವಂತರಾಗಿ ಜನ್ಮಪಡೆಯುತ್ತಾರೆ.

ಹಂಸ ಪಕ್ಷಿಗಳಾಗಿ ಹುಟ್ಟಿದಾಗ, ವಿಭ್ರಾಜ ರಾಜನ ವೈಭವವನ್ನು ಅವನ ಮಂತ್ರಿಗಳ ಶ್ರೇಷ್ಠತೆಯನ್ನು ಕಂಡು ಮೂರು ಹಂಸಗಳಿಗೆ ಅವರ ಹಾಗೆ ಜೀವನ ಬಂದರೆ ಚೆನ್ನ ಎಂಬ ಭಾವನೆ ಬೇರೂರಿತು."ಯದ್ ಭಾವಂ ತದ್‌ಭವತಿ" ಅಲ್ಲವೆ. ಮುಂದಿನ ಜನ್ಮದಲ್ಲಿ ಆ ಮೂವರು ರಾಜನಾಗಿಯೂ, ಮಂತ್ರಿಗಳಾಗಿಯೂ ಹುಟ್ಟುತ್ತಾರೆ. ಆದರೆ ಉಳಿದವರು ಪುಣ್ಯವಶದಿಂದ ಲೌಕಿಕವಿಷಯದಲ್ಲಿ ಆಸಕ್ತಿ ಇಲ್ಲದ ಬ್ರಹ್ಮಚಿಂತನೆ ಮಾಡುವ ಮಹಾಯೋಗಿಗಳಾಗಿ, ಒಬ್ಬ ಬ್ರಾಹ್ಮಣ ದಂಪತಿಗಳಿಗೆ ಮಕ್ಕಳಾಗಿ ಹುಟ್ಟುತ್ತಾರೆ. ಬ್ರಹ್ಮಚರ್ಯ ಆಶ್ರಮದಲ್ಲಿ ಎಲ್ಲವನ್ನೂ ಕಲಿತು ತಮಗೆ ಸನ್ಯಾಸಾಶ್ರಮವನ್ನು ಸ್ವೀಕರಿಸಲು ಅವಕಾಶ ಮಾಡಿಕೊಡಿ ಎಂದು ತಂದೆ ತಾಯಿಗಳನ್ನು ಕೇಳುತ್ತಾರೆ. ಆಗ ಅವರು ನಿಮ್ಮಂತಹ ದೃಢಕಾಯ, ಬುದ್ಧಿವಂತ ಮಕ್ಕಳನ್ನು ಪಡೆದೂ ನಮ್ಮ ಬಡತನ ನಿವಾರಣೆ ಆಗಲೇ ಇಲ್ಲವಲ್ಲ. ನಿಮ್ಮಂತಹ ಮಕ್ಕಳನ್ನು ಪಡೆದೂ ನಾವೂ ನಿರ್ಗತಿಕರಾದರೆ ಮುಂದಕ್ಕೆ ನಮ್ಮ ಗತಿಯಾದರೂ ಏನು ಎಂದು ಚಿಂತಿಸಲು ಪ್ರಾರಂಭಿಸುತ್ತಾರೆ.

ಆಗ ಆ ನಾಲ್ವರೂ, ಜನ್ಮಾಂತರ ಸ್ಮರಣಶಕ್ತಿಯ ಪ್ರಭಾವದಿಂದ ಪೂಜ್ಯರೇ! ನಮಗೆ ಪ್ರವೃತ್ತಿ ಮಾರ್ಗದಲ್ಲಿ ಆಸಕ್ತಿಯಿಲ್ಲ. ನಾವು ನಿವೃತ್ತಿ ಮಾರ್ಗವನ್ನು ಅನುಸ-ರಿಸಲು ಉತ್ಸುಕರಾಗಿದ್ದೇವೆ. ನಿಮಗೆ "ಸಪ್ತವ್ಯಾಧಾ ದಶಾರ್ಣೇಷು....." ಎಂಬ ಈ ಅಮೋಘ ಶ್ಲೋಕವನ್ನು ಹೇಳಿಕೊಡುತ್ತೇವೆ. ನೀವು ಇದನ್ನು ಕಂಠಪಾಠಮಾಡಿ. ಈ ದೇಶದ ರಾಜನಾದ ಬ್ರಹ್ಮದತ್ತ ಮತ್ತು ಅವನ ಮಂತ್ರಿಗಳ ಸಮ್ಮುಖದಲ್ಲಿ ಹೇಳಿ. ನಿಮಗೆ ನಮ್ಮಿಂದ ಏನು ಅನುಕೂಲವಾಗಬೇಕಿತ್ತೋ ಅದೆಲ್ಲವೂ ಆಗಿ, ನೀವು ಸುಖಜೀವನ ನಡೆಸಬಹುದು ಎಂದು ಹೇಳಿ ಕಾಡಿಗೆ ಹೊರಟು ಹೋಗುತ್ತಾರೆ.

ಇತ್ತ ರಾಜ ದಂಪತಿಗಳಾದ ಬ್ರಹ್ಮದತ್ತ- ಸನ್ಮತಿಯರು ಮಂತ್ರಿಗಳೊಂದಿಗೆ ಬರುತ್ತಿದ್ದಾಗ, ವೃದ್ಧ ತಾಪಸ ದಂಪತಿಗಳು ಮುಂದೆ ಬಂದು " ಸಪ್ತವ್ಯಾಧಾ ದಶಾರ್ಣೇಷು....." ಎಂಬ ಶ್ಲೋಕವನ್ನು ಹೇಳಿದೊಡನೆಯೇ, ಜನ್ಮಾಂತರದ ವೃತ್ತಾಂತಗಳು ಸ್ಮರಣೆಗೆ ಬಂದು, ಶೋಕ, ಹರ್ಷಚಿತ್ತರಾಗುತ್ತಾರೆ. ವೃದ್ಧದಂಪತಿಗಳಿಗೆ ಜೀವನಕ್ಕೆ ಆಗುವಷ್ಟು ಎಲ್ಲ ಸಂಪತ್ತುಗಳನ್ನು ಕೊಟ್ಟು ವೈರಾಗದಿಂದ ಕೂಡಿ, ತಮ್ಮ ಹಿಂದಿನ ಬಂಧುಗಳನ್ನು ಸಂಧಿಸಿ ಮೋಕ್ಷಸಾಮ್ರಾಜ್ಯವನ್ನೇ ಪಡೆಯುತ್ತಾರೆ. ಆದ್ದರಿಂದ ಶ್ರಾದ್ಧವೆಂಬುದು ಒಂದು ಯಜ್ಞ, ಅದು ಪಿತೃಯಜ್ಞ, ನಾವು ಈ ಯಜ್ಞದ ಮೂಲಕ ಪಿತೃದೇವತೆಗಳನ್ನು ಸಂತಸಪಡಿಸಿದರೆ ಉಳಿದ ಎಲ್ಲ ದೇವತೆಗಳೂ ಅಲ್ಲಿಗೇ ಬಂದು ಹರಸುತ್ತಾರೆ. ಹಿರಿಯರಿಗೆ ಕೃತಜ್ಞತೆಯನ್ನು ಅರ್ಪಿಸಿ ಕೃತಕೃತ್ಯರಾಗೋಣ.

ಪ್ರೊ. ಎಂ.ಎನ್.ಚಂದ್ರಶೇಖರ
ಸಂಸ್ಕೃತ ಪ್ರಾಧ್ಯಾಪಕರು

ಲೇಖಕರ ನುಡಿ

“ಮಹಾ ಗಣಪತಯೇ ನಮಃ”

“ಶೃತಿ ಸ್ಮೃತ್ಯುದಿತಂ ಧರ್ಮಮನುತಿಷ್ಠನ್ ಹಿ ಮಾನವಃ।
ಇಹ ಕೀರ್ತಿಮವಾಪ್ನೋತಿ ಪ್ರೇತ್ಯಚಾನುತ್ತಮಾಂಗತಿಃ” ॥

ಶೃತಿ ಸ್ಮೃತಿಗಳಿಂದ ವಿಧಿಸಲ್ಪಟ್ಟ ಧರ್ಮವನ್ನು ಯಾವಾತನು ನಿಷ್ಠೆಯಿಂದ ಅನುಷ್ಠಿಸುವನೋ ಆತನಿಗೆ ಎಲ್ಲ ವಿಧದ ಒಳ್ಳೆಯ ಕೀರ್ತಿಯೂ ಉಂಟಾಗಿ ಕೊನೆಯಲ್ಲಿ ನಿರತಿಶಯ ಸುಖಪ್ರಾಪ್ತಿ ರೂಪವಾದ ಮೋಕ್ಷವೂ ಸಿಗುವುದು ಎಂದು ಶಾಸ್ತ್ರಗಳು ಹೇಳುತ್ತವೆ.

ಶಾಸ್ತ್ರಗಳಲ್ಲಿ ಈ ಭೂಮಿಯಲ್ಲಿ ಜನಿಸಿದ ಪ್ರತಿಯೊಬ್ಬ ಮಾನವನಿಗೂ ಮಾಡಲೇಬೇಕಾದ ಹಾಗೂ ಬಿಡಲೇಬೇಕಾದ ಕರ್ಮಗಳನ್ನು, ಕಾಮ್ಯಕರ್ಮಗಳನ್ನೂ, ಪ್ರಾಯಶ್ಚಿತ್ತ ಕರ್ಮಗಳನ್ನೂ, ನಾನಾ ರೀತಿಯಿಂದ ಬೋಧಿಸಲಾಗಿದೆ. ಅವೇ ವರ್ಣಾಶ್ರಮ ಧರ್ಮಗಳು. ಅವರವರ ಧರ್ಮಗಳು ಅವರವರಿಗೆ ಪರಮಶ್ರೇಷ್ಠವಾದವುಗಳಾಗಿವೆ. ಅವುಗಳಲ್ಲಿ ಮೇಲೂ-ಕೀಳುಗಳೆಂದು ಭಾವಿಸಿ ಅನ್ಯಧರ್ಮವನ್ನವಲಂಭಿಸುವುದು ಮಹಾಪರಾಧ. “ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ” ಎಂಬಂತೆ ಸ್ವಧರ್ಮವೇ ಅತ್ಯಂತ ಶ್ರೇಷ್ಠವೇ ಹೌದು.

ಈ ನಿಟ್ಟಿನಲ್ಲಿ ಹೋದಾಗ ನನಗೆ ನಮ್ಮ ಪೂಜ್ಯ ಗುರುಗಳಾದ ಚಿಂತಾಮಣಿಯಲ್ಲಿನ ವೇ॥ಬ್ರ॥ಶ್ರೀ॥ ವೆಂಕಟೇಶಶಾಸ್ತ್ರಿಗಳು ಅನೇಕ ವಿಷಯಗಳನ್ನು ತಿಳಿಸಿದ್ದರಲ್ಲದೆ ಆಧಾರಸಹಿತವಾಗಿ ವಿವರಿಸುತ್ತಿದ್ದರು. ಆದರೆ ಆ ಸಂದರ್ಭದಲ್ಲಿ ನನಗೆ ಅವರ ವಿಚಾರಗಳನ್ನು ಸೂಕ್ಷ್ಮವಾಗಿ ಗಮನಿಸಲಾಗುತ್ತಿರಲಿಲ್ಲ. ನಂತರ ನಮ್ಮ ತಂದೆಯವರು ನಿಧನರಾದಾಗ ನನ್ನ ಗುರುಗಳು ಅವರೇ ಸ್ವತಃಬಂದು ಆಯಾ ಸಂದರ್ಭದಲ್ಲಿ ಮಾಡುವ ಕರ್ಮಗಳ ವಿವರಣೆಯನ್ನು ನೀಡುತ್ತಿದ್ದರು. ಆಗ ಕರ್ಮಗಳ ಬಗ್ಗೆ ನನಗೆ ಹೆಚ್ಚಿನ ಆಸಕ್ತಿಯುಂಟಾಗಿ ಗುರುಗಳ ಬಳಿಗೆ ಹೋದಾಗಲೆಲ್ಲಾ ಅನೇಕ ವಿಚಾರಗಳನ್ನು ಚರ್ಚಿಸಿ ಸೂಕ್ತ ಪರಿಹಾರಗಳನ್ನು ತಿಳಿದುಕೊಳ್ಳುತ್ತಿದ್ದೆ.

ಆದರೆ ಯಾರ ಬಳಿಯೂ ಆ ವಿಚಾರವನ್ನು ಪ್ರಸ್ತಾಪಿಸುವಂತಹ ಅವಕಾಶ ನನಗೆ ದೊರಕಲಿಲ್ಲ. ದಿ: 30-06-2013ನೇ ದಿನದಂದು ಶ್ರೀಯುತ ಮಾಧವರಾಯರು ಸ್ವರ್ಗಸ್ಥರಾಗಿದ್ದು ಅವರ ಪುತ್ರರಾದ ರಮೇಶ್ ರವರು ನನಗೆ ಕರೆಮಾಡಿದರು. ಆಗ ನನ್ನ ಗುರುಗಳು ನನಗೆ ತಿಳಿಸಿದ ಎಲ್ಲಾ ವಿಚಾರಗಳನ್ನು (ಮೊದಲನೆಯ ದಿನದ ಬಗ್ಗೆ) ತಿಳಿಸಿದೆ.

ಆಗ ಅವರುಗಳು (ಶ್ರೀಯುತ ಎಂ.ರಮೇಶ್, ಎಂ. ರಾಮಚಂದ್ರ, ಎಂ. ರಾಘವೇಂದ್ರ) ಪುರೋಹಿತರೊಂದಿಗೆ ಸಹಕರಿಸಿ ಅದೇ-ರೀತಿ ನಡೆಸಿಕೊಡಬೇಕೆಂದು ವಿನಂತಿಸಿಕೊಂಡರು. ಅಂದಿನಿಂದ ಅವರು ಮಾಡುವ ಕಾರ್ಯಗಳು ಹಾಗೂ ಅವರುಗಳ ಶ್ರದ್ಧೆಯನ್ನು ಗಮನಿಸಿ ಅನೇಕ ಗ್ರಂಥಗಳನ್ನು ವಿಮರ್ಶಿಸಿ ಹಾಗೂ ಅನೇಕ ವಿದ್ವಾಂಸರನ್ನು ಸಂಪರ್ಕಿಸಿ ಪಿತೃಕಾರ್ಯಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ತಿಳಿದು ಅವರಿಗೆ ವಿವರಿಸಿದಾಗ ಅವರುಗಳು ಯಾವುದಕ್ಕೂ ಬೇಸರಗೊಳ್ಳದೆ ಅತ್ಯಂತ ಶ್ರದ್ಧೆಯಿಂದ ಪಿತೃಕಾರ್ಯವನ್ನು ನೆರವೇರಿಸಿದರು. ಇದು ನಿಜಕ್ಕೂ ನನಗೂ ಸಹ ಮಾದರಿಯಾಗಿದೆ ಎಂದರೆ ಸುಳ್ಳಲ್ಲ. ನಂತರ ಪ್ರತಿ ಮಾಸಿಕಗಳಲ್ಲಿ ಊನಮಾಸಿಕಗಳಲ್ಲಿಯೂ ಅದೇ ಶ್ರದ್ಧೆಯಿಂದ ಇದ್ದು ಸಾಂವತ್ಸರಿಕ ವಿಮೋಕದಲ್ಲಿ ಇದರ ಬಗ್ಗೆ ಕಿರು ಪರಿಚಯವಿರುವ ಒಂದು ಪುಸ್ತಕವನ್ನು ಬರೆದುಕೊಟ್ಟರೆ ಎಲ್ಲರಿಗೂ ಉಪಯೋಗವಾಗುತ್ತದೆಂದು ಶ್ರೀಯುತರು ಹಾಗೂ ಅವರ ಚಿಕ್ಕಪ್ಪನವರಾದ ಶ್ರೀ ಎನ್. ಗೋಪಾಲರಾಯರು ವಿನಂತಿಸಿಕೊಂಡಾಗ ನಾನು ನನ್ನ ಅಲ್ಪ ಜ್ಞಾನದಲ್ಲಿ ನನಗೆ ತಿಳಿದಷ್ಟು ವಿಷಯಗಳನ್ನು ಅನೇಕ ಗ್ರಂಥಗಳಲ್ಲಿ, ವಿದ್ವಾಂಸರು ತಿಳಿಸಿರುವ ವಿಚಾರಗಳನ್ನು ಒಂದೇ ಕಡೆ ಕ್ರೋಢೀಕರಿಸಿರುತ್ತೇನೆಯೇ ವಿನಃ ನನ್ನ ಸ್ವಂತ ಬುದ್ಧಿಯಿಂದ ಏನನ್ನೂ ತಿಳಿಸಿರುವುದಿಲ್ಲ. ಈ ಪುಸ್ತಕವನ್ನು ಹೊರತರಲು ನನಗೆ ಮಾರ್ಗದರ್ಶಕರಾದ ನನ್ನ ತಂದೆಯವರಾದ ಕೀರ್ತಿಶೇಷ ವೆಂಕಟನಾರಾಯಣಪ್ಪನವರಿಗೆ, ನನ್ನ ಗುರುಗಳಾದ ಕೀರ್ತಿಶೇಷ ವೆಂಕಟೇಶಶಾಸ್ತ್ರಿಗಳಿಗೂ, ನನ್ನ ಸೋದರಮಾವನವರಾದ ಕೀರ್ತಿಶೇಷ ಲಕ್ಷ್ಮೀಕಾಂತಯ್ಯನವರಿಗೂ ಹಾಗೂ ನನ್ನ ಗುರುಗಳಾದ ವೇ||ಬ್ರಂ||ಶ್ರೀ|| ಎಂ.ಎನ್. ಚಂದ್ರಶೇಖರ್ ರವರಿಗೂ, ನನ್ನ ತಾಯಿಯವ-ರಿಗೂ ನನ್ನ ಅನಂತಾನಂತ ವಂದನೆಗಳು ಹಾಗೂ ನನಗೆ ಪ್ರೋತ್ಸಾಹಿಸಿದ ಕೀರ್ತಿಶೇಷ ಎನ್. ಮಾಧವರಾವ್ ರವರ ಧರ್ಮಪತ್ನಿ ಶ್ರೀಮತಿ ಪಿ. ಸುಶೀಲಮ್ಮ ಮಕ್ಕಳಾದ ಶ್ರೀಮತಿ ಎಮ್. ಭಾನುಮತಿ, ಎಮ್. ರಮೇಶ್, ಎಮ್. ರಾಮಚಂದ್ರ, ಎಮ್.ರಾಘವೇಂದ್ರ ರವರುಗಳಿಗೂ ಹಾಗೂ ಅವರ ಸಹೋದರರಾದ ಎನ್. ಗೋಪಾಲರಾಯರಿಗೂ ಆ ದೇವರು ನೂರುಕಾಲ ಸುಖ ಶಾಂತಿ ನೆಮ್ಮದಿ ಕೊಡಲೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಅದೇ ರೀತಿ ಇದನ್ನು ಹೊರತರಲು ಮುದ್ರಣ ಸಹಾಯ ನೀಡಿದ ಚಿ|| ಕೆ. ಎನ್. ತೇಜಸ್ ಕೌಂಡಿನ್ಯನಿಗೆ ಆ ಭಗವಂತನು ವಿದ್ಯಾ-ಬುದ್ಧಿಯನ್ನು ಆಯುರಾರೋಗ್ಯವನ್ನು ನೀಡಲೆಂದು ಪ್ರಾರ್ಥಿಸುವ

ಜ್ಯೋತಿಷ್ಯ ರತ್ನ, ವಿಶಾರಧ,
ವಿದ್ವಾನ್ ಹೆಚ್.ವಿ ಶ್ರೀನಿವಾಸಮೂರ್ತಿ, ಪೆರಮಾಚನಹಳ್ಳಿ

ದಾಸವಾಣಿ

ಎಚ್ಚರದಲ್ಲಿ ನಡೆ ಮನವೆ ನಡೆ ಮನವೆ ॥ಪ॥
ಮುದ್ದು ಮುದ್ದ ಅಚ್ಚುತನ ದಾಸರ ಒಡನಾಡು ಮನವೆ ॥ಅ॥

ಅನ್ನದಾನವ ಮಾಡುವುದಿಲ್ಲಿ
ಮೃಷ್ಟಾನ್ನವ ತಂದು ಮುಂದಿಡುವರು ಅಲ್ಲಿ।
ಅನ್ಯಾಯವ ನುಡಿಯುವುದು ಇಲ್ಲಿ
ನಿನ್ನ ಬೆನ್ನ ಚರ್ಮವ ಸೀಳಿ ತಿನಿಸುವರಲ್ಲಿ॥1॥

ಆಲಯ ಧರ್ಮವು ಇಲ್ಲಿ
ವಿಶಾಲ ವೈಕುಂಠದಲ್ಲಿರುವರು ಅಲ್ಲಿ।
ಆಲಯ ಮುರಿಯುವುದಿಲ್ಲಿ
ನಿನ್ನ ಶೂಲದ ಮರವೇರಿಸುವರಲ್ಲಿ॥2॥

ಚಾಡಿಯ ನುಡಿಯುವರಿಲ್ಲಿ
ನೀ ನಾಡಿದ ನಾಲಿಗೆ ಸೀಳುವರಲ್ಲಿ।

ಬೇಡವೆಂದರೆ ಬೈಯುವುದಿಲ್ಲಿ
ನಿನ್ನೋಡಾಟ ಕಾಲ ಕತ್ತರಿಸುವರಲ್ಲಿ॥3॥

ಯಾಚಕರ ಬೈಯುವುದಿಲ್ಲಿ
ನಿನ್ನ ನಾಚಿಕೆ ತೆಗೆದು ನಾಲಿಗೆ ಸೀಳುವರಲ್ಲಿ।

ಯಾಚಕರ ಪೂಜೆ ಇಲ್ಲಿ
ನಿನಗೆ ಸೋಚಿತ ಮಾರ್ಗ ನೀಯುವರಲ್ಲಿ॥4॥

ತಂದೆ-ತಾಯಿಯ ಬೈಯುವರಿಲ್ಲಿ
ಝುಂಡೆಯ ಕಟ್ಟಿ ಸುಡುವರು ಅಲ್ಲಿ।
ತಂದೆ-ತಾಯ್ಗಳ ಪೂಜೆ ಇಲ್ಲಿ
ದೇವೇಂದ್ರನ ಸಭೆಯ ತೋರುವರು ಮುಂದಲ್ಲಿ॥5॥

ಅತ್ತೆ-ಮಾವರ ಬೈಯುವುದಿಲ್ಲಿ
ನಿನ್ನ ಕತ್ತು ಗರಗಸದಲ್ಲಿ ಕೊಯ್ಯುವರಲ್ಲಿ।
ಅತ್ತೆ-ಮಾವರ ಪೂಜೆ ಇಲ್ಲಿ
ಇವಳು ಉತ್ತಮ ಪತಿವ್ರತೆಯೆಂಬುವರಲ್ಲಿ॥6॥

ಧರ್ಮವ ಮಾಡುವುದಿಲ್ಲಿ
ನಿನಗೆ ಸುಧರ್ಮ ಸಭೆಯ ತೋರುವರು ಮುಂದಲ್ಲಿ।
ಕರ್ಮ ಮೋಚನಗಳು ಇಲ್ಲಿ
ನಿನಗೆ ನಿರ್ಮಿಸಿಹರು ಕ್ರಿಮಿ ತಿನ್ನುವುದಲ್ಲಿ॥7॥
ವಂಚನೆ ಮಾಡುವುದಿಲ್ಲಿ
ಕಾದ ಹಂಚಿನ ಪುಡಿ ತಿನಿಸುವರಲ್ಲಿ।
ಪಂಚಾಮೃತವ ನೀಡುವುದಿಲ್ಲಿ
ನಿನಗೆ ಕಂಚು ಕಾಳಂದಿಯ ಪಿಡಿದಿಹರಲ್ಲಿ॥8॥

ಗಂಡ ಭಕ್ತಿಯು ಇಲ್ಲಿ
ನಮ್ಮ ಪುಂಡರೀಕಾಕ್ಷನು ಒಲಿಯುವನಲ್ಲಿ।
ಗಂಡನ ನಿಂದಿಸುವುದಿಲ್ಲಿ
ನಿನ್ನ ಖಂಡ ಖಂಡವ ಕತ್ತರಿಸುವರಲ್ಲಿ॥9॥

ಮುದ್ದಿಟ್ಟು ಕೊಲ್ಲುವುದಿಲ್ಲಿ
ಒದ್ದೊದ್ದು ಹದ್ದು ಕಾಗೆಗ್ಹಾಕುವರಲ್ಲಿ।
ಕ್ಷುದ್ರ ಬುದ್ಧಿಯ ಮಾಡುವುದಿಲ್ಲಿ
ದೊಡ್ಡ ಗುದ್ದಲಿ ಕಾಸಿ ಬೆನ್ನೊಳು ಎಳೆವರಲ್ಲಿ॥10॥

ಹೆಣ್ಣು ಹೊನ್ನನು ಬಯಸುವುದಿಲ್ಲಿ
ನಿನ್ನ ಕಣ್ಣಿಗೆ ಸುಣ್ಣವ ತುಂಬುವರಲ್ಲಿ।
ಕನ್ಯಾದಾನವ ಮಾಡುವುದಿಲ್ಲಿ
ಪುರಂದರ ವಿಠಲ ಒಲಿಯುವನಲ್ಲಿ॥11॥

ಪಿತೃಕಾರ್ಯ ಧರ್ಮಸೂಕ್ಷ್ಮಗಳು

"ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ ।
ಗುರುಸ್ಸಾಕ್ಷಾತ್ ಪರಂಬ್ರಹ್ಮ ತಸ್ಮೈಶ್ರೀ ಗುರವೇ ನಮಃ" ॥

ಸಾಮಾನ್ಯವಾಗಿ ಪ್ರತಿಯೊಬ್ಬರು ತಮ್ಮ ಜೀವನವನ್ನು ಸಾರ್ಥಕವಾಗಿ ಮುಗಿಸುವಪ್ರಯತ್ನವನ್ನು ಚಿಂತಿಸುತ್ತಾರೆ. ಎಲ್ಲರಿಗೂ ಸ್ವರ್ಗದ ಕನಸು ಹಾಗೂ ಮೋಕ್ಷಸಾಧನೆಯನ್ನು ಮಾಡಬೇಕೆಂಬ ಹಂಬಲವಿರುತ್ತದೆ. ಆದರೆ ಪ್ರಯತ್ನಗಳಿರುವುದಿಲ್ಲ. –"ಓ ದೇವರೇ ಈ ಜೀವನದಿಂದ ನನಗೆ ಮುಕ್ತಿಬೇಕು ಹಾಗೂ ಮುಂದೆ ನನಗೆ ಯಾವ ಜನ್ಮವೂ ಬೇಡ" ಎಂದು ಪ್ರಾರ್ಥಿಸುವವರು ಅನೇಕರು. ಹಾಗಾದರೆ ನಿಜವಾದ ಮೋಕ್ಷಪ್ರಾಪ್ತಿ ಎಂದರೇನು? ಮುಕ್ತಿ ಎಂದರೇನು? ಹೀಗೆ ನಮ್ಮಲ್ಲಿ ಅನೇಕ ಪ್ರಶ್ನೆಗಳು ಕಾಡುತ್ತಿರುತ್ತವೆ.

ಈ ಮೋಕ್ಷ ಅಥವಾ ಮುಕ್ತಿಯನ್ನು ಹೊಂದಬೇಕಾದರೆ ನಾವು ಯಾವ ಯಾವ ರೀತಿಯಲ್ಲಿ ಅನುಷ್ಠಾನವನ್ನು ಮಾಡಬೇಕು?

ದೈವಕಾರ್ಯಗಳನ್ನು, ಪಿತೃಕಾರ್ಯಗಳನ್ನು, ಯಾವ ರೀತಿಯಲ್ಲಿ ನಡೆಸಬೇಕು ಎಂಬುದರ ಅರಿವು ನಮಗಿರಬೇಕು. ಎಲ್ಲಾ ಕಾರ್ಯಗಳಿಗೂ ಒಂದೊಂದು ಶಾಸ್ತ್ರ ಪ್ರಮಾಣವಿರುತ್ತದೆ. ಅದರಂತೆ ನಾವು ನಡೆಯಬೇಕು. "ಅತಿಂ ಸರ್ವತ್ರ ವರ್ಜಯೇತ್" ಎಂಬ ಉಕ್ತಿಯಂತೆ ಕರ್ಮಾಚರಣೆಯಲ್ಲಿ ಅತಿರೇಖವನ್ನು ಮಾಡಬಾರದು. ಶಾಸ್ತ್ರದಲ್ಲಿ ಏನು ನಿರ್ಣಯಿಸಿದೆಯೋ ಅದರಂತೆ ನಡೆಯಬೇಕು. ಆಗ ಮೋಕ್ಷ ಸಾಧನೆಗೆ ಬೇಕಾದ ಅರ್ಹತೆಗಳು ನಮಗೆ ಸಿಗುವಂತಾಗುತ್ತದೆ. ಜೊತೆಗೆ ನಮ್ಮ ನಮ್ಮ ಕರ್ಮಗಳಿಗೆ ಅನುಗುಣವಾಗಿ ನಮ್ಮ ಜೀವನದಲ್ಲಿ ಏರಿಳಿತಗಳು ಕಂಡುಬರುತ್ತದೆ. ಪ್ರಾರಬ್ಧ ಕರ್ಮ, ಸಂಚಿತ ಕರ್ಮ, ಆಗಾಮಿ ಕರ್ಮ, ಈ ರೀತಿ ಕರ್ಮಗಳು ನಮ್ಮ ಜೀವನದಲ್ಲಿ ತನ್ನದೆ ಆದ ರೀತಿಯಲ್ಲಿ ಸುತ್ತುತ್ತಿರುತ್ತವೆ. ಇದರಲ್ಲಿ ಸಂತೋಷವಿರಬಹುದು ಅಥವಾ ದುಃಖವಿರಬಹುದು. ಸಾಮಾನ್ಯಮಾನವನು ಎಲ್ಲವನ್ನೂ ಸರಿಸಮಾನವಾಗಿ ಸ್ವೀಕರಿಸಿ ಭಗವಂತನ ಧ್ಯಾನದಲ್ಲಿ ಲೀನವಾಗಬೇಕು ಹಾಗೂ ನಿತ್ಯಕರ್ಮಗಳನ್ನು ತನ್ನ ಧರ್ಮದ ರೀತಿಯಲ್ಲಿ ನಡೆಸಿಕೊಂಡು ಬರಬೇಕು. ಜಗದ್ಗುರು ಆದಿಶಂಕರಾಚರ್ಯರು ತಮ್ಮ ಭಜಗೋವಿಂದ ಸ್ತೋತ್ರದ 21ನೇ ಶ್ಲೋಕದಲ್ಲಿ ಈ ರೀತಿ ತಿಳಿಸುತ್ತಾರೆ–

ಪುನರಪಿ ಜನನಂ ಪುನರಪಿ ಮರಣಂ
ಪುನರಪಿ ಜನನೀ ಜಠರೇ ಶಯನಂ ।

ಇಹಸಂಸಾರೆ ಬಹುದುಸ್ತಾರೇ
ಕೃಪಯಾ ಪಾರೇ ಪಾಹಿ ಮುರಾರೇ ॥

ಅಂದರೆ ಹುಟ್ಟಿದವರಿಗೆ ಸಾವು ನಿಶ್ಚತ ಹಾಗೆಯೇ ಅವರಿಗೆ ಪುನರ್ಜನ್ಮವೂ ನಿಶ್ಚಿತ. ಇದಕ್ಕೆ ಕೊನೆಯುಂಬುದೇ ಇಲ್ಲ. ಹುಟ್ಟಿದವರ ಸಾವು ಸತ್ತವರ ಹುಟ್ಟು ಯಾವ ರೀತಿಯಂದರೆ ಪ್ರತಿಬಾರಿಯೂ ಮನುಷ್ಯನಾಗಿಯೇ ಹುಟ್ಟಲಾರರು. ಅವರವರ ಕರ್ಮ ಫಲಗಳ ಅನುಗುಣವಾಗಿ ಈ ಭೂಮಿಯಲ್ಲಿ ಜನ್ಮ ತಾಳುತ್ತಾರೆ. ಆದರೆ ಯಾವ ಯಾವ ರೀತಿಯಲ್ಲಿ ಇವರ ಮುಂದಿನ ಜನ್ಮಗಳು ಲಭಿಸುತ್ತವೆ ಎಂಬುದೇ ಎಲ್ಲಾ ಸಾಮಾನ್ಯರ ಸಂಶಯ.

ಅದನ್ನು ನಾವು ಪರಿಶೀಲಿಸಲು ಹೊರಟಾಗ ನಮಗೆ ವೇದಗಳಲ್ಲಿ, ಶಾಸ್ತ್ರಗಳಲ್ಲಿ ಹಾಗೂ ಪುರಾಣ–ಇತಿಹಾಸಗಳಲ್ಲಿ ಅನೇಕ ರೀತಿಯ ಅಂಶಗಳು ಸಿಗುತ್ತವೆ. ಅಂತಹ ವಿಚಾರಗಳನ್ನು ತಿಳಿಯಪಡಿಸುವ ವಿಚಾರವೇ ಈ ಕಿರುಪುಸ್ತಕದ ಪ್ರಯತ್ನವಾಗಿದೆ.

ವೇದಗಳ ಪ್ರಕಾರ:– ಜನ್ಮಗಳು ಅನಾದಿಕಾಲದಿಂದಲೂ ಪ್ರಾಪ್ತವಾಗುತ್ತಿದೆಯಷ್ಟೆ. ಒಂದೊಂದು ಜನ್ಮದಲ್ಲಿ ನಡೆಸಿರುವ ಕರ್ಮದ ಫಲವನ್ನು ಆಯಾ ಕಾಲದಲ್ಲೇ ಭೋಗಿಸುವುದು ಸಾಧ್ಯವಿಲ್ಲ. ಏಕೆಂದರೆ ಅಂತಹ ಭೋಗಕ್ಕೆ ಬೇಕಾದ ದೇಶಕಾಲ ಸನ್ನಿವೇಶಗಳು ಆಗಲೇ ಒದಲಾಗಲಾರವು. ಭಗವಂತನ ಆಜ್ಞೆಯಿಂದ ಅವು ಬದಲಾದಂತೆಲ್ಲಾ ಕರ್ಮಫಲವು ಭೋಗದಿಂದ ಸವೆಯುತ್ತದೆ. ಇನ್ನೂ ಸವೆಯದೆ ಹಾಗೆಯೇ ಉಳಿದಿರುವ ಕರ್ಮ ರಾಶಿಯೇ "ಸಂಚಿತಕರ್ಮ". ನಾವು ಮಾಡಿದ ಪೂರ್ವಾರ್ಜಿತ ಪಾಪಗಳಿಗೆ ಒಂದೊಂದು ಪಾಪದ ಫಲವನ್ನು ತೀರಿಸಲು ಅದರ ಪ್ರಮಾಣದ ರೀತಿಯಲ್ಲಿ ಹಲವು ಜನ್ಮಗಳು ಎತ್ತಬೇಕು ಎಂದು ಶಾಸ್ತ್ರವು ತಿಳಿಸುತ್ತದೆ. ಆದ್ದರಿಂದ ಸಂಚಿತ ಕರ್ಮದ ಒಂದು ಭಾಗವನ್ನು ಮಾತ್ರ ಜೀವನು ಅನುಭವಿಸುವಂತೆಯೇ ಪರಮಾತ್ಮನು ಜನ್ಮವನ್ನು ಕೊಡುತ್ತಾನೆ. ಹೀಗೆ ಯಾವ ಕರ್ಮಭಾಗದಿಂದ ಈ ಜನ್ಮವು ಪ್ರಾಪ್ತವಾಗಿದೆಯೋ ಅದನ್ನು "ಪ್ರಾರಬ್ಧ ಕರ್ಮ" ಎನ್ನುತ್ತಾರೆ. ಆದರೆ ಈ ಜನ್ಮದಲ್ಲಿ ಪ್ರಾರಬ್ಧ ಕರ್ಮವನ್ನು ಅನುಭವಿಸುತ್ತಾ ಹೊಸದಾಗಿ ನಮ್ಮ ಅಜ್ಞಾನದಿಂದಾಗುವ ಕರ್ಮಗಳೇ "ಆಗಾಮಿ ಕರ್ಮ". ಹೀಗಾಗಿ ಅಜ್ಞಾನಿಯಾದ ಜೀವನಿಗೆ ತಾನು ಭೋಗಿಸಿ ಕಳೆದುಕೊಳ್ಳುವುದಕ್ಕಿಂತಲೂ ಪ್ರಾಯುಶಃ ಮುಂದಿನ ಜನ್ಮಕ್ಕಾಗಿ ಕೂಡಿ ಹಾಕಿಕೊಳ್ಳುವ ಕರ್ಮವೇ ಬೃಹತ್ತರವಾಗಿರುತ್ತದೆ. ಪ್ರಾಯಶ್ಚಿತ್ತ ಕರ್ಮಗಳಿಂದ ಪ್ರಾರಭ್ಧ ಹಾಗೂ ಸಂಚಿತ ಕರ್ಮಗಳನ್ನು ಸ್ವಲ್ಪ ಕಡಿಮೆ ಮಾಡಿಕೊಳ್ಳಬಹುದಾಗಿದೆ. ಆದರೆ ಈ ಜನ್ಮದಲ್ಲಿ ಮಾಡಿದ

ಪುಣ್ಯಕರ್ಮದ ಫಲವನ್ನು ಅನುಭವಿಸುವುದಕ್ಕಾದರೂ ಅವನು ಮತ್ತೆ ಜನ್ಮವನ್ನು ಎತ್ತಲೇಬೇಕು ಎಂದ ಮೇಲೆ ಸತ್ಕರ್ಮವನ್ನು ಮಾಡಿ ಜನ್ಮವನ್ನು ಕೊನೆಗಾಣಿಸಿಕೊಳ್ಳ ಬೇಕೆಂಬುದರಲ್ಲಿ ಅರ್ಥವೇ ಇಲ್ಲವೆಂದಾಯಿತಲ್ಲ. ಹಾಗಾಗಿ ಪುನರ್ಜನ್ಮವಂತೂ ಖಚಿತ ಎಂದಂತಾಯಿತು.

ಮರಣ:–ಇನ್ನು ಪ್ರತಿಯೊಂದು ಜನ್ಮದಲ್ಲಿಯೂ ಪ್ರಾರಬ್ಧ ಕರ್ಮಾನುಸಾರವಾಗಿ ಆಯಸ್ಸು ನಿಶ್ಚಯವಾಗಿರುತ್ತದೆ. ಆದರೆ ಈ ಜನ್ಮದಲ್ಲಿ ಮಾಡುವ ಪ್ರಾಯಶ್ಚಿತ್ತ ಕರ್ಮಗಳಿಂದ ಆಯಸ್ಸು ಹೆಚ್ಚಲೂಬಹುದು ಅಥವಾ ಪಾಪಕರ್ಮಗಳಿಂದ ಕಡಿಮೆಯಾಗಲೂಬಹುದು. ಒಟ್ಟಿನಲ್ಲಿ ಆಯುಸ್ಸು ಕೊನೆಗೊಂಡಾಗ ಶರೀರವು ಮುಪ್ಪು, ಜ್ವರ, ಇತ್ಯಾದಿಗಳಿಂದ ಜರ್ಜರಿತವಾಗಿ ಜೀವನು ಮಲಗಿಬಿಡುತ್ತಾನೆ. ಅಂತಹ ಸಂದರ್ಭದಲ್ಲಿ ಜೀವನಿಗೆ ಸ್ಮೃತಿ ತಪ್ಪಿಬಿಡುತ್ತದೆ. ತನ್ನ ಸ್ವಪ್ರಯತ್ನದಿಂದ ಏನನ್ನೂ ಮಾಡಲಾರ. ಇಲ್ಲಿಯತನಕ ಕಲಿತ ವಿದ್ಯೆ, ಬುದ್ಧಿ, ಜ್ಞಾನ, ಪ್ರಜ್ಞೆಗಳಿಂದ ಮುಂದಿನ ಗತಿಯು ತೀರ್ಮಾನವಾಗಿರುತ್ತದೆ (ಬೃ.4.3.35). ಆದ್ದರಿಂದ ಪ್ರಾರಬ್ಧಕರ್ಮವನ್ನು ಅನುಭವಿಸುವ ಜೊತೆಜೊತೆಗೆ ಸ್ವಲ್ಪ ಮಟ್ಟಿಗಾದರೂ ಪುಣ್ಯವನ್ನು ಸಂಪಾದಿಸಿಕೊಳ್ಳಬೇಕು (ಬೃ.4.4.2).

ಹೀಗೆ ಸಾಯುತ್ತಿರುವ ವ್ಯಕ್ತಿಗೆ ಮೊದಲು ತಡೆಯುಂಟಾಗುವುದು ವಾಗೀಂದ್ರಿಯಗಳು. ಅದು ಮುಂದಿನ ಜನ್ಮದ ವಾಕ್ಕಿಗೆ ಅನುಗುಣವಾದ ವೃತ್ತಿಯನ್ನು ಪಡೆದುಕೊಂಡು ಅವನ ಮನಸ್ಸಿನಲ್ಲಿ ಬಂದಾಗುತ್ತದೆ. ಆಗ ಅವನು ಮಾತನಾಡಲಾರ. ನಂತರ ಚಕ್ಷುರಾದಿ ಇಂದ್ರಿಯಾದಿಗಳು ತಮ್ಮ ತೇಜಸ್ಸಿನ ಅವಯವಗಳೊಡನೆ ಮನಸ್ಸಿನಲ್ಲಿ ಸೇರಿಹೋಗುತ್ತವೆ. ನಂತರ ಮನಸ್ಸು ಮುಂದಿನ ಜನ್ಮಕ್ಕೆ ಅನುಗುಣವಾದ ಕೃತಿಯನ್ನು ಪಡೆದುಕೊಂಡು ಪ್ರಾಣದಲ್ಲಿ ಲೀನವಾಗುತ್ತದೆ (ಪ್ರ.3.10). ನಂತರ ಪ್ರಾಣ ವೃತ್ತಿಯು ಜೀವಾತ್ಮನಲ್ಲಿ ಸೇರಿಹೋಗುತ್ತದೆ. ನಂತರದಲ್ಲಿ ವಾಙ್ಮನಃ ಪ್ರಾಣ ವೃತ್ತಿಗಳನ್ನು ಎಳೆದುಕೊಂಡಿರುವ ಜೀವಾತ್ಮನು ತಾಪರೂಪದಲ್ಲಿ ದೇಹದ ಯಾವುದಾದರೊಂದು (ನವದ್ವಾರ) ದ್ವಾರದಿಂದ ಹೊರ ಹೊರಡುತ್ತಾನೆ. ಹಾಗಾದರೆ ಮರಣದ ನಂತರದ ಜೀವನವು ಹೇಗೆ ಎಂಬ ಪ್ರಶ್ನೆ ಉದ್ಭವಿಸುತ್ತದೆಯಷ್ಟೆ.

ಜೀವಾತ್ಮನಿಂದ ತ್ಯಜಿಸಲ್ಪಟ್ಟ ಶರೀರವು ಸಾಯುತ್ತದೆ. ಆ ಶರೀರಕ್ಕೆ ನಾವು ಅಂತ್ಯ ಸಂಸ್ಕಾರಗಳನ್ನು ನಡೆಸುತ್ತೇವೆ.ಆದರೆ ಜೀವವು ಸಾಯುವುದಿಲ್ಲ (ಛಾಂ.6.11.3). ಆ ಶರೀರವನ್ನು ಬಿಟ್ಟ ಜೀವನು ಒಳ್ಳೆಯ ಉಪಾಸಕನಾಗಿದ್ದಲ್ಲಿ ಬ್ರಹ್ಮಾದಿ ಲೋಕಗಳಿಗೂ, ವಿಶೇಷ ಪುಣ್ಯಕರ್ಮಗಳನ್ನು ಮಾಡಿದ್ದರೆ ಸ್ವರ್ಗಾದಿ ಲೋಕಗಳಿಗೂ, ಸತ್ಕರ್ಮಿಯಾಗಿದ್ದರೆ

ಪಿತೃಲೋಕಗಳಿಗೂ ಹಾಗೂ ಪಾಪಕರ್ಮಗಳನ್ನು ಮಾಡಿದ್ದರೆ ರೌರವಾದಿ ನರಕಗಳಿಗೂಹೋಗಿ ಉಳಿದಿರುವ ಕರ್ಮಫಲ ಭೋಗಗಳಿಗನುಗುಣವಾಗಿ ಪುನಃ ಭೂಲೋಕಕ್ಕೆ ಹಿಂದಿರುಗುತ್ತಾನೆ. ಆದರೆ ನೇರವಾಗಿ ಮನುಷ್ಯ ಜನ್ಮವನ್ನು ತಳೆಯಲು ಸಾದ್ಯವಾಗುವುದಿಲ್ಲ. ನೇರವಾಗಿ ಮೋಡಗಳಲ್ಲಿ ಸೇರಿ ಮಳೆಯ ಮೂಲಕವಾಗಿ ಭೂಮಿಗೆ ಬಂದು ಧಾನ್ಯರೂಪದಲ್ಲಿ ಸೇರಿ ಅಲ್ಲಿಂದ ತನ್ನ ಕರ್ಮ ಫಲಗನುಗುಣವಾಗಿ ಅನೇಕ ವಿಧವಾದ ಜೀವಿಗಳಾಗಿ ಹುಟ್ಟಿ ಕೊನೆಯದಾಗಿ ಮನುಷ್ಯನರೂಪವನ್ನು ಧರಿಸಲು ಪುರುಷನ ವೀರ್ಯರೂಪದಲ್ಲಿ ಬಂದು ಸೇರಿ ಇದ್ದುಕೊಂಡು ಮಾತೃಗರ್ಭವನ್ನು ಸೇರಿಕೊಂಡು ಹಿಂದಿನ ಜನ್ಮದ ಮರಣ ಸಮಯವನ್ನು ಕಳೆದು ಹೋದ ಜನ್ಮಗಳ ವಿದ್ಯಾಕರ್ಮ ಪೂರ್ವಪ್ರಜ್ಞೆಗಳ ಅಂಶದಿಂದ ಭಗವಂತನ ಆಜ್ಞೆಯ ಅನುಸಾರವಾಗಿ ಪಡೆದುಕೊಂಡು ವಾಗ್ವೃತ್ತಿ, ಮನೋವೃತ್ತಿ, ಹಾಗೂ ಪ್ರಾಣವೃತ್ತಿಗಳಿಗೆ ಅನುಗುಣವಾಗಿ ತೇಜೋಮಯನೋ, ಕ್ರೋಧಮಯನೋ, ಅಕ್ರೋಧಮಯನೋ, ಅಕಾಮಮಯನೋ, ಅತೇಜೋಮಯನೋ, ಕಾಮಮಯನೋ, ಧರ್ಮಮಯನೋ, ಅಧರ್ಮಮಯನೋ, ಜ್ಞಾನಿಯೋ, ಅಜ್ಞಾನಿಯೋ, ಸಂಸ್ಕಾರವಂತನೋ, ನೀಚನೋ ಆಗಿ ಹುಟ್ಟುತ್ತಾನೆ. ಹೀಗೆ ಹುಟ್ಟಿದವನನ್ನು ನಾವು ತಿದ್ದಲು ಸಾಧ್ಯವಾಗುವುದಿಲ್ಲ. ಅವನ ಪ್ರಾರಬ್ಧಕರ್ಮಕ್ಕೆ ಅನುಗುಣವಾಗಿ ಭೂಮಿಯಲ್ಲಿ ಅವತರಿಸುತ್ತಾನೆ. ಹೀಗೆಲ್ಲಾ ತನಗೆ ಸಿಗುವ ಸಹವಾಸ, ಸಂಸ್ಕಾರಗಳಿಂದ ಮೇಲುಮೇಲಕ್ಕೆ ಏರಲೂಬಹುದು. ಒಳ್ಳೆಯದು ಅಥವಾ ಕೆಟ್ಟದ್ದು ನಮ್ಮನ್ನು ಹುಡುಕಿಕೂಂಡು ಬಂದೇ ಬರುತ್ತದೆ. ಹೀಗಿರುವಾಗ, ನಮ್ಮಲ್ಲಿ ಬರುವ ಮುಂದಿನ ಪ್ರಶ್ನೆ ಮೋಕ್ಷ ಎಂದರೇನು?

ನಮ್ಮ ಪುರಾಣಗಳಲ್ಲಿ, ವೇದಗಳಲ್ಲಿ, ಧರ್ಮಗಳಲ್ಲಿ ತಿಳಿಸಿರುವ ಹಾಗೆ ಮೋಕ್ಷ ಎಂದರೆ ದುಃಖವೇ ಇಲ್ಲದ ಸುಖ ಸಂತೋಷಗಳಿಂದ ಕೂಡಿದಂತಹ ಸಮಯ (ಕಾಲ) ಎಂದರ್ಥ. ಆದರೆ ಇದಕ್ಕೆ ಅನೇಕ ವಿಧವಾದ ಅಭಿಪ್ರಾಯಗಳು ಉಂಟು. ಹೇಗೆಂದರೆ ನಾಸ್ತಿಕರು ಮರಣವನ್ನು ಮೋಕ್ಷವೆನ್ನುತ್ತಾರೆ. ಏಕೆಂದರೆ ಅನೇಕರ ಅಭಿಪ್ರಾಯದ ಪ್ರಕಾರ ಪುನರ್ಜನ್ಮವಿರುವುದಿಲ್ಲ. ಭೌದ್ದಧರ್ಮಿಯರ ಪ್ರಕಾರ ಪುನರ್ಜನ್ಮವಿದೆಯೆಂದು ಒಪ್ಪಿದರೂ ಜೀವನದ ಅಂತ್ಯದಲ್ಲಿ ಉಂಟಾಗುವ ಶೂನ್ಯವೇ ಮೋಕ್ಷ ಎನ್ನುತ್ತಾರೆ. ಲೌಕಿಕ ಪ್ರಪಂಚದಲ್ಲಿ ಚೆನ್ನಾಗಿ ಸುಖವಾಗಿ ಆನಂದದಿಂದಿರುವುದೇ ಮೋಕ್ಷ ಎಂದು ಭಾವಿಸುತ್ತಾರೆ. ಆದರೆ ಮೋಕ್ಷಪ್ರಾಪ್ತಿ ಬೇಕೆಂದು ಸಂಸಾರವನ್ನು ತ್ಯಜಿಸಿ ತ್ಯಾಗದ ಮೂಲಕ ಸನ್ಯಾಸಾಶ್ರಮವನ್ನು ಸ್ವೀಕರಿಸಿದರೆ ಮೋಕ್ಷ ಸಿಗುತ್ತದೆ ಎಂದು ಕೆಲವರ ಅನಿಸಿಕೆ. ಆದರೆ ಇದು ಎಷ್ಟು ಸರಿ? ಪುನರ್ಜನ್ಮವಿಲ್ಲದೆ ಈ ಜನ್ಮವನ್ನು ಕೊನೆಗೊಳಿಸಬೇಕೆಂಬ

ಹಂಬಲದಿಂದ ಸಂಸಾರವನ್ನು ತ್ಯಜಿಸಿ ತನ್ನನ್ನು ತಾನು ದಂಡಿಸಿಕೊಂಡರೆ ಮೋಕ್ಷಸಿಗುವುದೇ? ಇಲ್ಲ. ನಮ್ಮ ಧರ್ಮಶಾಸ್ತ್ರಗಳ ಪ್ರಕಾರ ಮೋಕ್ಷ ಎಂದರೆ ನಮ್ಮ ಹಿಂದಿನ ಅನೇಕ ಜನ್ಮಗಳಲ್ಲಿ ಜ್ಞಾನದಿಂದ ಅಥವಾ ಅಜ್ಞಾನದಿಂದ ಮಾಡಿರುವ ತಪ್ಪುಗಳೆಲ್ಲ ಮುಗಿದು ಪಾಪದ ಭಾಗವು ಶೂನ್ಯವಾಗಿ ಚಿತ್ತಶುದ್ಧಿಯಾದರೆ ಜ್ಞಾನದ ಮೂಲಕ ಮೋಕ್ಷ ಲಭಿಸುತ್ತದೆ ಎಂದರ್ಥ. ಆದ್ದರಿಂದ "ಜಾತಸ್ಯಹಿ ದ್ರುವೋಮೃತ್ಯುಃ ಧ್ರುವಂ ಜನ್ಮ ಮೃತಸ್ಯಚ" ಎಂಬಂತೆ ಮುಂದಿನ ಜನ್ಮ ಎಂಬುದು ಖಂಡಿತವಾಗಿಯೂ ಇದ್ದೇ ಇದೆ. ಅದನ್ನು ಯಾರಿಂದಲೂ ತಪ್ಪಿಸಲು ಸಾಧ್ಯವಾಗುವುದಿಲ್ಲ.

ಮೋಕ್ಷವು ಬ್ರಹ್ಮಾತ್ಮೈಕತ್ವ ಜ್ಞಾನವೇ ವಿನಾ ಕರ್ಮಫಲವಲ್ಲ. ಆದರೂ ಮೋಕ್ಷಕ್ಕೆ ಕರ್ಮಗಳಿಂದ ಪ್ರಯೋಜನವೇ ಇಲ್ಲವೆಂದಲ್ಲ. ನಿರ್ದಿಷ್ಟ ರೀತಿಯಲ್ಲಿ ಆಚರಿಸಿದ ಕರ್ಮವು ಪರಂಪರೆಯಿಂದ ಮೋಕ್ಷಕ್ಕೆ ಕಾರಣವಾಗುತ್ತದೆ. ಎಂದರೆ ಕರ್ಮದಿಂದ ಮನಃಶುದ್ಧಿ ನಂತರ ಜ್ಞಾನ, ಜ್ಞಾನದಿಂದ ಮೋಕ್ಷ ಹಾಗೆಯೇ ನಿತ್ಯಾನುಷ್ಠಾನವೂ ಕರ್ಮವೇ ಆಗಿದ್ದು ಅದರ ಫಲಗಳು ಮುಂದಿನ ಜೀವನಕ್ಕೆ ಉಪಯೋಗವಾಗುತ್ತದೆ.

ಆದರೆ ಮನುಷ್ಯನು ಪ್ರತಿನಿತ್ಯವೂ ಪ್ರತಿಕ್ಷಣವೂ ಸುಖ ಪ್ರಾಪ್ತಿಗಾಗಿ ಹಾಗೂ ದುಃಖ ನಿವಾರಣೆಗಾಗಿ ಶ್ರಮಿಸುತ್ತಿರುತ್ತಾನೆ. ಆದರೆ ಈ ಸುಖ ಅಥವಾ ದುಃಖ ಯಾರಿಗೂ ಸರಿಸಮಾನವಾಗಿ ಒಂದೇ ಸಮಯದಲ್ಲಿ ಬರಲಾರದು. ಇಂತಹ ಸುಖ ಅಥವಾ ದುಃಖ ಯಾರಿಗೆ ಯಾವಾಗ ಎಂದು ನಿರ್ದಿಷ್ಟವಾಗಿ ಹೇಳಲಾಗದು. ಅವರವರ ಕರ್ಮ ಫಲಗಳಿಗನುಸಾರವಾಗಿ ಈ ಸುಖ ದುಃಖಗಳು ಪ್ರಾಪ್ತಿಯಾಗುತ್ತವೆ. ಉದಾಹರಣೆಗೆ ಒಂದೇ ದಿನ ಒಂದೇ ಸಮಯದಲ್ಲಿ ಹುಟ್ಟಿದಂತಹ ಇಬ್ಬರು ವ್ಯಕ್ತಿಗಳಿದ್ದರೂ ಅವರವರ ಜೀವನ ಶೈಲಿಯು ಬೇರೆಯದೇ ಆಗಿರುತ್ತದೆ. ಆದರೆ ಅವರ ಜನ್ಮ ನಕ್ಷತ್ರ, ಜನ್ಮ ರಾಶಿ, ಜನ್ಮ ಸಮಯ, ಜನ್ಮ ಸ್ಥಳ, ಎಲ್ಲವೂ ಒಂದೇ ಆಗಿದ್ದರೂ ಅವರ ಜೀವನವು ಭಿನ್ನವಾಗಿರುತ್ತದೆ. ಇದನ್ನು ಕರ್ಮಫಲ ಎನ್ನಲಾಗುತ್ತದೆ. ಅಂದರೆ ಯಾರೊಬ್ಬರೂ ಒಬ್ಬರ ಪರಿಸ್ಥಿತಿಯನ್ನು ವಿಮರ್ಶಿಸಿ ಅವರ ಸುಖ ಪ್ರಾಪ್ತಿಗೂ ದುಃಖ ನಿವಾರಣೆಗೂ ನಿರ್ದಿಷ್ಟ ಕ್ರಮವನ್ನು ತಿಳಿಸಿ ಅವರಿಗೆ ಅದನ್ನು ನಿವಾರಿಸಲು ಸಾಧ್ಯವಿಲ್ಲ. ಏಕೆಂದರೆ ಈಗ ಮಾಡುವ ಪ್ರಯತ್ನಗಳಲ್ಲದೆ ಗತಜನ್ಮದ ಕರ್ಮಗಳು ಬಂದೊದಗುತ್ತಿರುತ್ತದೆ. "ನಾಭುಕ್ತಂ ಕ್ಷೀಯತೇ ಕರ್ಮ ಕಲ್ಪಕೋಟಿ ಶತೈರಪಿ" ಎಂಬಂತೆ ಕಲ್ಪಕೋಟಿವರ್ಷಗಳಾದರೂ ಅನುಭವಿಸದೆ ಮಾಡಿದಕರ್ಮವು ತೀರುವುದಿಲ್ಲ.

ಕರ್ಮಾನುಷ್ಠಾನ

ಮಾನವಜನ್ಮದಲ್ಲಿ ಸ್ವಧರ್ಮಾನುಷ್ಠಾನ ಮತ್ತು ನಿತ್ಯಕರ್ಮಾಚರಣೆಗೆ ಇರುವ ಪ್ರಾಶಸ್ತ್ಯವನ್ನು ಈ ಕೆಳಗೆ ಕೊಟ್ಟಿರುವ ಆದಿಶಂಕರಾಚಾರ್ಯ-ರಿಂದ ರಚಿತವಾದ ಉಪದೇಶಪಂಚಕದಲ್ಲಿ ವಿಸ್ತಾರವಾಗಿ ತಿಳಿಸಿರುತ್ತಾರೆ.

ಉಪದೇಶಪಂಚಕಂ

"ವೇದೋ ನಿತ್ಯಮಧೀಯತಾಂ ತದುದಿತಂ ಕರ್ಮಸ್ವನುಷ್ಠೀಯತಾಂ
ತೇನೇಶಸ್ಯ ವಿಧೀಯತಾಮುಪಚಿತಿಃ ಕಾಮ್ಯೇ ಮತಿಸ್ತ್ಯಜ್ಯತಾಮ್।
ಪಾಪೌಘಃ ಪರಿಧೂಯತಾಂ ಭಜೌಸುಖೇ ದೋಷೋನುಸಂಧೀಯತಾಂ
ಆತ್ಮೇಚ್ಛಾ ವ್ಯವಸೀಯತಾಂ ನಿಜಗೃಹಾತ್ತೂರ್ಣಂ ವಿನಿರ್ಗಮ್ಯತಾಮ್"॥

ಸ್ವಶಾಖೆಯ ವೇದವನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿರಿ. ಅದರಲ್ಲಿ ಹೇಳಿರುವ ನಿತ್ಯನೈಮಿತ್ತಿಕಾದಿ ಕರ್ಮಗಳನ್ನು ಚೆನ್ನಾಗಿ ಆಚರಿಸಿ. ಸಂಧ್ಯಾದಿ ನಿತ್ಯಕರ್ಮಾನುಷ್ಠಾನದ ಮೂಲಕ ಪರಮೇಶ್ವರನನ್ನು ಪೂಜಿಸಿರಿ. ಕಾಮ್ಯಕರ್ಮಗಳನ್ನು ದೂರಮಾಡಿ, ಸಂಚಿತವಾದ ಪಾಪಕರ್ಮಗಳನ್ನು ಕಳೆದುಕೊಳ್ಳಿರಿ. ಚಿತ್ತಶುದ್ಧಿಯನ್ನು ಪಡೆದು ವಿಷಯಸುಖಗಳಲ್ಲಿರುವ ದೋಷಗಳನ್ನು ಕಂಡುಕೊಳ್ಳಿರಿ. ಆತ್ಮಜ್ಞಾನವನ್ನು ಪಡೆಯಲು ಬಯಸಿರಿ. ಮನೆಗಳಲ್ಲಿ ಇದ್ದುಕೊಂಡು ಕರ್ಮಾದಿಗಳನ್ನು ಮಾಡುವುದೇ ಪರಮಕರ್ತವ್ಯವೆಂದು ಭಾವಿಸದೆ ಆತ್ಮೋದ್ಧಾರಕ್ಕಾಗಿ ಮನೆಯ ಹೊರಕ್ಕೆ ಬನ್ನಿ.

"ಸಂಗಃ ಸತ್ಸು ವಿಧೀಯತಾಂ ಭಗವತೋ ಭಕ್ತಿರ್ದೃಢಾಧೀಯತಾಂ
ಶಾಂತ್ಯಾದಿಃ ಪರಚೀಯತಾಂ ದೃಢತರಂ ಕರ್ಮಾಶು ಸಂತ್ಯಜ್ಯತಾಮ್ ।
ಸದ್ವಿದ್ವಾನುಪಸರ್ಪ್ಯತಾಂ ಪ್ರತಿದಿನಂ ತತ್ಪಾದುಕೇ ಸೇವ್ಯತಾಂ
ಬ್ರಹ್ಮೈಕಾಕ್ಷರಮರ್ಥ್ಯತಾಂ ಶ್ರುತಿಶಿರೋವಾಕ್ಯಂ ಸಮಾಕರ್ಣ್ಯತಾಮ್" ॥

ಸಜ್ಜನರ ಸಹವಾಸ ಮಾಡಿರಿ. ಭಗವಂತನಲ್ಲಿ ದೃಢವಾದ ಭಕ್ತಿಯನ್ನಿಡಿರಿ. ಶಾಂತಿ, ದಯೆ, ವಿನಯಾದಿ ಸದ್ಗುಣಗಳ ಪರಿಚಯವನ್ನು ಹೊಂದಿರಿ. ಆದಷ್ಟು ಬೇಗ ಐಹಿಕ ಕರ್ಮಗಳನ್ನು ದೂರಮಾಡಿರಿ. ಒಳ್ಳೆಯ ಜ್ಞಾನಿಗಳ ಬಳಿಗೆ ಹೋಗಿ ನಿತ್ಯವೂ ಅವರ ಪಾದಸೇವೆ ಮಾಡಿರಿ. 'ಓಂ' ಎಂಬ ಪ್ರಣವಮಂತ್ರರೂಪೀ ಪರಮಾತ್ಮ ಪ್ರಾಪ್ತಿಯ ಮಾರ್ಗವನ್ನು ಪ್ರಾರ್ಥಿಸಿರಿ. ಜ್ಞಾನಿಗಳು ಬೋಧಿಸುವ ಉಪನಿಷತ್ತಿನ ವಾಕ್ಯಗಳ ಅರ್ಥವನ್ನು ಮನಗೊಟ್ಟು ಕೇಳಿರಿ.

"ವಾಕ್ಯಾರ್ಥಶ್ಚ ವಿಚಾರ್ಯತಾಂ ಶ್ರುತಿಶಿರಃಪಕ್ಷಃ ಸಮಾಶ್ರೀಯತಾಂ
ದುಸ್ತರ್ಕಾತ್ಸುವಿರಮ್ಯತಾಂ ಶ್ರುತಿಮತಸ್ತರ್ಕೋಽನುಸಂಧೀಯತಾಮ್ ।
ಬ್ರಹ್ಮೈವಾಸ್ಮಿ ವಿಭ ಆವ್ಯತಾಮಹರಹರ್ಗರ್ವಃ ಪರಿತ್ಯಜ್ಯತಾಂ
ದೇಹೇಹಂಮತಿರುಝ್ಝ್ಯತಾಂ ಬುಧಜನೈರ್ವಾದಃ ಪರಿತ್ಯಜ್ಯತಾಮ್" ॥

'ತತ್ವಮಸಿ' ಮುಂತಾದ ಮಹಾವಾಕ್ಯಗಳ ಅರ್ಥವನ್ನು ವಿಚಾರಪೂರ್ವಕವಾಗಿ ತಿಳಿಯಿರಿ.ವೇದಾಂತದ ಸಾರವಾದ ಅದ್ವೈತಸಿದ್ಧಾಂತವನ್ನು ಚೆನ್ನಾಗಿ ಆಶ್ರಯಿಸಿರಿ. ದುಸ್ತರ್ಕಗಳನ್ನು ತ್ಯಜಿಸಿರಿ. ವೇದಸಮ್ಮತವಾದ ವಿಚಾರಗಳನ್ನೇ ಆನುಸಂಧಾನ ಮಾಡಿರಿ. "ನಾನು ಬ್ರಹ್ಮನಾಗಿದ್ದೇನೆ" ಎಂದು ಭಾವಿಸಿ ದಿನದಿನಕ್ಕೂ ನಾನು ನನ್ನದು ಎಂಬ ಅಹಂಕಾರವನ್ನು ತೊರೆಯಿರಿ. ದೇಹವೇ ನಾನು ಎಂಬ ಅಭಿಮಾನವನ್ನು ಬಿಡಿರಿ. ಜ್ಞಾನಿಗಳೊಡನೆ ವ್ಯರ್ಥವಾಗಿ ವಾದ-ವಿವಾದ ಮಾಡಬೇಡಿರಿ.

"ಕ್ಷುದ್ವ್ಯಾಧಿಶ್ಚ ಚಿಕಿತ್ಸತಾಂ ಪ್ರತಿದಿನಂ ಭಿಕ್ಷೌಷಧಂ ಭುಜ್ಯತಾಂ
ಸ್ವಾದ್ವನ್ನಂ ಯಾಚ್ಯತಾಂ ವಿಧಿವಶಾತ್ಪ್ರಾಪ್ತೇನ ಸಂತುಷ್ಯತಾಮ್ ।
ಶೀತೋಷ್ಣಾದಿ ವಿಷಹ್ಯತಾಂ ನ ತು ವೃಥಾವಾಕ್ಯಂ ಸಮುಚ್ಚಾರ್ಯತಾಂ
ಔದಾಸೀನ್ಯಮಭೀಪ್ಸ್ಯತಾಂ ಜನಕೃಪಾನೈಷ್ಠುರ್ಯಮುತ್ಸೃಜ್ಯತಾಮ್" ॥

ಪ್ರತಿದಿನವೂ ಭಿಕ್ಷಾನ್ನವೆಂಬ ಔಷಧ ಸೇವನೆಯಿಂದ ಹಸಿವು ಎಂಬ ರೋಗಕ್ಕೆ ಚಿಕಿತ್ಸೆಯನ್ನು ಮಾಡಿರಿ. ರುಚಿಕಟ್ಟಾದ ಭಕ್ಷ್ಯಭೋಜ್ಯಾದಿಗಳಿಗೆ ಹಾತೊರೆಯದೆ ದೇವರು ಕೊಟ್ಟ ಅನ್ನದಿಂದಲೇ ಸಂತೋಷಪಡಿರಿ. ಶೀತ-ಉಷ್ಣ, ಮೃದು-ಕಠಿಣ ಎಂಬ ದ್ವಂದ್ವಗಳನ್ನು ಚೆನ್ನಾಗಿ ಸಹಿಸಿಕೊಳ್ಳಿರಿ. ಯಾರೊಂದಿಗೂ ವ್ಯರ್ಥವಾದ ಮಾತುಗಳನ್ನಾಡಬೇಡಿ. ಜನರಲ್ಲಿ ಅತಿಯಾದ ನಯ ನಿಷ್ಠುರಗಳೆರಡನ್ನೂ ತ್ಯಜಿಸಿರಿ.

"ಏಕಾಂತೇ ಸುಖಮಾಸ್ಯತಾಂ ಪರತರೇ ಚೇತಃ ಸಮಾಧೀಯತಾಂ
ಪೂರ್ಣಾತ್ಮಾ ಸುಸಮೀಕ್ಷ್ಯತಾಂ ಜಗದಿದಂ ತದ್ಬಾಧಿತಂ ದೃಶ್ಯತಾಮ್ ।
ಪ್ರಾಕ್ಕರ್ಮ ಪ್ರವಿಲಾಪ್ಯತಾಂ ಚಿತಿಬಲಾನ್ನಾಪ್ಯುತ್ತರೈಃ ಶ್ಲಿಷ್ಯತಾಂ
ಪ್ರಾರಬ್ಧಂ ತ್ವಿಹ ಭುಜ್ಯತಾಮಥ ಪರಬ್ರಹ್ಮಾತ್ಮನಾ ಸ್ಥೀಯತಾಮ್" ॥

ಏಕಾಂತಸ್ಥಳದಲ್ಲಿ ಸುಖವಾಗಿ ಕುಳಿತು ಪರಮಾತ್ಮನಲ್ಲಿಯೇ ಮನಸ್ಸನ್ನು ನೆಲೆಗೊಳಿಸಿರಿ. ಪರಿಪೂರ್ಣನಾದ ಪರಬ್ರಹ್ಮನು ಎಲ್ಲೆಲ್ಲಿಯೂ ವ್ಯಾಪಿಸಿರುವುದನ್ನು ಅರಿತುಕೊಂಡು ಈ ಜಗತ್ತು ಮಿಥ್ಯವೆಂಬುದನ್ನು ಮನಗಾಣಿರಿ. ಹಿಂದಿನ ಸಂಚಿತ ಪ್ರಾರಬ್ಧಕರ್ಮಗಳನ್ನು ಮಾತ್ರ ಅನುಭವಿಸಿರಿ. ಅನಂತರ ಪರಬ್ರಹ್ಮ ಸಾಕ್ಷಾತ್ಕಾರದ ಆನಂದವನ್ನು ಪಡೆಯಿರಿ.

“ಯಃಶ್ಲೋಕಪಂಚಕಮಿದಂ ಪಠತೇ ಮನುಷ್ಯಃ
ಸಂಚಿಂತಯತ್ಯನುದಿನಂ ಸ್ಥಿರತಾಮುಪೇತ್ಯ ।
ತಸ್ಯಾಶು ಸಂಸ್ಕೃತಿದವಾನಲತೀವ್ರಘೋರಃ
ತಾಪಃ ಪ್ರಶಾಂತಿಮುಪಯಾತಿ ಚಿತಿಪ್ರಸಾದಾತ್” ॥

ಮನನ ಮಾಡುವವನಿಗೆ ತೀವ್ರವೂ ಭಯಂಕರವೂ ಆದ ಸಂಸಾರಾಗ್ನಿಯ ತಾಪವು ಶಾಂತವಾಗಿ ಈ ಐದು ಶ್ಲೋಕಗಳನ್ನು ನಿತ್ಯವೂ ಪಠನಮಾಡುತ್ತ ಅವುಗಳ ಅರ್ಥವನ್ನು ಸ್ಥಿರ ಬುದ್ಧಿಯಿಂದ ಆನಂದವು ಲಭಿಸುತ್ತದೆ.

ನಾವು ಹಿಂದೆ ತಿಳಿಸಿದ ಹಾಗೆ ನಿತ್ಯಕರ್ಮಗಳು ಎಂದಾಗ ವೇದಗಳು ನಾಲ್ಕು ವಿಧವಾದ ಕರ್ಮಗಳನ್ನು ತಿಳಿಸಿದೆ. ಅವುಗಳೆಂದರೆ:– ನಿತ್ಯಕರ್ಮ, ನೈಮಿತ್ತಿಕಕರ್ಮ, ಕಾಮ್ಯಕರ್ಮ, ಮತ್ತು ಪ್ರತಿಷಿದ್ದಕರ್ಮ.

1. **ನಿತ್ಯಕರ್ಮ:–** ಇದು ಪ್ರತಿನಿತ್ಯವೂ ತಪ್ಪದೆ ಆಯಾ ಸಮಯಕ್ಕೆ ಸರಿಯಾಗಿ ನಡೆಸಲೇಬೇಕಾದದ್ದು. ಇದರಲ್ಲಿ ದೇವಯಜ್ಞ, ಋಷಿಯಜ್ಞ, ಪಿತೃಯಜ್ಞ, ಮನುಷ್ಯಯಜ್ಞ, ಹಾಗೂ ಭೂತಯಜ್ಞ ಎಂಬ ಐದು ವಿಧಗಳಿವೆ. ಈ ನಿತ್ಯಕರ್ಮವನ್ನು ಮಾಡದಿದ್ದಲ್ಲಿ ಪತ್ಯವಾಯವೆಂಬ ದೂಷವುಂಟಾಗುತ್ತದೆಂದು ಮೀಮಾಂಸಕರು ಹೇಳುತ್ತಾರೆ. ಏಕೆಂದರೆ– ಬ್ರಹ್ಮಚರ್ಯದಿಂದ ಋಷಿಗಳ ಋಣ, ಯಜ್ಞವಿಷಯದಿಂದ ದೈವಋಣ, ಪ್ರಜಾ ವಿಷಯಕ್ಕೆ ಬಂದಾಗ ಪಿತೃಋಣಗಳು ತೀರುತ್ತದೆಂದು ಶಾಸ್ತ್ರಗಳು ತಿಳಿಸಿದೆ. ಆದರೆ ಜೀವನದಲ್ಲಿ ವಿರಕ್ತನಾಗಿ ಸನ್ಯಾಸ ಸ್ವೀಕರಿಸಿದವನು ಅವರ ಶಾಸ್ತ್ರವಿಧಿಗೆ ಅನುಗುಣವಾಗಿ ಬಿಡಬಹುದು. ಇದರಿಂದ ಯಾವುದೇ ದೋಷವಾಗುವುದಿಲ್ಲ.

2. **ನೈಮಿತ್ತಿಕಕರ್ಮ:–** ಇದನ್ನು ಯಾವುದಾದರೂ ವಿಶೇಷವಾದ ನಿಮಿತ್ತದಿಂದ ಮಾಡಬೇಕಾಗುವುದು, ಪಿತೃಶ್ರಾದ್ಧ, ಗ್ರಹಣಕಾಲದ ತರ್ಪಣ, ಮುಂತಾದವುಗಳು. ಇದನ್ನು ಮಾಡಿದ್ದಲ್ಲಿ ಪುಣ್ಯಫಲವಿದ್ದೇ ತೀರುತ್ತದೆ. ಇದನ್ನು ಖಂಡಿತವಾಗಿ ಮಾಡಲೇಬೇಕು.

3. **ಕಾಮ್ಯಕರ್ಮ:–** ನಮ್ಮ ಕಾಮನೆಗಳು ಪೂರ್ತಿಯಾಗಿ ಶ್ರುತಿಯು ತಿಳಿಸಿಕೊಟ್ಟಂತೆಯೇ ಲೋಪದೋಷಗಳಿಲ್ಲದೆ ಅತ್ಯಂತ ಎಚ್ಚರಿಕೆಯಿಂದ ಮಾಡುವ ಕರ್ಮವೇ ಕಾಮ್ಯಕರ್ಮ.

4. **ಪ್ರತಿಷಿದ್ದಕರ್ಮ:–** ಕೆಲವೊಂದು ಕರ್ಮಗಳನ್ನು ಮಾಡಲೇಬಾರದು ಎಂದು ತಿಳಿಸಿದೆ. ಯಾವುದೆಂದರೆ “ಸುರಾಂ ನ ಪಿಬೇತ್” ಹೆಂಡವನ್ನು ಕುಡಿಯಬಾರದು, “ನಾಪ್ಸು ಮೂತ್ರ ಪುರೀಷಂ ಕುರ್ಯಾತ್ ನ ನಿಷ್ಠೀವೇತ್ ನ ನಿವಸನ ಸ್ನಾಯಾತ್”

ನೀರಿನಲ್ಲಿ ಮಲ ಮೂತ್ರ ವಿಸರ್ಜನೆ ಮಾಡಬಾರದು, ನೀರಿನಲ್ಲಿ ಉಗುಳಬಾರದು, ನಿರ್ವಸ್ತ್ರದಲ್ಲಿ ಸ್ನಾನ ಮಾಡಬಾರದು, ಇತ್ಯಾದಿಗಳಿಂದ ಪಾಪವುಂಟಾಗುತ್ತದೆ.

ಅಂದ ಮೇಲೆ ಈ ಎಲ್ಲಾ ವಿಧಗಳನ್ನು ಪಾಲಿಸಿದರೆ ಮೋಕ್ಷ ಪ್ರಾಪ್ತಿಯಾಗುತ್ತದೆಯೇ?

ಪುಣ್ಯಕರ್ಮವೆಷ್ಟಿದೆಯೋ ಅಷ್ಟು ಮಾತ್ರವೇ ಸುಖ ಅತಿ ಹೆಚ್ಚಾದ ಪುಣ್ಯಕರ್ಮವು ಹೆಚ್ಚು ಸುಖದ ಲೋಕಗಳನ್ನು ಕೊಡಿಸುತ್ತದೆ. ಕರ್ಮಫಲವು ಮುಗಿದ ನಂತರ ಆ ಲೋಕದಿಂದ ಹಿಂತಿರುಗಬೇಕಾಗುತ್ತದೆ. ಅಂದಹಾಗೆ ಪುಣ್ಯಕರ್ಮದಿಂದ ಮೋಕ್ಷ ಸಿಗುವುದು ಕಷ್ಟ. ಇಷ್ಟೆಲ್ಲಾ ಮಾಡಿದವನಿಗೆ ಹಿಂದಿನ ಜನ್ಮಗಳ ಸಂಚಿತ ಕರ್ಮದ ಅನುಗುಣವಾಗಿ ಜನ್ಮವು ಬಂದೇ ಬರುತ್ತದೆ ಹಾಗೂ ಅದರ ಫಲಗಳಿಗನುಸಾರವಾಗಿ ಜೀವನ ನಡೆಯುತ್ತದೆ. ಚಿತ್ತಶುದ್ಧಿಗೆ ಸಹಾಯವಾಗುತ್ತದೆ.

ಮೋಕ್ಷ ಎಂದರೆ ನಾವು ಎದುರಿಸುತ್ತಿರುವ ಸಂಕಷ್ಟಗಳಿಂದ ನಮಗೆ ಸಿಗುವ ಬಿಡುಗಡೆಯೆಂದಾಗುತ್ತದೆಯಷ್ಟೆ. ಹೇಗೆಂದರೆ ಒಮ್ಮೆ ಬಲಿಯನ್ನು ಮಹಾವಿಷ್ಣುವು ಏಳು ಹೆಡೆಗಳಿದ್ದ ಕಂಬಲ ಮತ್ತು ಅಶ್ವತ್ಥರ ಜಾತಿಯ ನಾಗಪಾಶಗಳಿಂದ ಬಂಧಿಸಿದನು. ಆ ಸಮಯದಲ್ಲಿ ನಾಗಪಾಶಗಳಿಂದ ಬಹಳವಾಗಿ ಪೀಡಿಸಲ್ಪಡುತ್ತಿದ್ದ ಬಲಿಯ ಬಳಿಗೆ ನಾರದರು ಬಂದು ಬಹಳವಾಗಿ ಸಂಕಟಪಡುತ್ತಿದ್ದ ಬಲಿಯನ್ನು ಕಂಡು ನಾರದರು ಈರೀತಿ ಹೇಳಿದರು. "ಮೋಕ್ಷೋ ಪಾಯಂ ದದಾಮಿ ತೇ" ಎಲೈ ಬಲಿರಾಜನೇ ನಾನು ನಿನಗೆ ಈ ಸರ್ಪ ಬಂಧನದಿಂದ ಮುಕ್ತನಾಗಲು ಉಪಾಯವನ್ನು ಹೇಳುತ್ತೇನೆಂದು "ಮೋಕ್ಷವಿಂಶಕ" ಎಂಬ ಹೆಸರಿನ ಸ್ತೋತ್ರಮಾಲೆಯನ್ನು ಉಪದೇಶಿಸಿದರು. ಹರಿವಂಶದ ಭವಿಷ್ಯ ಪುರಾಣದ 27ನೇ ಅಧ್ಯಾಯದ 66ನೇ ಶ್ಲೋಕದಿಂದ 86ನೇ ಶ್ಲೋಕದವರಗೆ ನಾರದರು ಬಲಿಚಕ್ರವರ್ತಿಗೆ ವಿವರಿಸಿದಂತಹ 'ಮೋಕ್ಷವಿಂಶಕ ಸ್ತೋತ್ರ' ಇಲ್ಲಿದೆ. ಅವುಗಳೆಂದರೆ–

1. ಓಂ ನಮೋಸ್ತ್ವನನ್ತಪತಯೇ ಅಕ್ಷಯಾಯ ಮಹಾತ್ಮನೇ ।
ಜಲೇಶಯಾಯ ದೇವಾಯ ಪದ್ಮನಾಭಾಯ ವಿಷ್ಣವೇ ॥

"ಅನಂತನಾಗನಿಗೆ ಅಧಿಪತಿಯಾದ, ಅವಿನಾಶಿಯಾದ, ಮಹಾತ್ಮನಾದ, ಜಲಾಶಯಿಯಾದ, ದಿವ್ಯಸ್ವರೂಪವಾದ, ಕಮಲವನ್ನು ನಾಭಿಯಲ್ಲಿ ಹೊಂದಿರುವ ಭಗವಂತನಾದ ವಿಷ್ಣುವಿಗೆ ನಮಸ್ಕರಿಸುತ್ತೇನೆ."

2. ಸಪ್ತಸೂರ್ಯವಪುಃಕೃತ್ವಾ ತ್ರೀಂಲ್ಲೋಕಾನ್ ಕಾಂಸ್ತವಾನಸೇ ।
ಭಗವನ್ ಕಾಲಕಾಲಸ್ತ್ವಂ ತೇನ ಸತ್ಯೇನ ಮೋಕ್ಷಯ ॥

“ಭಗವಂತನೇ! ನೀನು ಕಾಲನಿಗೂ ಕಾಲನಾಗಿರುವೆ. ನೀನು ಸಪ್ತಸೂರ್ಯರ ತೇಜಸ್ಸಿಗೆಸಮಾನವಾದ ತೇಜೋಮಯವಾದ ಶರೀರವನ್ನು ಧರಿಸಿ ಮೂರು ಲೋಕಗಳನ್ನು ಅತಿಕ್ರಮಿಸಿರುವೆ. ಈ ಸತ್ಯದ ಪ್ರಭಾವದಿಂದ ನನ್ನನ್ನು ಬಂಧಮುಕ್ತನನ್ನಾಗಿ ಮಾಡು.”

3. ನಷ್ಟಚಂದ್ರಾರ್ಕಗಗನೇ ಕ್ಷೀಣಯಜ್ಞತಪಃ ಕ್ರಿಯೇ ।
ಪುನಶ್ಚಿನ್ತಯಸೇ ಲೋಕಾಂಸ್ತೇನ ಸತ್ಯೇನ ಮೋಕ್ಷಯ ॥

“ಮಹಾಪ್ರಳಯದ ಸಮಯದಲ್ಲಿ ಸೂರ್ಯ–ಚಂದ್ರರೂ ಆಕಾಶವೂ ಲಯ ಹೊಂದಿರಲಾಗಿ ಯಜ್ಞಕ್ರಿಯೆಗಳು ಮತ್ತು ತಪಸ್ಸಿನ ರೂಪವಾದ ಕರ್ಮಗಳೂ ಕ್ಷಯಿಸಿರಲಾಗಿ ನೀನು ಸಮಸ್ತ ಲೋಕಗಳ ಸೃಷ್ಟಿಗೂ ಪುನಃ ಚಿಂತಿಸುವೆ. ಈ ಸತ್ಯದ ಪ್ರಭಾವದಿಂದ ನನ್ನನ್ನು ಈ ಬಂಧನದಿಂದ ಮುಕ್ತನನ್ನಾಗಿ ಮಾಡು.”

4. ಬ್ರಹ್ಮರುದ್ರೇನ್ದ್ರವಾಯ್ವಗ್ನಿಸರಿದ್ಭುಜಗಪರ್ವತಾಃ ।
ತ್ವತ್ಸ್ಥಾ ದೃಷ್ಟಾ ದ್ವಿಜೇನ್ದ್ರೇಣ ತೇನ ಸತ್ಯೇನ ಮೋಕ್ಷಯ ॥

“ಮಹಾಪ್ರಳಯಕಾಲದಲ್ಲಿ ದ್ವಿಜಶ್ರೇಷ್ಠನಾದ ಮಾರ್ಕಂಡೇಯನು ಬ್ರಹ್ಮ, ರುದ್ರ, ಇಂದ್ರ, ವಾಯು, ಅಗ್ನಿ, ನದಿಗಳು, ಸರ್ಪಗಳು, ಪರ್ವತಗಳು– ಇವೇ ಮುಂತಾದುವೆಲ್ಲವೂ ನಿನ್ನ ಹೊಟ್ಟೆಯಲ್ಲೇ ಅಡಗಿರುವುದನ್ನು ನೋಡಿದನು. ಇಂತಹ ಸತ್ಯದ ಪ್ರಭಾವದಿಂದ ನೀನು ನನ್ನನ್ನು ಈ ಸರ್ಪಬಂಧನದಿಂದ ಮುಕ್ತಿಗೊಳಿಸು.”

5. ಮಾರ್ಕಣ್ಡೇನ ಪರಕಲ್ಪೇ ಪ್ರವಿಶ್ಯ ಜಠರಂ ತವ ।
ಚರಾಚರಗತಂ ದೃಷ್ಟಂ ತೇನ ಸತ್ಯೇನ ಮೋಕ್ಷಯಾ ॥

“ಪ್ರಳಯಕಾಲದಲ್ಲಿ ಮಾರ್ಕಂಡೇಯಮಹರ್ಷಿಯು ನಿನ್ನ ಉದರವನ್ನು ಪ್ರವೇಶಿಸಿಸಮಸ್ತಚರಾಚರಪ್ರಾಣಿಗಳಿಂದಲೂ ವ್ಯಾಪ್ತವಾದ ಸಂಪೂರ್ಣ ಜಗತ್ತನ್ನು ಅಲ್ಲಿ ನೋಡಿದನು. ಇಂತಹ ಸತ್ಯದ ಪ್ರಭಾವದಿಂದ ನೀನು ನನ್ನನ್ನು ಈ ಬಂಧನದಿಂದ ಮುಕ್ತನನ್ನಾಗಿ ಮಾಡು.”

6. ಏಕೋ ವದ್ಯಾಸಹಾಯಸ್ತ್ವಂ ಯೋಗೀ ಯೋಗಮುಪಾಗತಃ ।
ಪುನಸ್ತ್ರೈಲೋಕ್ಯಮುತ್ಸೃಜ್ಯ ತೇನ ಮೋಕ್ಷಯ ॥

“ಅದ್ವಿತೀಯನಾದ ಮತ್ತು ಮಹಾಯೋಗಿಯಾದ ನೀನು ಯೋಗವನ್ನಾಶ್ರಯಿಸಿ ಯೋಗಮಾಯೆಯ ಸಹಾಯದಿಂದ ಪುನಃ ಮೂರು ಲೋಕಗಳನ್ನು ಸೃಷ್ಟಿಸಿ ಆ ಸೃಷ್ಟಿಯಲ್ಲಿ ಅಂತರ್ಯಾಮಿಯ ಸ್ವರೂಪದಿಂದ ವ್ಯಾಪ್ತನಾಗಿರುವೆ. ಈ ಸತ್ಯದ ಪ್ರಭಾವದಿಂದ ನೀನು ನನ್ನನ್ನು ಈ ಬಂಧನದಿಂದ ಮುಕ್ತಿಗೊಳಿಸು.”

7. ಜಲಶಯ್ಯಾಮುಪಾಸೀನೋ ಯೋಗನಿದ್ರಾಮುಪಾಗತಃ ।
ಲೋಕಾಂಶ್ಚಿನ್ತಯಸೇ ಭೂಯಸ್ತೇನ ಸತ್ಯೇನ ಮೋಕ್ಷಯ॥

"ನೀನು ಜಲಶಯ್ಯೆಯಲ್ಲಿ ಮಲಗಿ ಯೋಗನಿದ್ರೆಯನ್ನಾಶ್ರಯಿಸಿ ಪುನಃ ಲೋಕಗಳನ್ನು ಚಿಂತಿಸುವೆ. ಈ ಸತ್ಯದ ಪ್ರಭಾವದಿಂದ ನನ್ನನ್ನು ಈ ಬಂಧನದಿಂದ ವಿಮುಕ್ತಿಗೊಳಿಸು."

8. ವಾರಾಹಂ ರೂಪಮಾಸ್ಥಾಯ ವೇದಯಜ್ಞಪುರಸ್ಕೃತಮ್ ।
ಧರಿಂ ಜಲೋದ್ಧೃತಾ ಯೇನ ತೇನ ಸತ್ಯೇನ ಮೋಕ್ಷಯ ॥

"ವಾರಾಹರೂಪವನ್ನು ಧರಿಸಿ ವೇದ ಮತ್ತು ಯಜ್ಞಗಳಿಂದ ಗೌರವಿಸಲ್ಪಟ್ಟ ಭೂಮಿಯನ್ನು ಯಾವ ಸತ್ಯದ ಪ್ರಭಾವದಿಂದ ನೀರಿನಿಂದ ಮೇಲಕ್ಕೆತ್ತಿದೆಯೋ ಆ ಸತ್ಯದ ಪ್ರಭಾವದಿಂದ ನನ್ನನ್ನು ಈ ಬಂಧನದಿಂದ ವಿಮುಕ್ತಿಗೊಳಿಸು."

9. ಉದಧೃತ್ಯ ದಂಷ್ಟ್ರಯಂ ಯಜ್ಞಾಂಸ್ತ್ರೀನ್ ಪಿಂಡಾನ್ಕೃತವಾನಸಿ ।
ತ್ವಂ ಪಿತೃಣಾಮಪಿ ಹರೇ ತೇನ ಸತ್ಯೇನ ಮೋಕ್ಷಯಾ ॥

"ಹರಿಯೇ! ನೀನು ನಿನ್ನ ಕೋರೆದಾಡೆಗಳಿಂದ ಯಜ್ಞಗಳನ್ನು ಉದ್ಧರಿಸಿ ಪಿತೃಗಳ ಸಲುವಾಗಿ ಮೂರು ಪಿಂಡಗಳನ್ನು ಇಡುವ ವ್ಯವಸ್ಥೆ ಮಾಡಿರುವೆ. ಈ ಸತ್ಯದ ಪ್ರಭಾವದಿಂದ ನನ್ನನ್ನು ಈ ಬಂಧನದಿಂದ ಮುಕ್ತಿಗೊಳಿಸು."

10. ಪ್ರದುದ್ರುವಃ ಸುರಾಃ ಸರ್ವೇ ಹಿರಣ್ಯಕ್ಷಭಯಾರ್ದಿತಾಃ।
ಪರಿತ್ರಾತಾಸ್ತ್ವಯಾ ದೇವ ತೇನ ಸತ್ಯೇನ ಮೋಕ್ಷಯ ॥

"ದೇವದೇವನೇ! ಸಮಸ್ತದೇವತೆಗಳೂ ಹಿರಣ್ಯಾಕ್ಷನ ಭಯದಿಂದ ಪೀಡಿತರಾಗಿ ಪಲಾಯನಮಾಡುತ್ತಿದ್ದಾಗ ನೀನೇ ಅವರನ್ನು ಸಂರಕ್ಷಿಸಿದೆ. ಈ ಸತ್ಯದ ಪ್ರಭಾವದಿಂದ ನನ್ನನ್ನು ಈ ಬಂಧನದಿಂದ ಮುಕ್ತಿಗೊಳಿಸು."

11. ದೀರ್ಘವಕ್ತ್ರೇಣ ರೂಪೇಣ ಹಿರಣ್ಯಾಕ್ಷಸ್ಯ ಸಂಯುಗೇ।
ಶಿರೋ ಜಹಾರ ಚಕ್ರೇಣ ತೇನ ಸತ್ಯೇನ ಮೋಕ್ಷಯಾ ॥

"ಉದ್ದವಾದ ಮುಖದಿಂದ ಕೂಡಿದ್ದ ವರಾಹದ ರೂಪವನ್ನು ಧರಿಸಿ ಹಿರಣ್ಯಾಕ್ಷನೊಡನೆ ನಡೆದ ಯುದ್ಧದಲ್ಲಿ ನೀನು ಚಕ್ರಾಯುದದಿಂದ ಅವನ ತಲೆಯನ್ನು ಕತ್ತರಿಸಿದೆ. ಈ ಸತ್ಯದ ಪ್ರಭಾವದಿಂದ ನೀನು ನನ್ನನ್ನು ಈ ಸರ್ಪಬಂಧನದಿಂದ ಮುಕ್ತನನ್ನಾಗಿ ಮಾಡು.

12. ಭಗ್ನಮಾರ್ಧಾಸ್ಥೆಮಸ್ತಿಷ್ಕೋ ಹಿರಣ್ಯಕಶಿಪುನಃ ಪುರಾ ।
ಹುಂಕಾರೇಣ ಹತೋ ದೈತ್ಯಸ್ತೇನ ಸತ್ಯೇನ ಮೋಕ್ಷಯ ॥

"ಹಿಂದಿನ ಕಾಲದಲ್ಲಿ ಕೇವಲ ನಿನ್ನ ಹುಂಕಾರದಿಂದಲೇ ಹಿರಣ್ಯಕಶಿಪುವು ಒಡೆದುಹೋದ ತಲೆ, ಮೂಳೆ, ಮತ್ತು ಮೆದುಳುಳ್ಳವನಾಗಿ ಕೊಲ್ಲಲ್ಪಟ್ಟನು. ಈ ಸತ್ಯದ ಪ್ರಭಾವದಿಂದ ನೀನು ನನ್ನನ್ನು ಮುಕ್ತನನ್ನಾಗಿ ಮಾಡು."

13. ದಾನವಾಭ್ಯಾಂ ಹೃತಾ ವೇದಾ ಬ್ರಹ್ಮಣಃ ಪಶ್ಯತಃ ಪುರಾ ।
ಪರಿತ್ರಾತಾಸ್ತ್ವಯಾ ದೇವ ತೇನ ಸತ್ಯೇನ ಮೋಕ್ಷಯ ॥

"ದೇವನೇ! ಪೂರ್ವಕಾಲದಲ್ಲಿ ಬ್ರಹ್ಮನು ನೋಡುತ್ತಿದ್ದಂತೆಯೇ ಮಧು–ಕೈಟಂಭರೆಂಬ ಇಬ್ಬರು ರಾಕ್ಷಸರು ಸಂಪೂರ್ಣ ವೇದಗಳನ್ನು ಅಪಹರಿಸಿಬಿಟ್ಟರು. ಆ ಸಮಯದಲ್ಲಿ ನೀನು ಆ ದೈತ್ಯರನ್ನು ಸಂಹರಿಸಿ ವೇದಗಳನ್ನು ಸಂರಕ್ಷಿಸಿದೆ. ಈ ಸತ್ಯದ ಪ್ರಭಾವದಿಂದ ನೀನು ನನ್ನನ್ನು ಈ ಬಂಧನದಿಂದ ಮುಕ್ತಿ ನೀಡು."

14. ಕೃತ್ವಾಹಯಶಿರೋರೂಪಂ ಹತ್ವಾತು ಮಧುಕೈಟಭೌ ।
ಬ್ರಹ್ಮಣೇ ತೇರ್ಪಿತಾ ವೇದಾಸ್ತೇನ ಸತ್ಯೇನ ಮೋಕ್ಷಯ ॥

"ಆ ಸಮಯದಲ್ಲಿ ನೀನು ಹಯಗ್ರೀವನ ರೂಪದಲ್ಲಿ ಬಂದು ಆ ದೈತ್ಯರನ್ನು ಸಂಹರಿಸಿ ಸಮಸ್ತ ವೇದಗಳನ್ನು ಪುನಃ ಬ್ರಹ್ಮನಿಗೆ ಸಮರ್ಪಿಸಿದೆ. ಈ ಸತ್ಯದ ಪ್ರಭಾವದಿಂದ ನನ್ನನ್ನು ನೀನು ಮುಕ್ತನನ್ನಾಗಿ ಮಾಡು.

15. ದೇವದಾನವಗನ್ಧರ್ವ ಯಕ್ಷಸಿದ್ಧಮಹೋರಗಾಃ ।
ಅನ್ತಂ ತವ ನ ಪಶ್ಯನ್ತಿ ತೇನ ಸತ್ಯೇನ ಮೋಕ್ಷಯ ॥

"ದೇವ, ದಾನವ, ಗಂಧರ್ವರಾಗಲಿ ಯಕ್ಷ, ಸಿದ್ಧ, ಮಹೋರಗಗಳಾಗಲೀ ನಿನ್ನ ಅಂತರವನ್ನು ತಿಳಿದವರಾಗಿಲ್ಲ. ಈ ಸತ್ಯದ ಪ್ರಭಾವದಿಂದ ನೀನು ನನ್ನನ್ನು ಮುಕ್ತನನ್ನಾಗು ಮಾಡು."

16. ಅಪಾನ್ತರತಮಾ ನಾಮ ಜಾತೋ ದೇವಸ್ಯ ವೈಸುತಃ ।
ಕೃತಾಶ್ಚ ತೇನ ವೇದಾರ್ಥಾಸ್ತೇನ ಸತ್ಯೇನ ಮೋಕ್ಷಯ ॥

"ಅಪಾಂತರತಮನೆಂದು ವಿಖ್ಯಾತನಾದ ಮಗನು ಸಮಗ್ರ ವೇದಗಳಿಗೂ ಅರ್ಥರಚಿಸಿದವನು. ಈ ಸತ್ಯದ ಪ್ರಭಾವದಿಂದ ನೀನು ನನ್ನನ್ನು ಬಂಧನದಿಂದ ಮುಕ್ತನನ್ನಾಗಿಮಾಡು."

17. ವೇದಯಜ್ಞಾಗ್ನಿಹೋತ್ರಾಣಿ ಪಿತೃಯಜ್ಞಹವೀಂಷಿ ಚ ।
ರಹಸ್ಯಂ ತವ ದೇವಸ್ಯ ತೇನ ಸತ್ಯೇನ ಮೋಕ್ಷಯ ॥

"ವೇದಗಳು, ಯಜ್ಞಗಳು, ಅಗ್ನಿಹೋತ್ರ, ಪಿತೃಯಜ್ಞ, ಹವಿರ್ಯಜ್ಞ, ಇವುಗಳೇ

ದೇವನಾದ ನಿನ್ನ ರಹಸ್ಯವಾಗಿದೆ. ಈ ಸತ್ಯದ ಪ್ರಭಾವದಿಂದ ನೀನು ನನ್ನನ್ನು ಈ ಬಂಧನದಿಂದ ಮುಕ್ತನನ್ನಾಗಿಮಾಡು."

18. ಋಷಿರ್ದೀರ್ಘತಮಾ ನಾಮ ಜಾತ್ಯನ್ಧೋ ಗುರುಶಾಪತಃ ।
ತ್ವತ್ಪ್ರಸಾದಾಚ್ಚ ಚಕ್ಷುಷ್ಮಾಂಸ್ತೇನ ಸತ್ಯೇನ ಮೋಕ್ಷಯ ॥

"ದೀರ್ಘತಮಸನೆಂಬ ಋಷಿಯು ಗುರುವಿನ ಶಾಪದಿಂದಾಗಿ ಹುಟ್ಟುಕುರುಡನಾಗಿದ್ದನು. ಅವನು ನಿನ್ನ ಕೃಪೆಯಿಂದಾಗಿ ಕಣ್ಣುಗಳನ್ನು ಪುನಃ ಪಡೆದುಕೊಂಡನು. ಈ ಸತ್ಯದ ಪ್ರಭಾವದಿಂದ ನನ್ನನ್ನು ನೀನು ಬಂಧನದಿಂದ ಮುಕ್ತನನ್ನಾಗಿ ಮಾಡು."

19. ಗ್ರಾಹಗ್ರಸ್ತಂ ಗಜೇನ್ದ್ರಂ ಚ ದೀನಂ ಮೃತ್ಯುವಶಂಗತಮ್ ।
ಭಕ್ತಂ ಮೋಕ್ಷಿತವಾಂಸ್ತ್ವಂಹಿ ತೇನ ಸತ್ಯೇನ ಮೋಕ್ಷಯ ॥

"ಮೊಸಳೆಯಿಂದ ಹಿಡಿಯಲ್ಪಟ್ಟಿದ್ದ ಗಜೇಂದ್ರನು ಅತಿದೀನನಾಗಿ ಮೃತ್ಯುಮುಖನಾಗಿಬಿಟ್ಟಿದ್ದನು. ಆ ಸಮಯದಲ್ಲಿ ನೀನು ನಿನ್ನ ಭಕ್ತನಾದ ಗಜೇಂದ್ರನನ್ನು ಪ್ರಾಣಸಂಕಟದಿಂದ ಮುಕ್ತಿಗೊಳಿಸಿದೆ. ಈ ಸತ್ಯದ ಪ್ರಭಾವದಿಂದ ನನ್ನನ್ನು ನೀನು ಈ ಸರ್ಪಬಂಧನದಿಂದ ಮುಕ್ತಿಗೊಳಿಸು."

20. ಅಕ್ಷಯಶ್ಚಾವ್ಯಯಶ್ಚ ತ್ವಂ ಬ್ರಹ್ಮಣ್ಯೋ ಭಕ್ತವತ್ಸಲಃ ।
ಉಚ್ಛ್ರಿತಾನಾಂನಿಯನಾಸ್ತಿ ತೇನ ಸತ್ಯೇನ ಮೋಕ್ಷಯ ॥

"ಪ್ರಭುವೇ! ನೀನು ಅಕ್ಷಯನೂ, ಅವಿನಾಶಿಯೂ, ಬ್ರಾಹ್ಮಣಪ್ರಿಯನೂ, ಆಗಿರುವೆ. ದಾರಿತಪ್ಪಿನಡೆಯುವ ಸ್ವೇಚ್ಛಾಚಾರಿಗಳನ್ನು ನಿಯಂತ್ರಿಸುವೆ. ಈ ಸತ್ಯದ ಪ್ರಭಾವದಿಂದ ನನ್ನನ್ನು ಈ ಸರ್ಪಬಂಧನದಿಂದ ಮುಕ್ತಿಗೊಳಿಸು."

21. ಶಙ್ಖಂ ಚಕ್ರಂ ಗದಾ ಪದ್ಮ ಶಾರ್ಙ್ಗಂ ಗರುಡಮೇವ ಚ ।
ಪ್ರಸಾದಯಾಮಿ ಶಿರಸಾ ತೇ ಬನ್ಧಾನ್ಮೋಕ್ಷಯನ್ತು ಮಾಮ್ ॥

"ಶಂಖ– ಚಕ್ರ– ಗದಾ– ಪದ್ಮಂ– ಶಾರ್ಙ್ಗಧನಸ್ಸು ಮತ್ತು ಗರುಡ– ಇವರುಗಳನ್ನು ನಾನು ತಲೆಬಾಗಿ ನಮಸ್ಕರಿಸಿ ನಿನ್ನನ್ನು ಪ್ರಸನ್ನಗೊಳಿಸಲು ಪ್ರಾರ್ಥಿಸುತ್ತೇನೆ. ಅವರೆಲ್ಲರೂ ನನ್ನನ್ನು ಈ ಬಂಧನದಿಂದ ಮುಕ್ತಿಗೊಳಿಸಲಿ."

ಈ ರೀತಿ ಬಲಿಯು ಭಕ್ತಿಯಿಂದ ಮೇಲಿನ ಶ್ಲೋಕಗಳನ್ನು ಪಠಿಸಿದ್ದರಿಂದ ಭಗವಂತನು ಸಂತುಷ್ಟನಾಗಿ ಬಲಿಯನ್ನು ಬಂಧನದಿಂದ ಮುಕ್ತಿಗೊಳಿಸಿದನು. ಅಂದರೆ ಸಂಕಷ್ಟಗಳಿಂದ ನಾವು ಮುಕ್ತರಾಗಲು ಮಾತ್ರ ಸಾಧ್ಯವೇ ವಿನಃ ಪರಮಮುಕ್ತಿಯನ್ನು ಹೊಂದಲು ಸಾಧ್ಯವಿಲ್ಲವೆಂದಾಯಿತು.

ಭೀಷ್ಮೋವಾಚ ಪಾಪವಿರಾಪಹರಣ ಸ್ತೋತ್ರ

ಇದೇರೀತಿ ಪಾಪ ಪರಿಹಾರ ಮಾಡಿಕೊಳ್ಳಲು ಪಾಪವಿರಾಪಹರಣ ಎಂದು ಮಹಾಭಾರತದಲ್ಲಿ ಭೀಷ್ಮರು ತಿಳಿಸಿದ್ದಾರೆ.

1. ಏಷಮೇ ಸರ್ವಧರ್ಮಾಣಾಂ ಧರ್ಮೋಧಿಕ ತಮೋ ಮತಃ।
ಯದ್ಬಕ್ತ್ಯಾಪುಂಡರೀಕಾಕ್ಷಂ ಸ್ತವೈರರ್ಚನ್ನರಸ್ಸದಾ॥

"ಭಕ್ತಿಯಿಂದ ಪುಂಡರೀಕಾಕ್ಷನನ್ನು ಸ್ತೋತ್ರಗಳಿಂದ ಅರ್ಚಿಸುವುದೇ ಎಲ್ಲಾಧರ್ಮಗಳಿಗಿಂತ ಹೆಚ್ಚಿನ ಧರ್ಮವೆಂದು ಭೀಷ್ಮಾಚಾರ್ಯರು ತಿಳಿಸಿದ್ದಾರೆ."

2. ಜ್ಞಾನತೋ ಅಜ್ಞಾನತೋ ವಾಸುದೇವಸ್ಯಕೀರ್ತನಾತ್ ।
ತತ್ಸರ್ವಂ ವಿಲಯಂ ಯಾತಿ ತೋಯಸ್ಥಂ ಲವಣಂ ಯಥಾಂ ॥

"ತಿಳಿದೋ ತಿಳಿಯದೆಯೋ ಭಗವಂತನ ಕೀರ್ತನೆ ಮಾಡಿದರೆ ಪಾಪವೆಲ್ಲವೂ ನೀರಿನಲ್ಲಿ ಉಪ್ಪು ಕರಗುವಂತೆ ಕರಗಿಹೋಗುತ್ತದೆ."

3. ಶಮಾಯಾಲಂ ಜಲಂ ವಹ್ನೇಸ್ತಮಸೋ ಭಾಸ್ಕರೋದಯಃ ।
ಶಾತಿಃ ಕಲೌ ಹ್ಯಘೌಘಸ್ಯ ನಾಮ ಸಂಕೀರ್ತನಂ ಹರೇಃ ॥

"ಬೆಂಕಿಯನ್ನು ಆರಿಸುವುದಕ್ಕೆ ನೀರು ಸಾಕು, ಕತ್ತಲೆಯನ್ನು ಹೋಗಲಾಡಿಸುವುದಕ್ಕೆ ಸೂರ್ಯೋದಯ ಸಾಕು, ಕಲಿಯುಗದಲ್ಲಿ ಪಾಪವನ್ನು ನಾಶಪಡಿಸಲು ಹರಿನಾಮಸಂಕೀರ್ತನೆಯೊಂದೇ ಸಾಕು."

4. ಹರೇರ್ನಾಮೈವ ನಾಮೈವ ನಾಮೈವ ಮಮ ಜೀವನಮ್ ।
ಕಲೌ ನಾಸ್ತ್ಯೇವ ನಾಸ್ತ್ಯೇವ ನಾಸ್ತ್ಯೇವ ಗತಿರವ್ಯಥಂ ॥

"ಶ್ರೀಹರಿಯ ನಾಮವೇ, ನಾಮವೇ, ನಾಮವೇ, ನನ್ನ ಜೀವನವಾಗಿದೆ, ಕಲಿಯುಗದಲ್ಲಿ ಬೇರೋಂದು ಗತಿಯಿಲ್ಲವೇ ಇಲ್ಲ, ಇಲ್ಲವೇ ಇಲ್ಲ, ಇಲ್ಲವೇ ಇಲ್ಲ– ಎಂದು ನಾರದೀಯ ಪುರಾಣ ಹೇಳುತ್ತದೆ."

5. ಗಂಗಾಸ್ನಾನ ಸಹಸ್ರೇಷು ಪುಷ್ಕರಸ್ನಾನ ಕೋಟಿಷು ।
ಯತ್ಪಾಪಂ ವಿಲಯಂ ಯಾತಿ ಸ್ಮೃತೇ ನಶ್ಯತಿ ತದ್ಧರೌ ॥

"ಸಾವಿರಾರು ಗಂಗಾಸ್ನಾನ ಕೋಟಿಗಟ್ಟಲೆ ಪುಷ್ಕರಸ್ನಾನದಿಂದಲೂ ಎಷ್ಟು ಪಾಪವು ನಾಶವಾಗುತ್ತದೆಯೋ ಅಷ್ಟೂ ಶ್ರೀಹರಿಯ ಸ್ಮರಣೆಯಿಂದ ಹೊರಟುಹೋಗುತ್ತದೆ ಎಂಬುದಾಗಿ ಗರುಡಪುರಾಣವು ತಿಳಿಸುತ್ತದೆ."

ಕಲಿಯುಗದ ಬಗ್ಗೆ ವ್ಯಾಸರ ವಿವರಣೆ

ವಿಶೇಷವೆಂದರೆ ನಾವು ಈಗ ಕಲಿಯುಗದಲ್ಲಿದ್ದು ಕೃತ, ತ್ರೇತಾ, ದ್ವಾಪರ ಯುಗಗಳಲ್ಲಿ ಋಷಿಗಳು, ತಪಸ್ವಿಗಳು, ಜ್ಞಾನಿಗಳು, ಮುಂತಾದವರುಗಳು ನಡೆಸಿದಂತಹ ಯಾವುದೇ ವಿಧವಾದ ಕಾರ್ಯಗಳನ್ನು ಮಾಡಲು ಸಾಧ್ಯವಿಲ್ಲ ಹಾಗೂ ಅಂತಹ ಮಹನೀಯರು ಅನುಸರಿಸಿದ ಮಾರ್ಗದಲ್ಲಿ ಶೇ.10ರಷ್ಟು ಭಾಗವನ್ನೂ ಸಹ ಕ್ರಮಿಸಲು ಅಸಾಧ್ಯವಾಗುತ್ತದೆ.

ಕಲಿಯುಗದವಿಷಯವಾಗಿ ವ್ಯಾಸಮಹಾಮುನಿಗಳು ವಿವ- ರಿಸುತ್ತಾರೆ (ವಿ.ಪು.. ಷಷ್ಠ.2.ಅಧ್ಯಾಯ). ಒಮ್ಮೆ ಮುನಿಗಳ ನಡುವೆ ವಾದಗಳುಂಟಾಯಿತು. ಯಾವ ಕಾಲದಲ್ಲಿ ಅಲ್ಪಕಾಲ ಪೂಜೆಯಿಂದ ಭಗವಂತನು ತೃಪ್ತಿಯಾಗುತ್ತಾನೆ. ಅಲ್ಪವಾದ ಧರ್ಮಾನುಷ್ಠಾನವೂ ಮಹತ್ತರವಾದ ಫಲಗಳನ್ನು ಕೊಡುತ್ತದೆ. ಯಾರು ಸುಖವಾಗಿ ಪುಣ್ಯಕಾರ್ಯವನ್ನಾಚರಿಸಬಲ್ಲರು ಎಂಬ ವಿಚಾರದಲ್ಲಿ ಚರ್ಚೆಯೇರ್ಪಟ್ಟಿದ್ದು, ಆಗ ಎಲ್ಲರೂ ತಮ್ಮ ಸಂದೇಹವನ್ನು ಪರಿಹರಿಸಿಕೊಳ್ಳಲು ವೇದವ್ಯಾಸ ಮಹಾಮುನಿಗಳ ಬಳಿಗೆಹೋದರು. ಆ ಸಮಯದಲ್ಲಿ ವೇದವ್ಯಾಸರು ಗಂಗಾ ನದಿಯಲ್ಲಿ ಸ್ನಾನಮಾಡುತ್ತಿದ್ದರು. ಅವರ ದಿವ್ಯದೃಷ್ಟಿಗೆ ಮುನಿಗಳು ಬಂದ ವಿಚಾರ ಹಾಗೂ ಅವರ ಪ್ರಶ್ನೆಗಳು ಗೋಚರವಾಯಿತು. ಅವರು ಒಮ್ಮೆ ಗಂಗಾಜಲದಲ್ಲಿ ಮುಳುಗಿ ಎಲ್ಲರಿಗೂ ಕೇಳಿಸುವಂತೆ ಶೂದ್ರನೇ ಧನ್ಯ, ಕಲಿಯುಗವೇ ಧನ್ಯ ಎಂದು ಉದ್ಗರಿಸಿದರು. ನಂತರ ಗಂಗೆಯಲ್ಲಿ ಮುಳುಗಿ ಎದ್ದು ಭಲೇ ಭಲೇ ಶೂದ್ರ ಧನ್ಯ ನೀನು ಎಂದು ಉದ್ಗರಿಸಿದರು. ನಂತರ ಮುಳುಗಿ ಎದ್ದು ಭೂ ಸ್ತ್ರೀಯರೇ ಧನ್ಯರು ಅವರಿಗಿಂತ ಧನ್ಯರು ಯಾ- ರಿದ್ದಾರೆ ಎಂದರು. ನಂತರ ವ್ಯಾಸಮುನಿಗಳು ನಿತ್ಯಕರ್ಮಗಳನ್ನು ಮುಗಿಸಿ ವಿಶ್ರಾಂತರಾದಾಗ ಮುನಿಪುಂಗವರು ತಮ್ಮ ಸಂದೇಹ ನಿವಾರಣೆಗೆಂದು ಬಂದು ತಮ್ಮ ಪ್ರಶ್ನೆಯನ್ನು ವ್ಯಾಸರ ಬಳಿ ಕೇಳಿದರು. ಆಗ ವ್ಯಾಸರು ಹೇಳುತ್ತಾರೆ– "ಎಲೈ ದ್ವಿಜರೇ, ಕೃತಯುಗದಲ್ಲಿ ತಪಸ್ಸು, ಬ್ರಹ್ಮಚರ್ಯ ಜಪ, ಮುಂತಾದವುಗಳನ್ನು ನಡೆಸಲು ಹತ್ತು ವರ್ಷಗಳ ಕಾಲ ಬೇಕಾಗುತ್ತದೆ. ಅದೇ ಕರ್ಮಗಳನ್ನು ನಡೆಸಲು ತ್ರೇತಾಯುಗದಲ್ಲಿ ಒಂದು ವರ್ಷ ಅವಧಿ ಬೇಕಾಗುತ್ತದೆ. ಅದೇ ಕರ್ಮಗಳನ್ನು ನಡೆಸಲು ದ್ವಾಪರಯುಗದಲ್ಲಿ ಕೆಲವು ಮಾಸಗಳು ಬೇಕಾಗುತ್ತದೆ. ಆದರೆ ಕಲಿಯುಗದಲ್ಲಿ ಒಂದು ಅಹೋರಾತ್ರಿ ಕಾಲ ಆಚರಿಸಿದರೆ ಸಾಕು ಅದೇ ಫಲವನ್ನು ಮನುಷ್ಯನು ಪಡೆಯುತ್ತಾನೆ. ಆದ್ದರಿಂದ ಕಲಿಯುಗವೇ ಶ್ರೇಷ್ಠವಲ್ಲವೇ.

ಮತ್ತೆ ವ್ಯಾಸರು ಹೇಳುತ್ತಾರೆ-" ಕೃತಯುಗದಲ್ಲಿ ಕೇಶವನನ್ನು ಧ್ಯಾನಿಸುವುದರಿಂದ, ತ್ರೇತಾಯುಗದಲ್ಲಿ ಯಜ್ಞಕರ್ಮಗಳಿಂದಲೂ, ದ್ವಾಪರಯುಗದಲ್ಲಿ ದೇವತಾರ್ಚನೆಯಿಂದಲೂ, ಕಲಿಯುಗದಲ್ಲಿ ಭಗವಂತನ ನಾಮಸ್ಮರಣೆ ಮಾತ್ರದಿಂದಲೂ ಪುಣ್ಯವು ಲಭಿಸುತ್ತದೆ.

ನಾಮಸ್ಮರಣಾತ್ ಅನ್ಯೋಪಾಯಂ ನಹಿಪಶ್ಯಾಮೊ ಭವತರಣೇ ॥

ಹಾಗಾದರೆ ಪರಮದುರ್ಲಭವಾದ ಮೋಕ್ಷ ಪ್ರಾಪ್ತಿಗೆ ಮೊದಲು ನಿತ್ಯ, ನೈಮಿತ್ತಿಕ, ಕಾಮ್ಯ ಕರ್ಮಗಳನ್ನು ಮಾಡಿ ಹೆಚ್ಚಿನ ಪುಣ್ಯಗಳನ್ನು ಪಡೆದರೆ ಇಹಜನ್ಮ ಹಾಗೂ ಜನ್ಮ ಜನ್ಮಾಂತರಗಳಲ್ಲಿಯೂ ವಿಶೇಷವಾದ ಕೀರ್ತಿ, ಯಶಸ್ಸುಗಳನ್ನು ಗಳಿಸಲು ಸಾಧ್ಯವಾಗುತ್ತದೆ ಎಂದಾಯಿತಲ್ಲವೇ? ಈಗ ನೈಮಿತ್ತಿಕ ಕರ್ಮಗಳಲ್ಲೊಂದಾದಂತಹ ಪಿತೃಕಾರ್ಯಗಳ ಕ್ರಮಗಳನ್ನು ವಿಧಾನಗಳನ್ನು ಹಾಗೂ ಅದರ ಧರ್ಮಾಚಾರಗಳನ್ನು ತಿಳಿಯಲು ಪ್ರಯತ್ನಿಸೋಣ. ಮೊದಲಿಗೆ ಪಿತೃಕರ್ಮ ಎಂದರೇನು? ಪಿತೃಕರ್ಮಗಳನ್ನು ಮಾಡುವ ವಿಧಾನವು ಹೇಗೆ? ಯಾರು ಮಾಡಬೇಕು? ಅದರ ಕಟ್ಟುಪಾಡುಗಳೇನು? ಪಿತೃಗಳು ಯಾರು? ಕಾರುಣ್ಯಪಿತೃಗಳು ಯಾರು? ಹೀಗೆ ಅನೇಕ ಪ್ರಶ್ನೆಗಳು ನಮ್ಮಲ್ಲಿ ಮೂಡುತ್ತದೆ. ಈ ವಿಚಾರವಾಗಿ ನಾವು ಪುರಾಣಗಳನ್ನು ವಿಮರ್ಶಿಸಿದಾಗ ಮೊದಲು ಬ್ರಹ್ಮನು ವರ್ಣಗಳು ಮತ್ತು ಆಶ್ರಮಗಳ ಧರ್ಮಗಳನ್ನೂ ತಮ್ಮ ಧರ್ಮಗಳನ್ನು ಚೆನ್ನಾಗಿ ಪಾಲಿಸುವ ಎಲ್ಲಾ ವರ್ಣದವರಿಗೆ ತಕ್ಕ ಲೋಕಗಳನ್ನೂ ಗೊತ್ತು ಮಾಡಿದನು. ಕ್ರಿಯಾಶೀಲರಾದ ಬ್ರಾಹ್ಮಣರಿಗೆ ಪಿತೃಲೋಕವನ್ನು, ಯುದ್ಧದಲ್ಲಿ ಹಿಮ್ಮೆಟ್ಟದ ಕ್ಷತ್ರಿಯರಿಗೆ ಇಂದ್ರಲೋಕವನ್ನೊ, ಸ್ವಧರ್ಮ ನಿಷ್ಠರಾದ ವೈಶ್ಯರಿಗೆ ವಾಯುಲೋಕವನ್ನೂ, ಪರಿಚರ್ಯ ವೃತ್ತಿಯನ್ನು ಮಾಡುವ ಶೂದ್ರರಿಗೆ ಗಂಧರ್ವಲೋಕವನ್ನೂ ಗೊತ್ತು ಮಾಡಿದನು.

ಇದರೊಂದಿಗೆ ಧರ್ಮನಿಷ್ಠರಾದ ಮುನಿಗಳಿಗೆ ಊರ್ದ್ವರೇತಸ್ಕ-ರಿಗೆ ಬ್ರಹ್ಮಲೋಕ ಪ್ರಾಪ್ತವಾಗುತ್ತದೆ. ವಾನಪ್ರಸ್ತರಿಗೆ ಸಪ್ತರ್ಷಿಲೋಕವು, ಗೃಹಸ್ತರಿಗೆ ಪಿತೃಲೋಕವು ಹಾಗೂ ಸನ್ಯಾಸಿಗಳಿಗೆ ಬ್ರಹ್ಮಲೋಕವು ಪ್ರಾಪ್ತವಾಗುತ್ತದೆ. ಸದಾ ಬ್ರಹ್ಮ ಚಿಂತನೆಯಲ್ಲಿರುವವರಿಗೆ ಮೋಕ್ಷ ಪ್ರಾಪ್ತಿಯಾಗುತ್ತದೆ.

ಸಂಸ್ಕಾರ ವಿಧಿಗಳು

ಮೃತರಾದವರಿಗೆ ಪಿತೃಲೋಕ ಪ್ರಾಪ್ತವಾಗಬೇಕಾದರೆ ನಾವು ಯಾವ ರೀತಿಯಲ್ಲಿ ಅಂತ್ಯ ಸಂಸ್ಕಾರವನ್ನು ನಡೆಸಬೇಕು. ಅದರ ವಿಧಿ ವಿಧಾನಗಳು ಹೇಗೆ ಎಂಬುದನ್ನು ತಿಳಿಯೋಣ.

ನಿತ್ಯ ನೈಮಿತ್ತಕಾದಿ ಶ್ರಾದ್ಧಕರ್ಮಗಳ ವರ್ಣನೆ:
"ನಿತ್ಯಂ ನೈಮಿತ್ತಿಕಂ ಚೈವ ನಿತ್ಯಾನೈಮಿತ್ತಿಕಂ ತಥಾ ।
ಗೃಹಸ್ತಸ್ಯೋಥಾಕರ್ಮ ತನ್ನಿಶಾಮಿಯ ಪುತ್ರಕ ॥

ಗೃಹಸ್ಥಾಶ್ರಮಿಗೆ ನಿತ್ಯ, ನೈಮಿತ್ತಿಕ, ಹಾಗೂ ನಿತ್ಯ ನೈಮಿತ್ತಿಕ ಎಂಬ ಮೂರು ವಿಧವಾದ ಕರ್ಮಗಳು ವಿಧಿಸಲ್ಪಟ್ಟಿವೆ.

1. ನಿತ್ಯಕರ್ಮ ಎಂದರೆ ನಿಯತವಾದ, ಬಿಡದೆ ಅವಶ್ಯಕವಾಗಿ ಮಾಡಬೇಕಾದ ಕರ್ಮ ಎಂದರೆ ಸಂಧ್ಯಾವಂದನೆ, ಪಂಚಯಜ್ಞಗಳು, ಏಕಾದಶೀ ಉಪವಾಸ, ಮುಂತಾದವುಗಳು.

2. ನೈಮಿತ್ತಿಕ ಕರ್ಮ ಎಂದರೆ ಒಂದು ಕಾರಣವನ್ನು ಆಶ್ರಯಿಸಿ ಬಂದ ಕರ್ಮ, ಸ್ನಾನ, ದಾನ, ಪ್ರಾಯಶ್ಚಿತ್ತ, ಗ್ರಹಣಸ್ನಾನ, ಪಾಪಪರಿಹಾರಕ್ಕಾಗಿ ಮಾಡುವ ದಾನ, ಜಪ, ಹೋಮ, ರಜಸ್ವಲಾದಿ ಸ್ಪರ್ಶ, ಅಜ್ಞಾನದಿಂದ ಮಾಡುವ ಪಾಪ ಕರ್ಮಗಳು ಮುಂತಾದವುಗಳಿಂದಾಗಿ ಮಾಡುವ ಪ್ರಾಯಶ್ಚಿತ್ತ ಕರ್ಮಗಳು.

3. ನಿತ್ಯ ನೈಮಿತ್ತಿಕ ಎಂದರೆ ನಿತ್ಯವಾದ, ನೈಮಿತ್ತಿಕವೂ ಆದ ಕರ್ಮಗಳು ಪರ್ವಕಾಲದಲ್ಲಿ ಮಾಡುವ ಶ್ರಾದ್ಧಗಳು ಮುಂತಾದವು.

ಈ ಕಾರ್ಯಗಳೊಂದಿಗೆ ಪಂಚಯಜ್ಞಗಳೂ ನಿತ್ಯಕರ್ಮಗಳೆಂದೇ ಕರೆಯಲ್ಪಡುತ್ತವೆ. ಅದು ಯಾವುವು ಎಂದರೆ ಗೃಹಸ್ಥನು ಆಚರಿಸಬೇಕಾದ ಐದು ಮಹಾಯಜ್ಞಗಳು:–

1. ಬ್ರಹ್ಮಯಜ್ಞ : ಅಧ್ಯಯನ, ಅಧ್ಯಾಪನ, ಮುಂತಾದವು.
2. ದೇವಯಜ್ಞ : ಅಗ್ನಿಕಾರ್ಯ, ನಿತ್ಯಹೋಮ, ದೇವತಾರ್ಚನೆ.
3. ಪಿತೃಯಜ್ಞ : ತರ್ಪಣ, ಶ್ರಾದ್ಧಕರ್ಮ.
4. ಬೂತಯಜ್ಞ : ಬಲಿಹರಣ, ಮುಂತಾದವು.
5. ಮನುಷ್ಯಯಜ್ಞ : ಅತಿಥಿ ಸತ್ಕಾರ.

ಇಲ್ಲಿ ಪಿತೃಗಳು ಎಂದಾಗ– ಸಪಿಂಡರು, ಸಮಾನೋದಕರು ಹಾಗೂ ಜ್ಞಾತಿಗಳು ಎಂದು ಮೂರು ವಿಧವಾಗಿದೆ.

ತಂದೆಯಿಂದ ಹಿಡಿದು 7ನೇತಲೆಮಾರಿನವರೆಗೆ ಮತ್ತು ತಾಯಿಯಿಂದ ಹಿಡಿದು 5ನೇ ತಲೆಮಾರಿನವರೆಗೆ 'ಸಪಿಂಡೀಕರು' ಎಂದು ಹೇಳುತ್ತಾರೆ. ಹಾಗೆಯೇ ತಂದೆಯಿಂದ 8ರಿಂದ 15ರವರೆಗೆ 'ಸಮಾನೋದಕರು'ಹಾಗೂ 16ರಿಂದ 21ನೇ ತಲೆಮಾರಿನವರೆಗೂ 'ಜ್ಞಾತಿಗಳು'ಎಂದು ಕರೆಯುತ್ತಾರೆ.ಪಿತೃಕಾರ್ಯ ಎಂದಾಗ ಮೊದಲು ನಾವು ಪಿತೃಗಳ ಶುಶ್ರೂಷೆಗಳಿಂದ ಪ್ರಾರಂಭವಾಗುತ್ತದೆ. ಪಿತೃಗಳು ತಮ್ಮ ಮರಣದ ಪೂರ್ವದಲ್ಲಿ ಮಕ್ಕಳ ಕರ್ತವ್ಯಗಳೇನು ಎಂಬುದನ್ನು ನಾವು ತಿಳಿಯಬೇಕು. ಈ ವಿಚಾರಗಳನ್ನು ಕೆಲವು ಗ್ರಂಥಗಳಲ್ಲಿ ಈ ಕೆಳಗಿನಂತೆ ವಿವರಿಸಿರುತ್ತಾರೆ.

ಸಾಮಾನ್ಯವಾಗಿ ಮರಣಕಾಲ ಸಮೀಪಿಸಿದಾಗ ವ್ಯಕ್ತಿಯ ಬಳಿ ಮಾಡಬೇಕಾದ ಜಪದ ಕ್ರಮ:–

ವ್ಯಕ್ತಿಗೆ ಮರಣ ಕಾಲವು ಸಮೀಪಿಸಿದಾಗ ತುಳಸೀಹಾರ, ಊರ್ಧ್ವಪುಂಡ್ರ, ಗಂಗಾಮೃತ್ತಿಕೆ

ಮೊದಲಾದವುಗಳಿಂದ ಅಲಂಕರಿಸಿ ಗೋಮಯದಿಂದ ಲೇಪಿಸಿದ ನೆಲದ ಮೇಲೆ ದರ್ಭೆಗಳನ್ನು ಹಾಸಿ ಅದರ ಮೇಲೆ ಕುಳಿತು ತನ್ನ ಮಗನ ಮಡಿಲಲ್ಲಿ ಮಲಗಿ "ನಾನಾನಮಿತಿ ಸೂಕ್ತಸ್ಯ ಶಿಶಿರಾಂಗಿರಸಃ ಪವಮಾನಃ ಸೋಮನಃ ಸಕ್ತಿಃ ಅಮೃತತ್ವ ಪ್ರಾಪ್ತಯೋಜತೇ ಶ್ರವಣೇ ವಾ ವಿನಿಯೋಗಃ"ಎಂದು ಸಂಕಲ್ಪ ಮಾಡಿ ಆಮೇಲೆ ಪಠಿಸಬೇಕು. ಅಂ–ದರೆ ಅಮೃತತ್ವ ಪ್ರಾಪ್ತಿಯಾಗುವುದಕ್ಕಾಗಿ ಸಾಧ್ಯವಾದರೆ ಪಠಣ ಅಥವಾ ಶ್ರವಣವನ್ನು ಮಾಡಬೇಕು. ಇಲ್ಲವಾದ ಪಕ್ಷದಲ್ಲಿ ಉಪನಿಷತ್ತಿನ ಕೆಲವು ಭಾಗಗಳನ್ನಾದರೂ, ಇಲ್ಲವಾದರೆ ಪುಣ್ಯಸೂಕ್ತಗಳನ್ನಾದರೂ, ಇಲ್ಲವಾದಲ್ಲಿ ಭಗವದ್ಗೀತೆ ಸ್ತೋತ್ರ ಇತ್ಯಾದಿಗಳನ್ನಾದರೂ, ರಾಮನಾಮವನ್ನಾದರೂ ಪಠಿಸುತ್ತಿರಬೆಕು. ನಂತರ ಮರಣವಾದ ಮೇಲೆ ಕರ್ತೃವು (ಮಗನು) ನಿತ್ಯಕರ್ಮಗಳನ್ನು ಮುಗಿಸಿ ಮುಂದಿನ ಕರ್ಮಗಳಿಗೆ ಸಿದ್ಧತೆಯನ್ನು ನಡೆಸಬೇಕು. ಈ ಸಂದರ್ಭದಲ್ಲಿ ಮಿಕ್ಕ ಎಲ್ಲಾ ಮಕ್ಕಳೂ ಅವರಿಗೆ ಸಹಕರಿಸಿ ಕರ್ಮಗಳನ್ನು ನಡೆಸಬೇಕಾಗುತ್ತದೆ. ಈ ಸಂದರ್ಭದಲ್ಲಿ ಕರ್ಮಾಧಿಕಾರ ನಿರ್ಣಯವನ್ನು ತಿಳಿಯುವುದು ಮುಖ್ಯ.

ಕರ್ಮಾಧಿಕಾರ

ಮಗ, ಮೊಮ್ಮಗ ಈ ರೀತಿ ಪುರುಷ ಸಂತತಿಯವರು ಮುಖ್ಯರಾಗಿರುತ್ತಾರೆ. ಗಂಡು ಮಕ್ಕಳಿಲ್ಲದವರಿಗೆ ಮಗಳ ಮಗನು ಉತ್ತರಾಧಿಕಾರಿಯಾಗುತ್ತಾನೆ ಅಥವಾ ಅವನ ಸಂತತಿಯವರು ಇರುತ್ತಾರೆ. ಇಲ್ಲವಾದಲ್ಲಿ ದತ್ತು ಪುತ್ರ ಅಥವಾ ಅವನ ಸಂತತಿಯವರು ಅಥವಾ ಮರಣ ಹೊಂದಿದ ವ್ಯಕ್ತಿಯ ಧನ, ಆಸ್ತಿಗೆ ಅಧಿಕಾ-ರಿಯಾಗಿರುವವರು, ಅಥವಾ ಭ್ರಾತೃ, ಅವನ ಮಗ, ತಂದೆ, ತಾಯಿ, ಹೆಂಡತಿ, ಮಗನ ಮಗನು, ಮಗಳ ಮಗನು, ಮೊಮ್ಮಗನ ಹೆಂಡತಿ, ಅವನ ಮಗಳು , ತಂಗಿ, ತಂಗಿಯ ಮಗ, ಅಥವಾ ಸಪಿಂಡರು, ಸಮಾನೋದಕರು, ಮಾತೃ ಸಪಿಂಡರು, ಮಾತೃ ಸಮಾನೋದಕರು, ಸ್ವಗೋತ್ರಜರು, ಶಿಷ್ಯರು, ಋತ್ವಿಜರು, ಗುರು, ಆಚ-ರ್ಯ, ಸಹಪಾಠಿ, ಜಾಮಾತೃ, ಸ್ನೇಹಿತ ಅಥವಾ ರಾಜ, ಇವರುಗಳು ಕ್ರಮವಾಗಿ ಶಾಸ್ತ್ರೋಕ್ತ ಅಧಿಕಾರಿಗಳಾಗಿರುತ್ತಾರೆ. ಇವರುಗಳಲ್ಲಿ ಯಾರೂ ಒಬ್ಬರಾದರೂ ಇದ್ದು ಅವರ ಆರೋಗ್ಯ ಸರಿಯಿಲ್ಲವಾದ ಪಕ್ಷದಲ್ಲಿ ಅಗ್ನಿ ಸ್ಪರ್ಶವನ್ನು ಮಾತ್ರ ಮಾಡಿ ಮಿಕ್ಕ ಕಾರ್ಯಗಳಿಗೆ ಬೇರೆಯವರು ಅವರ ಪ್ರತಿನಿಧಿಯಾಗಬಹುದು.

ಒಂದು ಪಕ್ಷದಲ್ಲಿ ಅನೇಕ ಪತ್ನಿಯರಲ್ಲಿ ಅನೇಕ ಮಕ್ಕಳು ಹುಟ್ಟಿದ್ದರೆ ಯಾರು ಅವರುಗಳಲ್ಲಿ ದೊಡ್ಡವನೋ ಅವನೇ ಕರ್ಮಾಧಿಕಾರಿಯಾಗಿರುತ್ತಾನೆ. ಆದರೆ ತಾಯಂದಿರ ವಿಷಯಕ್ಕೆ ಬಂದಾಗ ಆಯಾ ತಾಯಿಗೆ ಅವಳ ಮಗನೇ ಅಧಿಕಾರಿಯಾಗಿರುತ್ತಾನೆ. ಅವನಿಲ್ಲದಿದ್ದಲ್ಲಿ ಮಾತ್ರ ಇತರ ತಾಯಂದಿರ ಮಕ್ಕಳಲ್ಲಿ ಜ್ಯೇಷ್ಠನು ಅಧಿಕಾರಿಯಾಗಿರುತ್ತಾನೆ. ತಂದೆಗೆ ಪುತ್ರ-ಪೌತ್ರಗಳಿಲ್ಲದಿದ್ದಾಗ ದತ್ತು ಪುತ್ರನಿಗೆ ಅಥವಾ ಇತರರಿಗೆ ಅಧಿಕಾರವಿರುತ್ತದೆ. ಇಲ್ಲವಾದರೆ ಅವನ ಆಸ್ತಿಯನ್ನು ಯಾರು ಉಪಭೋಗಿಸಿರುತ್ತಾರೆಯೋ ಅವರೇ ಕರ್ಮಾಧಿಕಾರಿಯಾಗಿರುತ್ತಾರೆ. ಅವಳಿ-ಜವಳಿ ಪುತ್ರರಾದಲ್ಲಿ ಹಿರಿಯನು ಅಧಿಕಾರಿಯಾಗುತ್ತಾನೆ.

ಬ್ರಹ್ಮಚಾರಿಯಾದವನು ತಂದೆ, ತಾಯಿ, ಮಕ್ಕಳಿಲ್ಲದ ಪಿತಾಮಹ, ಪಿತಾಮಹಿ, ಅಣ್ಣನ ಮಗ, ಗುರು, ಆಚಾರ್ಯ, ಮಾತಾಮಹಾ, ಮಾತಾಮಹಿ, ಮಾತುಲ, ಅವನ ಪತ್ನಿ, ಚಿಕ್ಕ ತಂದೆ, ದೊಡ್ಡ ತಂದೆ, ಇಷ್ಟುಮಂದಿಯ ಕ್ರಿಯೆಗಳನ್ನು ಮಾತ್ರ ಮಾಡಬಹುದು.

ಅಕಸ್ಮಾತ್ ಮೇಲಿನವರನ್ನು ಬಿಟ್ಟು ಬೇರೆಯವರಿಗೆ ಸಂಸ್ಕಾರವನ್ನು ಮಾಡಿದರೆ ಅಂತಹವರಿಗೆ ಪುನಃ ಉಪನಯನವನ್ನು ಮಾಡಬೇಕು. ಒಂದೊಮ್ಮೆ ಮೂರು ವರ್ಷ ಪ್ರಾಯವಿದ್ದಾಗ ತಂದೆ-ತಾಯಿಗಳು ಮೃತರಾದಲ್ಲಿ ಉಪನಯನವಾಗದಿದ್ದರೂ ಸಹ ಅವನು ಸಂಸ್ಕಾರವನ್ನು ಮಾಡಬಹುದು.

ಧನಿಷ್ಟಾಪಂಚಕ, ತ್ರಿಪಾದಿ ನಕ್ಷತ್ರ ಶಾಂತಿ

ಧನಿಷ್ಟಾಪಂಚಕ ಎಂದರೆ ಧನಿಷ್ಠ, ಶತಭಿಷ, ಪೂರ್ವಾಭಾದ್ರ, ಉತ್ತರಾಭಾದ್ರ, ರೇವತಿ ನಕ್ಷತ್ರಗಳಲ್ಲಿ ಮೃತರಾದರೆ 5 ತಿಂಗಳುಗಳ ಕಾಲ ಹಾಗೂ ಕೃತ್ತಿಕಾ, ಪುನರ್ವಸು, ಉತ್ತರಾ, ವಿಶಾಖ, ಉತ್ತರಾಷಾಢ, ಪೂರ್ವಾಷಾಢ, ನಕ್ಷತ್ರಗಳು ತ್ರಿಪಾದಿ ನಕ್ಷತ್ರಗಳಾಗಿದ್ದು ಅವುಗಳಲ್ಲಿ ಮೃತರಾದರೆ 3 ತಿಂಗಳುಗಳ ಕಾಲ ಮನೆಯನ್ನು ಬಿಡಬೇಕೆಂದು ಹೇಳುವುದುಂಟು. ಆದರೆ ಶವಸಂಸ್ಕಾರಕ್ಕೂ ಮುಂಚೆಯೇ ಸರಿಯಾಗಿ ತಿಳಿದು ಶಾಂತಿಯನ್ನು ಆಚರಿಸಿದಲ್ಲಿ ಮನೆಯನ್ನು ಬಿಡುವ ಅವಶ್ಯವಿರುವುದಿಲ್ಲ. ಶಾಂತಿಯ ಕ್ರಮ ಹೇಗೆಂದರೆ–

ಧನಿಷ್ಠಾಪಂಚಕದಲ್ಲಿ ಮರಣ ಹೊಂದಿದಾಗ ಶವದ ಬಳಿಯಲ್ಲಿ ದೇಶಕಾಲ ಸಂಕೀರ್ತನೆ ಮಾಡಿ "ಅಮುಕ ಗೋತ್ರಸ್ಯ............................ ಧನಿಷ್ಠಾಪಂಚಕ ದೋಷ ಶಾಂತ್ಯಾಖ್ಯಂ ಕರ್ಮ ಕರಿಷ್ಯೆ" ಎಂದು ಸಂಕಲ್ಪ ಮಾಡಿ ದರ್ಭೆಯಿಂದ ಐದು ಮನುಷ್ಯಾಕಾರದ ಪ್ರತಿಮೆಗಳನ್ನು ಮಾಡಿ ಅಕ್ಕಿಹಿಟ್ಟಿನಿಂದ ಅವುಗಳನ್ನು ಲೇಪಿಸಿ ಉಣ್ಣೆಯ ದಾರದಿಂದ ಬೇರೆ ಬೇರೆಯಾಗಿಸುತ್ತಿ ಅವುಗಳನ್ನು ಕರ್ತನು ತನ್ನ ಕೈಯಲ್ಲಿ ಹಿಡಿದು–

"ಓಂ ಜ್ಮಯಾ ಅತ್ರ ವಸವೊರಂತ ದೇವಾ ಉರಾವಂತರಿಕ್ಷೆ
ಮರ್ಜಯಂತ ಶುಭ್ರಾಃ ॥
ಅರ್ವಾಕ್ ಪಥ ಪರುಜ್ರಯಃ ಕೃಣುದ್ವಂ ಶ್ರೋತಾ ದೂತಸ್ಯ
ಜಗ್ಮುಷೋ ನೋ ಅಸ್ಯ ॥
ತತ್ವಾಯಾಮಿ ಬ್ರಹ್ಮಣಾ____________ ಹವಿರ್ಭಿಃ॥
ಅಹೇಳಮಾನೊ ವರುಣೇಹ____________ಪ್ರಮೋಷೀಃ॥
ಓಂ ಅಭಯೇ ಮಿಥೊ ಮನುಷಸ್ಸಪಂತೆ ರಾತ್ರಿಂ ದಿವೋ
ಕಾತಿಷಾಚಃ ಪೃಥಿವ್ಯಾಃ ॥

ಹೀಗೆ 5 ಮಂತ್ರಗಳನ್ನು ಜಪಿಸಿ, ಗಂದಾಕ್ಷತಪುಷ್ಪಗಳಿಂದ ಪೂಜಿಸಿ ಮೊದಲನೆಯದನ್ನು ಶವದ ತಲೆಯಲ್ಲಿ, ಎರಡನೆಯದನ್ನು ಕಣ್ಣುಗಳಲ್ಲಿ, ಮೂರನೆಯದನ್ನು ಹೊಟ್ಟೆಯಲ್ಲಿ ನಾಲ್ಕನೆಯದನ್ನು ನಾಭಿಯಲ್ಲಿ, ಹಾಗೂ ಐದನೆಯದನ್ನು ಪಾದಗಳಲ್ಲಿಟ್ಟು ಕ್ರಮವಾಗಿ "ಓಂ ಪ್ರೇತವಾಹಾಯ ಸ್ವಾಹಾ। ಪ್ರೇತವಾಹಾಯೇದಂನಮಮ ॥"ಎಂಬುದಾಗಿ ಐದು ಆಹುತಿಗಳನ್ನು ಕೊಡಬೇಕು. ನಂತರ ಅವುಗಳ ಮೇಲೆ ನೀರಿನ ಧಾರೆಯನ್ನೆರೆದು "ಯಮಾಯ ಸೋಮಂ" ಮತ್ತು "ತ್ರ್ಯಂಬಕಂ ಯಜಾಮಹೇ"ಎಂಬ ಎರಡು ಮಂತ್ರಗಳಿಂದ ಪ್ರತಿಯೊಂದು

ಪ್ರತಿಮೆಯ ಮೇಲೂ ಪ್ರತ್ಯೇಕವಾಗಿ ಎರಡೆರಡು ಆಜ್ಯಾಹುತಿಗಳನ್ನು ಕೊಡಬೇಕು. ನಂತರ ಚಿನ್ನ, ವಜ್ರ, ನೀಲ, ಪದ್ಮರಾಗ, ಮುತ್ತು ಎಂಬ ಐದು ರತ್ನಗಳನ್ನು ಅಥವಾ ಐದು ಚಿನ್ನದ ಚೂರುಗಳನ್ನು, ಅದೂ ಇಲ್ಲವಾದಲ್ಲಿ ಐದು ಬಿಂದು ತುಪ್ಪವನ್ನು ಪ್ರೇತದ ಬಾಯಿಯಲ್ಲಿ ಬಿಡಬೇಕು.

ಹಾಗೆಯೇ ತ್ರಿಪಾದಿ ನಕ್ಷತ್ರಗಳಲ್ಲಿ ಮರಣವುಂಟಾಗಿದ್ದರೆ "ಅಮುಕ ಗೋತ್ರಸ್ಯ ________ ತ್ರಿಪಾದೀ ನಕ್ಷತ್ರ ಮರಣ ದೋಷ ಪರಿಹಾರಾರ್ಥಂ ತದ್ವಿಧಿಂ ಕರಿಷ್ಯೇ" ಎಂದು ಸಂಕಲ್ಪ ಮಾಡಿ ಮೂರು ಪ್ರತಿಮೆಗಳನ್ನು ಮಾಡಿ ಮೊದಲನೆಯ ವಿಧಿಯಂತೆಯೇ ಪೂಜಿಸಿ ಮೊದಲನೆಯದನ್ನು ತಲೆಯಲ್ಲಿಯೂ, ಎರಡನೆಯದನ್ನು ಕಣ್ಣುಗಳಲ್ಲಿಯೂ, ಮೂರನೆಯದನ್ನು ಹೊಟ್ಟೆಯಲ್ಲಿಯೂ, ಕ್ರಮವಾಗಿ ಇಟ್ಟು "ಓಂ ಪ್ರೇತವಾಹಾಯ ಸ್ವಾಹಾ ಪ್ರೇತವಾಹಾಯೇದಂನಮಮ" ಎಂದು ಮೂರು ಆಹುತಿಗಳನ್ನು ಕೊಟ್ಟು ನೀರಿನ ಧಾರೆ ಸುರಿಸಿ ಪ್ರತಿಯೊಂದು ಪ್ರತಿಮೆಯ ಮೇಲೂ "ಯಮಾಯ ಸೋಮಂ"ಮತ್ತು "ತ್ರ್ಯಂಬಕಂ ಯಜಾಮಹೆ", ಈ ಎರಡು ಮಂತ್ರಗಳಿಂದ ಎರಡೆರಡು ಆಜ್ಯಾಹುತಿಗಳನ್ನು ಕೊಟ್ಟು

"ಓಂ ವಹ ವಪಾಂ ಜಾತವೇದಃ ಪಿತೃಭ್ಯೋ ಯತ್ರೇ ನಾ ನ್ವೇತ್ಥ ನಿಹಿತಾನ್
ಪರಾಕೆ ಕುಲ್ಯ ಉಗ್ರತಾಃ ಕ್ಷರಂತು ಸತ್ಯಾ ಏತೈ ಆಶಿಃ ಸಂತು ಕಾಮ್ಯೆ ಸ್ವಾಹಾ॥
ಅಗ್ನಯೇ ಜಾತವೇದಸ ಇದಂ ನಮಮ॥"

ಎಂದು ಎಲ್ಲಾ ಪ್ರತಿಮೆಗಳಿಗೂ ಒಂದೊಂದು ಆಹುತಿಯನ್ನು ಕೊಟ್ಟು ಬಳಿಕ ದಹಿಸಬೇಕು.

ಹಾಗೆಯೇ ಬಿದಿಗೆ, ಸಪ್ತಮಿ, ದ್ವಾದಶಿ ತಿಥಿಗಳು ರವಿ, ಕುಜ, ಶನಿವಾರಗಳಿಂದಲೂ ತ್ರಿಪಾದ ನಕ್ಷತ್ರಗಳಿಂದಲೂಕೂಡಿದ್ದರೆ ತ್ರಿಪುಷ್ಕರ ಯೋಗ, ಇವುಗಳಲ್ಲಿ ಯಾವುದಾದರೂ ಎರಡು ಯೋಗಗಳಿದ್ದರೆ ದ್ವಿಪುಷ್ಕರ ಯೋಗವೆಂದು ಕರೆಯುತ್ತಾರೆ. ತ್ರಿಪುಷ್ಕರದಲ್ಲಿ ಮೂರು ದರ್ಭೆಗಳನ್ನು, ದ್ವಿಪುಷ್ಕರ ಯೋಗದಲ್ಲಿ ಎರಡು ದರ್ಭೆಗಳ ಪ್ರತಿಮೆ ತಯಾರಿಸಿ ಮೊದಲಿನಂತೆ ಇತರ ಎಲ್ಲಾ ವಿಧಿಗಳನ್ನೂ ಮಾಡಿ ನಂತರ ದಹನ ಮಾಡಬೇಕು. ಹೀಗೆ ಮಾಡಿದರೆ ಮನೆಯನ್ನು ಬಿಡುವ ಅವಶ್ಯಕತೆಯಿರುವುದಿಲ್ಲ.

* ಪಂಚಕ ಶಾಂತಿ ಹಾಗೂ ತ್ರಿಪಾದಿ ಶಾಂತಿ *

ಸಾದಾರಣ ಪಂಚಕ– ತ್ರಿಪಾದಿ ಶಾಂತಿ:

ತ್ರಿಪಾದಿ ನಕ್ಷತ್ರ ಅಥವಾ ಪಂಚಕದಲ್ಲಿ ಮೃತರಾದಾಗ ಮೇಲೆ ಹೇಳಿದ ರೀತಿಯಲ್ಲಿ ಆಯಾ ಕರ್ಮಕ್ಕೆ ಸಂಬಂಧಪಟ್ಟ ಶಾಂತಿಯನ್ನು ಮಾಡಬೇಕು. ನಂತರ ಸೂತಕವು ನಿವೃತ್ತಿಯಾದ ಮೇಲೆ ತಿಲಹೋಮ, ಘೃತದಾನ ಮುಂತಾದುವುಗಳನ್ನು ಮಾಡಿ ಕಂಚಿನ ಪಾತ್ರೆಯಲ್ಲಿ ಎಣ್ಣೆಯನ್ನು ಹಾಕಿ ಅದರಲ್ಲಿ ತನ್ನ ಪ್ರತಿಬಿಂಬವನ್ನು ನೋಡಿ ಬ್ರಾಹ್ಮಣನಿಗೆ ಕೊಡಬೇಕು. ಲಕ್ಷಹೋಮ ಅಥವಾ ರುದ್ರಜಪ ಎರಡರಲ್ಲೊಂದನ್ನು ಮಾಡಬೇಕು ಅಥವಾ ಕಲಶದಲ್ಲಿ ಯಮನ ಪ್ರತಿಮೆಯನ್ನು ಪೂಜಿಸಿ, ಸ್ಥಾಲೀಪಾಕದಲ್ಲಿ ಹೇಳಿದಂತೆ ಅಗ್ನಿಪ್ರತಿಷ್ಠೆಯನ್ನು ಅನ್ವಾದಾನ ಮುಂತಾದ ಎಲ್ಲಾ ಹೋಮಕಾರ್ಯಗಳನ್ನು ವಿಧಿವತ್ತಾಗಿ ಮಾಡಿ ಚರುವನ್ನು ತಯಾರಿಸಿ ಯಮಾಯಾ ಸ್ವಾಹಾ, ಧರ್ಮರಾಜಾಯ ಸ್ವಾಹಾ, ಮೃತ್ಯುವೇ ಸ್ವಾಹಾ, ಅಂತಕಾಯ ಸ್ವಾಹಾ, ವೈತ್ಯಸ್ವತಾಯಾ ಸ್ವಾಹಾ, ಕಾಲಾಯ ಸ್ವಾಹಾ, ಸರ್ವಭೂತಕ್ಷಮಾಯ ಸ್ವಾಹಾ, ಔದುಂಭರಾಯ ಸ್ವಾಹಾ, ದಧ್ನಾಯ ಸ್ವಾಹಾ, ನೀಲಾಯಾ ಸ್ವಹಾ, ಪರಮೇಷ್ಠಿನೇ ಸ್ವಾಹಾ, ವೃಕೋಧರಾಯ ಸ್ವಾಹಾ, ಚಿತ್ರಾಯ ಸ್ವಾಹಾ, ಚಿತ್ರಗುಪ್ತಾಯ ಸ್ವಾಹಾ, ಎಂದು 14 ನಾಮಮಂತ್ರಗಳಿಂದ ಆಹುತಿಗಳನ್ನು ಕೊಡಬೇಕು. ನಂತರ ಕಪ್ಪುಬಣ್ಣದ ಹಸುವನ್ನು ದಾನಕೊಡಬೇಕು. ಇದು ಸಾದಾರಣ ಕ್ರಮ.

ಪಂಚಕ ಶಾಂತಿ:

ಆಚಮನ ಪ್ರಾಣಾಯಾಮ ದೇಶಕಾಲ ಸಂಕೀರ್ತನಾದಿಗಳನ್ನು ಮಾಡಿ ಅಮುಕಗೋತ್ರಸ್ಯ ಅಮುಕ ಶರ್ಮಣಃ ________ ಪಂಚಕ ಶಾಂತಿಮಹಂ ಕರಿಷ್ಯೆ ಎಂದು ಸಂಕಲ್ಪ ಮಾಡಿ ಬಳಿಕ ಆಚಾರ್ಯನು

"ಯದಾತ್ರೇತ್ಯಾದಿ ತಾನು ಮಾಡಬೇಕಾಗಿರುವಂತಹ ಕರ್ಮಭಾಗಗಳನ್ನು ಪೂರೈಸಿ" ವರದ "ಎಂಬ ಅಗ್ನಿಯನ್ನು ಪ್ರತಿಷ್ಠಾಪಿಸಿ "ಮಹೀದೌ____________" ಮಂತ್ರಗಳಿಂದ ಕಲಶಸ್ಥಾಪನೆಯನ್ನು ಐದು ಕಲಶಗಳಿಗೂ ಪ್ರತ್ಯೇಕವಾಗಿ ಆವರ್ತನೆಯನ್ನು ಮಾಡಿ ಐದು ಕಲಶಗಳನ್ನು ಸ್ಥಾಪಿಸಿ ಅವುಗಳಲ್ಲಿ ಐದು ಸುವರ್ಣ ಪ್ರತಿಮೆಗಳನ್ನಿಟ್ಟು

"ಯಮಾಯಾ ಸೋಮಂ __________ ಮಂತ್ರದಿಂದ ಇಂದ್ರಂ ವೋ______" ಎಂಬ ಮಂತ್ರದವರೆಗೆ ಐದು ಮಂತ್ರಗಳಿಂದ ಮಧ್ಯದಿಂದ ಯಮ, ರುದ್ರ, ಅಗ್ನಿ, ವಿಷ್ಣು, ಇಂದ್ರಾದಿಗಳನ್ನು ಆವಾಹಿಸಬೇಕು. ಅಂತೆಯೇ

"ಜ್ಮಯಾ ಅತ್ರ_________" ಮುಂತಾದ ಐದು ಮಂತ್ರಗಳಿಂದ ಧನಿಷ್ಠಾದಿ ಐದು ನಕ್ಷತ್ರದೇವತೆಗಳನ್ನು ಆವಾಹಿಸಬೇಕು. ಯಮ ಮುಂತಾಗಿ ಚಿತ್ರಗುಪ್ತ ಎಂಬಲ್ಲಿಯವರೆಗೆ 14 ನಾಮಮಂತ್ರಗಳಿಂದ (ಯಮಾಯಾ ಸ್ವಾಹಾ, ಧರ್ಮರಾಜಾಯ ಸ್ವಾಹಾ, ಮೃತ್ಯುವೇ ಸ್ವಾಹಾ, ಅಂತಕಾಯ ಸ್ವಾಹಾ, ವೈತ್ಯಸ್ವತಾಯಾ ಸ್ವಾಹಾ, ಕಾಲಾಯ ಸ್ವಾಹಾ, ಸರ್ವಭೂತಕ್ಷಮಾಯ ಸ್ವಾಹಾ, ಔದುಂಭ ರಾಯ ಸ್ವಾಹಾ, ದಧ್ನಾಯ ಸ್ವಾಹಾ, ನೀಲಾಯಾ ಸ್ವಹಾ, ಪರಮೇಷ್ಠಿನೇ ಸ್ವಾಹಾ, ವೃಕೋಧರಾಯ ಸ್ವಾಹಾ, ಚಿತ್ರಾಯಾ ಸ್ವಾಹಾ, ಚಿತ್ರಗುಪ್ತಾಯ ಸ್ವಾಹಾ,) ಆಯಾ ದೇವತೆಗಳನ್ನು ಆವಾಹಿಸಿ ಅದೇ ನಾಮ ಮಂತ್ರಗಳಿಂದ ದೇವತೆಗಳಿಗೆ ಷೋಡಶೋಪಚಾರಗಳನ್ನು ಸಮರ್ಪಿಸಿ

"ಆ ನೋ ಭದ್ರಾಃ ___________" ಮುಂತಾದ ಶಾಂತಿ ಸೂಕ್ತಗಳನ್ನು ಜಪಿಸಬೇಕು. ನಂತರ ಉತ್ತರದಲ್ಲಿ ನವಗ್ರಹಗಳನ್ನು ಪೂಜಿಸಿ ಅನ್ವಾದಾನವನ್ನು ಮಾಡಬೇಕು. "ನವಗ್ರಹಾನ್ ಸಮಿತ್ತಿಲೈಃ __________" ಎಂಬುದಾಗಿ ಹೇಳಿ ದ್ರವ್ಯದಿಂದ 28 ಸಂಖ್ಯೆಯಿಂದ ನಂತರ ಐದು ನಕ್ಷತ್ರಗಳಿಗೆ ಸಮಿತ್ತಿಲಾಜ್ಯಾಹುತಿಗಳನ್ನು 108 ಸಂಖ್ಯೆಯಿಂದಲೂ ಯಮಾದಿ 14 ದೇವತೆಗಳಿಗೂ ಎಂಟೆಂಟು ಆಹುತಿಗಳನ್ನೂ ಸಂಕಲ್ಪಿಸಿ ಹೋಮವನ್ನು ಮಾಡಿ ಕಾರ್ಯವನ್ನು ಪೂರೈಸಬೇಕು. ನಂತರ ಸ್ವಿಷ್ಟಕೃತ್‌ಹೋಮ ಮಾಡಿ ದೇವತೆಗಳಿಗೆ ಬಲಿದಾನ ಸಮರ್ಪಿಸಿ ಪೂರ್ಣಾಹುತಿಯನ್ನು ಕೊಡಬೇಕು. ನಂತರ ಕಲಶ ವಿಸರ್ಜನೆಯನ್ನು ಮಾಡಿ ಶಾಂತಿಪಾಠ ಆಜ್ಯಾವೇಕ್ಷಣಾದಿಗಳನ್ನು ಮಾಡಿ ಬ್ರಹ್ಮ, ವಿಷ್ಣು, ಮಹೇಶ್ವರಾದಿ ದೇವತೆಗಳಿಗೆ ಪ್ರೀತ್ಯಾರ್ಥವಾಗಿ ಅಷ್ಟದಾನಗಳನ್ನು ಮಾಡಿ ಬ್ರಾಹ್ಮಣರನ್ನು ಸಂತೃಪ್ತಿಗೊಳಿಸಬೇಕು.

ತ್ರಿಪಾದಿ ಶಾಂತಿ:

ಆಚಮನ, ಪ್ರಾಣಾಯಾಮ, ದೇಶಕಾಲ, ಕೀರ್ತನಾದಿಗಳನ್ನು ಮಾಡಿ "ಅಮುಕಸ್ಯ ________________ ತ್ರಿಪಾದಿಶಾಂತಿಮಹಂ ಕರಿಷ್ಯೆ" ಎಂದು ಸಂಕಲ್ಪಿಸಿ ಆಚಾರ್ಯನು ಅಗ್ನಿಸ್ಥಾಪನೆಯವರೆಗೆ ಕರ್ಮಗಳನ್ನು ಮಾಡಿ "ಮಹೀದ್ಯೌ" ಮಂತ್ರದಿಂದ ಮೂರು ಕಲಶಗಳನ್ನು ಸ್ಥಾಪನೆಮಾಡಿ "ಆಪೋಹಿಷ್ಠಾ" ಮುಂತಾದ ಸೂಕ್ತಗಳಿಂದ ಕಲಶಗಳನ್ನು ಅಭಿಮಂತ್ರಿಸಿ ಅವುಗಳಲ್ಲಿ ಈ ಕೆಳಗಿನಂತೆ ನಕ್ಷತ್ರದೇವತೆ ಗಳನ್ನು ಆವಾಹಿಸಬೇಕು.

ತ್ರಿಪಾದನಕ್ಷತ್ರ	ಉಪನಕ್ಷತ್ರಗಳು	ದೇವತೆ	ಮಂತ್ರ
ಕೃತ್ತಿಕಾ	– ಭರಣೀ ರೋಹಿಣೀ	ಅಗ್ನಿ ಯಮ(ಅಧಿ) ಪ್ರಜಾಪತಿ(ಪ್ರತ್ಯಧಿ)	ಅಗ್ನಿಂ ದೂತಂ---- ಯಮಾಯ ಸೋಮಂ---- ಪ್ರಜಾಪತೇ ನತ್ವ-----
ಪುನರ್ವಸು	– ಆರ್ದ್ರಾ ಪುಷ್ಯ	ಅದಿತಿ ರುದ್ರ(ಅಧಿ) ಬೃಹಸ್ಪತಿ(ಪ್ರತ್ಯಧಿ)	ಅದಿತಿರ್ದ್ಯೌ------ ಕದ್ರುದ್ರಾಯ------ ಬೃಹಸ್ಪತೇ ಅತಿಯ----
ಉತ್ತರಾ	– ಪೂರ್ವಾ ಹಸ್ತಾ	ಅರ್ಯಮಾ ಭಗ(ಅಧಿ) ಸೂರ್ಯ(ಪ್ರತ್ಯಧಿ)	ಅರ್ಯಮಾಣೋ------ ಭಗ ಏವ ಭಗವಾನ್---- ಉದುತ್ಯಂ ಜಾತವೇದಸಂ---
ವಿಶಾಖ	– ಸ್ವಾತಿ ಅನುರಾಧಾ	ಇಂದ್ರಾಗ್ನಿ ವಾಯು(ಅಧಿ) ಮಿತ್ರ(ಪ್ರತ್ಯಧಿ)	ಇಂದ್ರಾಗ್ನೀ---- ತವ ವಾಯು----- ಮಿತ್ರೋ ಜನಾನ್ಯಾ----
ಉತ್ತರಾಷಾಢ	– ಪೂರ್ವಾಷಾಡ ಶ್ರವಣ	ವಿಶ್ವೇದೇವಾಃ ವರುಣ(ಅಧಿ) ವಿಷ್ಣು(ಪ್ರತ್ಯಧಿ)	ವಿಶ್ವೇದೇವಾಸ ಆಗತ---- ಯತ್ಕಿಂಚೇದಂ------ ಇದಂ ವಿಷ್ಣು------
ಪೂರ್ವಾಭಾದ್ರಾ	– ಶತಭಿಷಾ ಉತ್ತರಾಭಾದ್ರಾ	ಅಜೈಕಪಾತ್ ವರುಣ (ಅಧಿ) ಅಹಿರ್ಬುಧ್ನ್ಯ(ಪ್ರತ್ಯಧಿ)	ಸಮುದ್ರಃ ಸಿಂಧೂ ರಜೋ-- ಇಮಂ ಮೇ ವರುಣ---- ಅಭಿಯೇಮಿಥೋ--

ಯತ್ತೇ ಯಮಂ ಮುಂತಾಗಿ ಶಾಂತಿ ಸೂಕ್ತಗಳನ್ನು ಜಪಿಸಿ ಯಮನಿಂದ ಹಿಡಿದು ಚಿತ್ರಗುಪ್ತ ಎಂಬಲ್ಲಿಗೆ 14 ದೇವತೆಗಳನ್ನು ಆವಾಹಿಸಿ ಪೂಜಿಸಿ ನವಗ್ರಹಗಳನ್ನು ಪೂಜಿಸಿ 108 ಸಂಖ್ಯೆಯಲ್ಲಿ ಪ್ರಧಾನ ಆಹುತಿಯನ್ನು ಪಾಲಾಶ, ತಿಲ, ಚರುಗಳಿಂದ ಹಾಗೂ ದಶ ಸಂಖ್ಯೆಯಲ್ಲಿ ಅಧಿದೇವತೆ ಪ್ರತ್ಯಧಿದೇವತೆಗಳಿಗೆ ಆಹುತಿಗಳನ್ನು ಕೊಟ್ಟು ಯಮಾದಿಗಳಿಗೆ ಎಂಟೆಂಟು ಆಹುತಿಗಳನ್ನು ಕೊಟ್ಟು ಸ್ವಿಷ್ಟಕೃತ ಹೋಮ, ಬಲಿದಾನ, ಆಚಾರ್ಯನಿಗೆ ಗೋದಾನ ಋತ್ವಿಜರಿಗೆ ದಕ್ಷಿಣೆ-ತಾಂಬೂಲ ಕೊಡಬೇಕು.

* ಅಸ್ಥಿ ಸಂಚಯನ *

ಅಸ್ಥಿ ಸಂಚಯನವನ್ನು ಮೃತ ದಿನದಂದು ದ್ವಿತೀಯ, ತೃತಿಯಾ, ಚತುರ್ಥಿ, ಪಂಚಮಿ, ಸಪ್ತಮಿ, ಅಥವಾ ನವಮಿ ದಿನಗಳಲ್ಲಿ ತಮ್ಮ ಸ್ವಗೋತ್ರದವರೊಂದಿಗೆ ಮಾಡತಕ್ಕದ್ದು ಹಾಗೂ ದ್ವಿಪಾದಿ, ತ್ರಿಪಾದಿ ನಕ್ಷತ್ರ ಹಾಗೂ ಕರ್ತೃವಿನ ಜನ್ಮನಕ್ಷತ್ರಗಳನ್ನು ಬಿಟ್ಟು ಸಾಧ್ಯವಾದಲ್ಲಿ ಭಾನುವಾರ, ಮಂಗಳವಾರ, ಶನಿವಾರಗಳಂದು ಮಾಡದಿದ್ದರೆ ಉತ್ತಮ.

ಈ ಅಸ್ಥಿಗಳನ್ನು ಪವಿತ್ರವಾದ ಗಂಗಾ ಜಲದಲ್ಲಿ ಅಥವಾ ಶುದ್ಧ ನೀರಿನಲ್ಲಿ ಬಿಡತಕ್ಕದ್ದು. ಅಸ್ಥಿಗಳನ್ನು ಮೌನವಾಗಿ ಶೇಖರಿಸಬೇಕು. ಹಾಲಿನಿಂದ ತೊಳೆದು ಪಂಚಗವ್ಯಾದಿಗಳಿಂದ ತೊಳೆದು ಮಡಿ ವಸ್ತ್ರದಿಂದ ಸುತ್ತಿ ಮಣ್ಣಿನ ಕೊಡದಲ್ಲಿ ಹಾಕತಕ್ಕದ್ದು. ನಂತರ ಶುದ್ಧಾಭಿಷೇಕ ಹಾಗೂ ಪಂಚಸೂಕ್ತಿಗಳಿಂದ ಅರ್ಚಿಸಿ ಗಂಗಾ ತೀರದ ಬಳಿ ನಿಂತು ಪುತ್ರ, ದೌಹಿತ್ರ, ಭ್ರಾತೃ, ಜ್ಞಾತಿ ಇವರುಗಳಲ್ಲಿ ಯಾರಾದರೂ ಅಸ್ಥಿಯನ್ನು ಬಿಡಲು ಯೋಗ್ಯರು. ಅವರನ್ನು ಬಿಟ್ಟು ಬೇರೆಯವರು ಸಹಕರಿಸಬೇಕೇವಿನಃ ತಾವೇ ಸ್ವತಃ ಬಿಡಬಾರದು. ಅಸ್ಥಿಯನ್ನು ಮಣ್ಣಿನಲ್ಲಿ ಉಂಡೆಯಾಕಾರ ಮಾಡಿ ನಿಶ್ಯಬ್ದವಾಗಿ ಮೂರು ಬಾರಿ ಅಸ್ಥಿಯನ್ನು ಬಿಡಬೇಕು. ಈ ರೀತಿ ಮಾಡಿದಾಗ ಪಿತೃಗಳಿಗೆ ಸನಾತನ ಬ್ರಹ್ಮಲೋಕ ಪ್ರಾಪ್ತವಾಗುತ್ತದೆ. ಸಾಮಾನ್ಯವಾಗಿ ಗುರು ಶುಕ್ರಾಸ್ತಕಾಲದಲ್ಲಿ ಹಾಗೂ ಮಲಮಾಸಗಳಲ್ಲಿ ಅಸ್ಥಿಯನ್ನು ಸಂಚಯನಮಾಡಬಾರದು ಎಂದು ಶಾಸ್ತ್ರವು ತಿಳಿಸುತ್ತದೆ.

* ಕರ್ತೃವಿನ ಲಕ್ಷಣಗಳು *

ಅಶೌಚವು ಬಂದಾಗ ಪರಾನ್ನ ಭೋಜನ ನಿಶಿದ್ಧ ಹಾಗೂ ರಾತ್ರಿ ಭೋಜನಗಳೂ ನಿಶಿದ್ಧ, ಹಾಸಿಗೆಯಲ್ಲಿ ಮಲಗಬಾರದು. ಚಾಪೆಯಲ್ಲಿಯೇ ಮಲಗಬೇಕು. ಕ್ಷೌರವನ್ನು ಮಾಡಿಕೊಳ್ಳಬಾರದು. ಮಧುರವಸ್ತುಗಳನ್ನು ಹಾಗೂ ಹಾಲು ಹಣ್ಣುಗಳನ್ನು ಸ್ವೀಕ–ರಿಸುವಂತಿಲ್ಲ. ಎತ್ತರವಾದ ಆಸನದಲ್ಲಿ ಕೂಡಬಾರದು. ದರ್ಪಣ ವೀಕ್ಷಿಸಬಾರದು (ಕನ್ನಡಿ ನೋಡಬಾರದು), ಸ್ತ್ರೀಸಂಗ ಮಾಡಬಾರದು, ಪಗಡೆ ಮುಂತಾದ ಆಟಗಳನ್ನು ಆಡಬಾರದು. ಸ್ನಾನಾನಂತರ ಮೈ ಒರೆಸಿಕೊಳ್ಳಬಾರದು.

* ಅಶೌಚ ಪ್ರಕರಣ *

ಮೃತಾಶೌಚದ ವಿಷಯದಲ್ಲಿ ಕೆಲವು ಭಿನ್ನ ಅಭಿಪ್ರಾಯಗಳಿದ್ದು ಅದನ್ನು ನಾವು ಸರಿಯಾಗಿ ತಿಳಿದುಕೊಳ್ಳಬೇಕು.

ಸಂಬಂಧಗಳಲ್ಲಿ ಮಾತೃಸಂಬಂಧ, ಪಿತೃಸಂಬಂಧ, ಹಾಗೂ ಆತ್ಮಸಂಬಂಧ ಎಂದು ಮೂರು ವಿಧಗಳಿವೆ.

1. ಮಾತೃ ಸಂಬಂಧ: ತಾಯಿಯ ತಂದೆ, ತಾಯಿ, ಅಣ್ಣ, ತಮ್ಮ, ಅಕ್ಕ, ತಂಗಿಯರು ಮಾತ್ರ ಬಂದು ಇವರುಗಳ ಮರಣದಲ್ಲಿ ತ್ರಿರಾತ್ರಿಗಳಿರುತ್ತಾರೆ.

2. ಪಿತೃ ಸಂಬಂಧ: ತಂದೆಯ ತಾಯಿ, ತಂದೆ, ಒಡಹುಟ್ಟಿದವರು, ಅವರುಗಳ ಪತ್ನಿಯರು, ಅವರ ಮಕ್ಕಳು, ಸಪಿಂಡರು ಮೃತರಾದಲ್ಲಿ 10 ದಿನ ಅಶೌಚವಿರುತ್ತದೆ. ನಂತರ,

ಸಮಾನೋದಕರು ಮರಣವಾದಲ್ಲಿ 3 ದಿನಗಳು. ಜ್ಞಾತಿಗಳು ಮೃತರಾದಲ್ಲಿ ಒಂದು ದಿನ ಸ್ನಾನ ಮಾತ್ರವಿರುತ್ತದೆ ಹಾಗೂ ತಂದೆಯ ಸಹೋದರಿಯರು ವಿವಾಹವಾಗಿದ್ದು ಅವರ ಮರಣದಲ್ಲಿ 3 ರಾತ್ರಿಗಳಿರುತ್ತದೆ. ಅವರ ಗಂಡ ಹಾಗೂ ಪುತ್ರರ ಮರಣಕ್ಕೆ 1 ಹಗಲು 1 ರಾತ್ರಿ ಮಾತ್ರವಿರುತ್ತದೆ.

3. ಆತ್ಮ ಸಂಬಂಧ: ಒಡಹುಟ್ಟಿದವರು, ಹೆಣ್ಣು ಕೊಟ್ಟ ಮಾವ, ಬಾವ, ಭಾವಮೈದುನ ಮೊದಲಾದವರುಗಳು, ವಿದ್ಯೆಕಲಿಸಿದ ಗುರು, ಪ್ರಾಣ ಸ್ನೇಹಿತ ಮುಂತಾದವರಾಗಿದ್ದು, ಅಣ್ಣ-ತಮ್ಮಂದಿರು ಬಿಟ್ಟು ಉಳಿದವರಲ್ಲಿ ತ್ರಿರಾತ್ರಿ ಅಶೌಚವಿರುತ್ತದೆ.

* 10ನೇ ದಿನ ಧರ್ಮೋದಕದ ವಿಚಾರ *

ಧರ್ಮೋದಕ ವಿಚಾರಕ್ಕೆ ಬಂದಾಗ ಕೆಲವು ವಿಚಾರಗಳನ್ನು ತಿಳಿದುಕೊಳ್ಳುವುದು ಅತಿಮುಖ್ಯ. ಏನೆಂದರೆ, ವೇದಿಕಾರಾಧನೆಯನ್ನು ಮಾಡಿದ ಮೇಲೆ ರುದ್ರ, ಪ್ರೇತ, ಯಮರ ಆವಾಹನೆ ಮುಂತಾದ ಕಾರ್ಯಗಳನ್ನು ಮುಗಿಸಿ ಶಿಲಾವಿಸರ್ಜನೆಯನ್ನು ಮಾಡಬೇಕು. ನಂತರ ಕೂರ್ಚವನ್ನು ಕಟ್ಟಿ ಆ ಕೂರ್ಚಕ್ಕೆ ಧರ್ಮೋದಕವನ್ನು ಬಿಡಬೇಕು ಅಷ್ಟೆ. ಕೆಲವರು ಶಿಲೆಯ ಮೇಲೆ ಧರ್ಮೋದಕವನ್ನು ಬಿಡುವುದುಂಟು. ಆದರೆ ಅದು ಶಾಸ್ತ್ರವಿರೋಧವಾಗುತ್ತದೆ ಹಾಗೂ ಕರ್ತೃವನ್ನು ಬಿಟ್ಟು ಬೇರೆಲ್ಲ ಜ್ಞಾತಿ ಬಾಂಧವರು ತ್ರಿದರ್ಭ ಪವಿತ್ರವನ್ನು ಉಪಯೋಗಿಸಬೇಕು. ಕೆಲವರು ಏಕದರ್ಭಪವಿತ್ರವನ್ನು ಕೊಡುತ್ತಾರೆ. ಅದು ಮಹಾದೋಷವಾದ್ದರಿಂದ ಈ ವಿಷಯವನ್ನು ಗಮನಿಸಿ ಸರಿಪಡಿಸಿಕೊಳ್ಳಬೇಕು. (ಏಕದರ್ಭಪವಿತ್ರವನ್ನು ಕೇವಲ ಕರ್ತೃಗಳು ಮಾತ್ರ ಧರಿಸಬೇಕು)

ಒಮ್ಮೆ ಶಿಲಾ ವಿಸರ್ಜನೆಯಾದ ಮೇಲೆ ಅದಕ್ಕೆ ಧರ್ಮೋದಕ ಕೊಡುವುದರಲ್ಲಿ ಯಾವುದೇ ಅರ್ಥವಿರುವುದಿಲ್ಲ.

* ಶುಭ ಸ್ವೀಕಾರ ವಿಚಾರ *

ಕರ್ತನು ಸಪಿಂಡೀಕರಣವನ್ನು ಮುಗಿಸಿ ಮನೆಯ ಹೊರಗಡೆ ಬರುವ ಸಮಯಕ್ಕೆ ತೋರಣವನ್ನು ಕಟ್ಟಿ ರಂಗೋಲಿಯನ್ನಿಟ್ಟಿರಬೇಕು. ನಂತರ ಒನಕೆಯ ಮೇಲೆ ಕುಳಿತು ಹೆಸರುಬೇಳೆಯಿಂದ ಮಾಡಿದ ತೊವ್ವೆಯನ್ನು ತಲೆಗೆ ಹಚ್ಚಿಕೊಂಡು ನಂತರ, ಸೋದರಮಾವ, ಭಾವಮೈದ ಅಥವಾ ಹತ್ತಿರದ ಸಂಬಂಧಿಕರಲ್ಲಿ ಯಾರಾದರೂ ಹಿಂದಿನಿಂದ ತಲೆಗೆ ನೀರನ್ನು ಹಾಕಬೇಕು. ಹೀಗೆ ಸ್ನಾನ ಮಾಡಿದ ನಂತರ ಮನೆಯ ಒಳಗೆ ಬಂದಾಗ ಮಡಿಗೋಲನ್ನು ನೋಡಿ ನಂತರ ಶುಭ್ರ ಶ್ವೇತ ವಸ್ತ್ರಧಾರಿಯಾಗಿ ಬಂದು ಭಸ್ಮಧಾರಣೆಯನ್ನು ಮಾಡಿಕೊಂಡು ಯಜ್ಞೋಪವಿತವನ್ನು ಬದಲಿಸಿಕೊಳ್ಳಬೇಕು. ನಂತರ ಶುದ್ಧ ಪುಣ್ಯಾಹವನ್ನು ಮಾಡಿ ಆಜ್ಯಾವಲೋಕನವನ್ನು (ಎಣ್ಣೆಯಲ್ಲಿ/ತುಪ್ಪದಲ್ಲಿ ಮುಖವನ್ನು ನೋಡುವುದು) ಮಾಡಬೇಕು. ನಂತರ ಕೇವಲ ಸೋದರ ಸಂಬಂಧಿಗಳು ಮಾತ್ರ ವಸ್ತ್ರಗಳನ್ನು ಕೊಡಬೇಕಷ್ಟೆ. ಈ ಸಂದರ್ಭದಲ್ಲಿ ಬೇರೆಯವರು ವಸ್ತ್ರಗಳನ್ನು ಕೊಡುವ ಅವಶ್ಯವಿರುವುದಿಲ್ಲ. (ಆದರೆ ಈಗಿನ ಕಾಲದಲ್ಲಿ ಹಣದರೂಪದಲ್ಲಿ ಅಥವಾ ಬೇರೆ ರೂಪದಲ್ಲಿ ಉಡುಗೊರೆ ಕೊಡುತ್ತಾರೆ ಹಾಗೆ ಮಾಡಬಾರದು ಕೇವಲ ಒಂದು ವರ್ಷದಲ್ಲಿ ಆ ವಸ್ತ್ರಗಳನ್ನು ಉಪಯೋಗಿಸಬೇಕೇವಿನಃ ವರ್ಷಾಬ್ದಿಯನಂತರ ಉಪಯೋಗಿಸುವಂತಿಲ್ಲ) ಸಪಿಂಡೀಕರಣದಂದು ಪಿಂಡ ಸಂಯೋಜನೆಯನ್ನು ಮಾಡುವ ಸಂದರ್ಭದಲ್ಲಿ ಗೋದಾನಾದಿ ದಶದಾನಗಳನ್ನು ಮಾಡಬೇಕು. ಆದರೆ ಅಂತಹ ಸಂದರ್ಭದಲ್ಲಿ ಬ್ರಾಹ್ಮಣರ ಅಭಾವವಿರುವುದರಿಂದ ಆ ದಿನ ದಾನಗಳ ಸಂಕಲ್ಪ ಮಾಡಿ ವೈಕುಂಠ ಸಮಾರಾಧನೆಯಂದು ದಾನಗಳನ್ನು ಮಾಡುವ ವಾಡಿಕೆಯುಂಟು. ಇದಾದ ನಂತರ ಮನೆಯಲ್ಲಿ ಅಡುಗೆ ಕಾರ್ಯಗಳನ್ನು ಮಾಡಬೇಕು.

ಅಂತಹ ಸಂದರ್ಭದಲ್ಲಿ ಸ್ವಗೋತ್ರದವರ ಜೊತೆ ಬೇರೆ ಗೋತ್ರದವರೂ ಸಹ ಈ ಮನೆಯಲ್ಲಿ ಊಟಮಾಡಲು ಅರ್ಹರಾಗಿರುತ್ತಾರೆ. ನಂತರ ಪುರೋಹಿತರು ಆರತಿಯನ್ನು ಮಾಡಿ ನಾಲ್ಕಾರು ಹಿತವಚನಗಳನ್ನು ತಿಳಿಸುತ್ತಾರೆ. ಅದಾದ ಮೇಲೆ ಬ್ರಾಹ್ಮಣರು ತಾಂಬೂಲವನ್ನು ಕರ್ತನಿಗೆ ಕೊಡುತ್ತಾರೆ. ಭೋಜನಾನಂತರ ಕರ್ತನು ಆ ತಾಂಬೂಲವನ್ನು ಹಾಕಿಕೊಳ್ಳಬೇಕು (ಬ್ರಹ್ಮಚಾರಿಯಾದವರು ಆ ತಾಂಬೂಲವನ್ನು ಹಾಕಿಕೊಳ್ಳುವವರಾಗಿರುವುದಿಲ್ಲ). ಶುಭಸ್ವೀಕಾರವನ್ನು ವೈಕುಂಠದ ದಿನದಂದು ಮಾಡುವ ವಾಡಿಕೆಯುಂಟು. ಅಂತಹ ಕಾರ್ಯದಿಂದ ಯಾವ ಪ್ರಯೋಜನವೂ

ಇಲ್ಲ. ಏಕೆಂದರೆ ಶುಭಸ್ವೀಕಾರವಾಗದಿದ್ದರೆ ದಾಯಾದಿಗಳನ್ನು ಬಿಟ್ಟು ಇತರರು ಊಟಮಾಡುವಂತಿಲ್ಲ. "ಇದೆಲ್ಲವೂ ನಮ್ಮ ಸೌಕರ್ಯಕ್ಕೆ ಮಾಡಿಕೊಳ್ಳುವಂತಹ ಕಾರ್ಯಗಳಲ್ಲ. ಶಾಸ್ತ್ರಗಳಲ್ಲಿ ಉಲ್ಲೇಖಿಸಿರುವಂತೆಯೇ ಮಾಡಬೇಕು."

ಮಕ್ಕಳಿಲ್ಲದವರ ಅಂತ್ಯಕಾರ್ಯಗಳನ್ನು ಯಾರು ಮಾಡಬೇಕು?

ಮಕ್ಕಳಿಲ್ಲದವರು ದಂಪತಿಗಳಲ್ಲಿ ಪತಿ ಮೃತರಾದರೆ ಪತ್ನಿಯೇ ಕರ್ತೃವಾಗಿದ್ದು ಆಕೆಯ ಹೆಸರಿನಲ್ಲಿ ಬೇರೆಯವರು ನಡೆಸಬೇಕು. ಪತ್ನಿ ಮೃತರಾದಲ್ಲಿ ಪತಿಯೇ ಕರ್ತೃ, ಇಲ್ಲವಾದರೆ ದಾಯಾದಿಗಳು (ಸಪಿಂಡರು), ಮಗಳು, ಮಗಳ ಮಗ, ಮುಂತಾದವರು ಕ್ರಮವಾಗಿ ಬರುತ್ತಾರೆ. ಯಾರೂ ಇಲ್ಲವಾದರೆ ಮೃತರ ಹಣ, ಆಸ್ತಿಯನ್ನು ಯಾರು ಉಪಯೋಗಿಸುತ್ತಾರೆಯೋ ಅವರೇ ಮುಂದಿನ ಕಾರ್ಯಗಳಿಗೆ ಕರ್ತೃವಾಗಿರುತ್ತಾರೆ. ಇಷ್ಟು ಮಂದಿಯನ್ನು ಬಿಟ್ಟು ಬೇರೆಯವರು ಮಾಡಬಾರದು.

ಒಂದು ವೇಳೆ ಗಂಡನು ಮೃತನಾಗಿ ಹೆಂಡತಿಯೊಬ್ಬರೇ ಉಳಿದಿದ್ದು ಅಂತಹವರು ಮೃತರಾದಾಗ ಅವರ ಕರ್ಮಗಳನ್ನು ಮಾಡುವಾಗ ಹನ್ನೊಂದನೆ ದಿನದವರೆಗೆ ಕಾರ್ಯವನ್ನು ನಡೆಸಿ ಹನ್ನೆರೆಡನೇ ದಿನ ಸಪಿಂಡೀಕರಣವನ್ನು ಮಾಡಿ ಭರ್ತೃವಿನೊಂದಿಗೆ ಪಿಂಡಸಂಯೋಜನೆ ಮಾಡಬೇಕು. ಹೀಗೆ ಮಾಡಿದ್ದಲ್ಲಿ ಮುಂದೆ ಅವರಿಗೆ ಪ್ರತಿ ವಾರ್ಷಿಕ ಶ್ರಾದ್ಧವನ್ನು ಮಾಡುವ ಅವಶ್ಯವಿರುವುದಿಲ್ಲ. ಈ ಭರ್ತೃ ಸಪಿಂಡಿಕರಣವನ್ನು ಯಾರೂ ಇಲ್ಲದವರು ಮಾತ್ರ ಮಾಡಬೇಕೇ ವಿನಃ ಅವರ ಆಸ್ತಿಯನ್ನು ತಿಂದು ಅವರಿಗೆ ಪಿತೃಕಾರ್ಯ ಮಾಡದಿದ್ದಲ್ಲಿ ಅವರ ಮುಂದಿನ ಪೀಳಿಗೆಗೆ ಪಿತೃಶಾಪಗಳಿಂದ ತೊಂದರೆಯಂಟಾಗುತ್ತದೆ.

ಶ್ರಾದ್ಧಕರ್ಮಕ್ಕೆ ಅಶೌಚವು (ಮೈಲಿಗೆ) ಅಡ್ಡಿಯಾದಾಗ

ಶ್ರಾದ್ಧ ಕರ್ಮಕ್ಕೆ ತೊಂದರೆಯುಂಟಾದಾಗ ಅಂದರೆ ಅಶೌಚವುಂಟಾದಾಗ ಅಶೌಚವು ಮುಗಿದು ಮಂಗಳ ಸ್ನಾನದ ದಿನದಂದು ಪುಣ್ಯಾಹಾದಿಗಳನ್ನು ಮಾಡಿ ಮನೆಯನ್ನು ಶುದ್ಧಿಗೊಳಿಸಿ ನಂತರ ಹೊಸದಾಗಿ ನೀರನ್ನು ತಂದು ಮಡಿಯನ್ನು ಹಾಕಿ ಮುಂದಿನ ಕಾರ್ಯ ನಡೆಸಬೇಕು. ಯಾವುದೇ ಕಾರಣಕ್ಕೂ ಕಾರ್ಯವನ್ನು ಮುಂಡೂಡುವಂತಿಲ್ಲ.

ಮಾಸಿಕ ವಿಚಾರಗಳು

"ಮಾಸಾದೌ ಮಾಸಿಕಂ ಕಾರ್ಯಂ" ಹೀಗೆ ವಚನವಿರುವುದರಿಂದ ಮೃತದಿನವು ಅದ್ಯ ಮಾಸಿಕಕ್ಕೆ ಮುಖ್ಯಕಾಲವಾಗಿರುವುದು. ಆದರೆ ಅದಕ್ಕೆ ಅಶೌಚಾ ನಂತರ, ಅಂದರೆ ಏಕಾದಶ ದಿನದಲ್ಲಿ ಅತಿಕ್ರಾಂತವಾದ ಆ ಮಾಸಿಕವನ್ನು ಮಾಡತಕ್ಕದ್ದು. ಆದಕಾರಣ ಅದ್ಯಮಾಸಿಕದಂದು ಬ್ರಾಹ್ಮಣ ಭೋಜನ ಮಾಡಿಸತಕ್ಕದ್ದು ಅಥವಾ ಅಗ್ನಿಯಲ್ಲಿ ಹವನ ಮಾಡಿಸತಕ್ಕದ್ದು. ಹೀಗೆಯೇ ಹನ್ನೆರಡನೇ ದಿನದ ಸಪಿಂಡೀಕರಣ ಶ್ರಾದ್ಧವಾದ ಮಾರನೇ ದಿನ ಮಾಸಿಕಗಳನ್ನೆಲ್ಲ ಅಪಕರ್ಷಣ ಮಾಡಿ ಶ್ರಾದ್ಧ ಮಾಡುತ್ತಾರೆ. ಈ ಹನ್ನೆರಡನೇ ದಿನದ ಶ್ರಾದ್ಧವೇ ಮುಖ್ಯ.

"ಯೇತು ದ್ವಾದಶಾಹೇ ಸಪಿಂಡನಂ ಕೃತ್ವಾ ತ್ರಯೋದಶಾ ಆದೌ ಅದ್ಯ ಮಾಸಿಕ ಸಹಿತಾನಾಂ ಷೋಡಶ ಮಾಸಿಕಾನಾಂ ಆವೃತ್ತಿಂ ಕೃತ್ವಾ ಶ್ರಾದ್ಧಂ ಕುರ್ವಂತಿಃ ತೇ ಭ್ರಾಂತಾಃ" ಎಂಬ ಉಕ್ತಿಯಂತೆ ಸಪಿಂಡೀಕರಣವನ್ನು ಮಾಡಿ ಮಾರನೇ ದಿನ ವೈಕುಂಠ ಸಮಾರಾಧನೆಯನ್ನು ಮಾಡುವುದು ಶಾಸ್ತ್ರ ಸಮ್ಮತ. ಆದರೆ ನಮ್ಮಲ್ಲಿ ಬಹುಜನರು ಸಪಿಂಡೀಕರಣದ ದಿನ ಅಥವಾ ಮಾರನೇ ದಿನ ಮಾಸಿಕ ವನ್ನು ಮಾಡುವುದುಂಟು. ಹೀಗೆ ಮಾಡಿದ್ದಲ್ಲಿ ಅದ್ಯಮಾಸಿಕ ಎಂದು 27–28 ಅಥವಾ 29ನೇ ದಿನದಂದು ಮಾಡುವ ಹಾಗಿರುವುದಿಲ್ಲ. ಹಾಗೇನಾದರೂ ಮಾಡಿದರೆ 17 ಮಾಸಿಕಗಳಾಗಿಬಿಡುತ್ತದೆ.

ಹೀಗೆ ಹದಿನೇಳು ಮಾಸಿಕಗಳನ್ನು ಯಾವುದೇ ಕಾರಣಕ್ಕೂ ಮಾಡಬಾರದು. ಅದು ಮಹಾಪಾಪವೆಂದು ತಿಳಿಸಲಾಗಿದೆ. ಅದ್ಯ ಮಾಸಿಕ 11ನೇ ದಿನ ಮಾಡುವ ಕಾರ್ಯ. ಇದನ್ನು ಕೆಲವರು ಮಲಿನಶ್ರಾದ್ಧವೆಂದು ಹೇಳುತ್ತಾರೆ. ಆದ್ದರಿಂದ ಅಗ್ನಿಯಲ್ಲಿ ಬ್ರಾಹ್ಮಣನನ್ನು ಆವಾಹನೆ ಮಾಡುತ್ತಾರೆ, ಏಕೆಂದರೆ ಅಗ್ನಿಗೆ ಯಾವುದೇ ನಿರ್ದಿಷ್ಟವಾದ ರೂಪವಿಲ್ಲ (ಅಗ್ನಿ ಪರಮಪವಿತ್ರ) ಆದ್ದರಿಂದ ಈ ರೀತಿಯಲ್ಲಿ ಶ್ರಾದ್ಧವನ್ನು ಮಾಡುತ್ತಾರೆ.

1. ಅದ್ಯಮಾಸಿಕ :1ನೇದಿನ
2. ಊನಮಾಸಿಕ : 13ನೇ ದಿನ ಅಥವಾ 27, 28, 29ನೇ ದಿನದೊಳಗೆ
3. ದ್ವಿತೀಯ ಮಾಸಿಕ : 30ನೇ ದಿನ
4. ತ್ರಯಪಕ್ಷ ಮಾಸಿಕ : 41ರಿಂದ 45 ದಿನದೊಳಗೆ
5. ತೃತೀಯಾ ಮಾಸಿಕ : 60ನೇ ದಿನ
6. ಚತುರ್ಥ ಮಾಸಿಕ : 90 ನೇ ದಿನ
7. ಪಂಚಮ ಮಾಸಿಕ : 120ನೇ ದಿನ
8. ಷಷ್ಠ ಮಾಸಿಕ : 150ನೇ ದಿನ
9. ಊನ್‌ಷಾಣ್ ಮಾಸಿಕ : 171 ರಿಂದ 180 ದಿನದೊಳಗೆ
10. ಸಪ್ತಮ ಮಾಸಿಕ : 180ನೇ ದಿನ

11. ಅಷ್ಟಮ ಮಾಸಿಕ : 210ನೇ ದಿನ
12. ನವಮ ಮಾಸಿಕ : 240ನೇ ದಿನ
13. ದಶಮ ಮಾಸಿಕ : 270ನೇ ದಿನ
14. ಏಕಾದಶ ಮಾಸಿಕ : 300ನೇ ದಿನ
15. ದ್ವಾದಶ ಮಾಸಿಕ : 330ನೇ ದಿನ
16. ಊನಾಬ್ದಿಕ : 341 ರಿಂದ 365ನೇ ದಿನಗಳೊಳಗೊಂದು ದಿನ ಮಾಡಬೇಕು.

ಊನಮಾಸಿಕಗಳು ಮಾಡುವಾಗ ಕರ್ತೃವಿನ ಜನ್ಮನಕ್ಷತ್ರ, ಜನ್ಮದಿವಸ, ಜನ್ಮವಾರಗಳಲ್ಲೂ, ಪಾಡ್ಯಮಿ, ಷಷ್ಠಿ, ಏಕಾದಶಿಗಳಲ್ಲೂ, ಶುಕ್ರ, ಭಾನು, ಮಂಗಳವಾರಗಳಲ್ಲೂ ಮಾಡಬಾರದು. ಕೃತ್ತಿಕಾ ನಕ್ಷತ್ರ, ತ್ರಿಪುಷ್ಕರ ಯೋಗ, ನಂದ ತಿಥಿಗಳಲ್ಲೂ, ಅಮಾವಾಸ್ಯೆ, ಶುಕ್ರವಾರ, ಚತುರ್ದಶಿಯಲ್ಲೂ, ಊನಮಾಸಿಕಗಳನ್ನು ಮಾಡಬಾರದು. ಯಜಮಾನನ ಜನ್ಮನಕ್ಷತ್ರಕ್ಕೆ ತಾರಾಬಲವಿರುವ ನಕ್ಷತ್ರದಂದು ಈ ಕಾರ್ಯಕ್ಕೆ ಪ್ರಶಸ್ತವಾಗಿರುತ್ತದೆ.

ಈ ಊನಮಾಸಿಕವನ್ನು 12ನೇ ದಿನವೆಂದೂ, ಕೆಲವರು 13ನೇ ದಿನವೆಂದೂ ಹೇಳುತ್ತಾರೆ. 18ನೇ ದಿನಗಳೊಳಗೆ ಮಾಡಿದ್ದಲ್ಲಿ ನಕ್ಷತ್ರ ದೋಷವಿರುವುದಿಲ್ಲವೆಂದು ಶಾಸ್ತ್ರಗಳು ತಿಳಿಸುತ್ತದೆ. ಹಾಗೇ ಕೃತ್ತಿಕಾ, ಜೇಷ್ಠ, ಆಶ್ಲೇಷ, ಪುಬ್ಬ, ಪೂರ್ವಾಭಾದ್ರ, ಪೂರ್ವಾಷಾಡ, ಮೂಲ, ಈ ನಕ್ಷತ್ರಗಳಲ್ಲಿ ಊನಮಾಸಿಕಗಳನ್ನು ಮಾಡಿದರೆ ಜೇಷ್ಠ ಪುತ್ರನಿಗೆ ಹಾನಿಯುಂಟಾಗುತ್ತದೆ. ಹಸ್ತ, ಚಿತ್ತ, ಭರಣಿ, ಸ್ವಾತಿ, ಶ್ರವಣ, ಅಶ್ವಿನಿ, ಮಖ, ಅನೂರಾಧ, ಪುಷ್ಯಾ, ಶತಭಿಷ, ಮೃಗಶಿರ, ಈ ಹನ್ನೊಂದು ನಕ್ಷತ್ರಗಳು ಊನಮಾಸಿಕಗಳಿಗೆ ಅತ್ಯಂತ ಶ್ರೇಷ್ಠವಾಗಿದೆ.

ನಂತರ ಊನಮಾಸಿಕ, ತ್ರಯಪಕ್ಷ, ಊನ್‌ಷಾಣ್ ಮಾಸಿಕ, ಊನಾಬ್ದಿಕಗಳನ್ನು ಆಯಾ ನಿರ್ದಿಷ್ಟಕಾಲಗಳಲ್ಲಿ ಮಾತ್ರ ಮಾಡಬೇಕೇ ವಿನಃ ಬೇರೆಕಾಲಗಳಲ್ಲಿ ಅದನ್ನು ಮಾಡಬಾರದು. ಇತರ ಮಾಸಿಕಗಳೊಂದಿಗೆ ಉತ್ಕರ್ಷಣೆ ಅಥವಾ ಅಪಕರ್ಷಣೆಗೆ ಅವಕಾಶವಿರುವುದಿಲ್ಲ.

* ಸುವಾಸಿನಿ ವಿಚಾರ *

ಮುತ್ತೈದೆ ಶ್ರಾದ್ಧಕರ್ಮಗಳಲ್ಲಿ ಸಾಮಾನ್ಯವಾಗಿ ಒಬ್ಬ ಸುವಾಸಿನಿಯನ್ನು ಕರೆಯುವುದು ವಾಡಿಕೆಯುಂಟು. ಆದರೆ ಅದು ಶಾಸ್ತ್ರ ಸಮ್ಮತವಲ್ಲ. ಏಕೆಂದರೆ, ಪಿತೃಸ್ಥಾನದಲ್ಲಿರುವ ಬ್ರಾಹ್ಮಣನಲ್ಲಿ ಆವಾಹನೆಯನ್ನು ಮಾಡಿದ ನಂತರ ಮುತ್ತೈದೆಯ ಅವಶ್ಯಕತೆಯೆಲ್ಲಿ ಬರುತ್ತದೆ? ಹಾಗೂ ಮುತ್ತೈದೆಗೆ ಆವಾಹನೆಯಾಗಲಿ, ಪಾದಪ್ರಕ್ಷಾಳನವನ್ನಾಗಲಿ ಇರುವುದಿಲ್ಲ. ಅರ್ಘ್ಯವಿರುವುದಿಲ್ಲ. ಕೇವಲ ನಮ್ಮಗಳ ಸಮಾದಾನಕ್ಕೆ ಒಬ್ಬ ಮುತ್ತೈದೆಯನ್ನು ಕರೆಯುವುದು ವಾಡಿಕೆಯುಂಟು. ಶಾಸ್ತ್ರದಲ್ಲಿ ಅದಕ್ಕೆ ಯಾವುದೇ ವಿಧವಾದ ಉಕ್ತಿಯಿರುವುದಿಲ್ಲ.

* ದಾನ ಪ್ರಕರಣ *

ದಶದಾನಗಳು:

"ಗೋಭೂತಿಲ ಹಿರಣ್ಯಾಜ್ಯ ವಾಸೋಧಾನ್ಯ ಗುಡಾನಿಚ ।
ರೌಪ್ಯಂಲವಣಮಿತ್ಯಾಹುಃ ದಶದಾನಾನಿ ಪ್ರಕೀರ್ತಯೇ" ॥

ಗೋದಾನ, ಭೂದಾನ, ತಿಲದಾನ, ಹಿರಣ್ಯದಾನ, ಆಜ್ಯದಾನ, ವಸ್ತ್ರದಾನ, ಧಾನ್ಯದಾನ, ಗುಡದಾನ, ರೌಪ್ಯದಾನ, ಲವಣದಾನ.

ಈ ಕೆಳಗಿನ ಶ್ಲೋಕಗಳನ್ನು ಹೇಳಿಕೊಂಡು ದಾನವನ್ನು ಕೊಡತಕ್ಕದ್ದು.

1. **ಗೋದಾನಂ:** ಯಜ್ಞಸಾದನಭೂತಾಯಾ ವಿಶ್ವಸ್ಯಾಘೌಘನಾಶಿನೀ ।
ವಿಶ್ವರೂಪಧರೋದೇವಃ ಪ್ರೀಯತಾಮನಯಾ ಗವಾ ॥

2. **ಭೂದಾನಂ:** ಸರ್ವೇಷಾಮಾಶ್ರಯಾ ಭೂಮಿರ್ವರಾಹೇಣ ಸಮುಧೃತಾ ।
ಅನಂತ ಸಸ್ಯಫಲದಾ ಅತಃಶಾಂತಿಂ ಪ್ರಯಚ್ಛಮೇ ॥

3. **ತಿಲದಾನಂ:** ಮಹರ್ಷೇಗೋತ್ರ ಸಂಭೂತಾಃ ಕಾಶ್ಯಪಸ್ಯ ತಿಲಾಃ ಸ್ಮೃತಾಃ ।
ತಸ್ಮಾದೇಷಾಂ ಪ್ರದಾನೇನಾ ಪಿತೃಪಾಪಂ ವ್ಯಪೋಹತುಃ ॥

4. **ಹಿರಣ್ಯದಾನಂ:** ಹಿರಣ್ಯಗರ್ಭಗರ್ಭಸ್ಥಂ ಹೇಮಬೀಜಂ ವಿಭಾವಸೋಃ ।
ಅನಂತಪುಣ್ಯಫಲದಮತಃ ಶಾಂತಿಂ ಪ್ರಯಚ್ಛ ಮೆ ॥

5. **ಆಜ್ಯದಾನಂ:** ಕಾಮಧೇನೋಃ ಸಮುದ್ಭೂತಂ ಸರ್ವಕ್ರತುಷು ಸಂಸ್ಥಿತಂ ।
ದೇವಾನಾಮಾಜ್ಯಮಾಹಾರಸ್ತತಃ ಶಾಂತಿಂ ಪ್ರಯಚ್ಛ ಮೇ ॥

6. **ವಸ್ತ್ರದಾನಂ:** ಶೀತವಾತೋಷ್ಣ ಸಂತ್ರಾಣಂ ಲಜ್ಜಾಯಾಂ ಲಕ್ಷಣಂ ಪರಂ ।
ದೇಹಾಲಂಕರಣಂ ವಸ್ತ್ರಮತಃ ಶಾಂತಿಂ ಪ್ರಯಚ್ಛ ಮೇ ॥

7. **ಧಾನ್ಯದಾನಂ:** ಸರ್ವದೇವಮಯಂ ಧಾನ್ಯಂ ಸರ್ವೋತ್ಪತ್ತಿಕರಂ ಮಹತ್ ।
ಪ್ರಾಣಿನಃ ಜೀವನೋಪಾಯಃ ತತಃ ಶಾಂತಿಂ ಪ್ರಯಚ್ಛ ಮೇ ॥

8. **ಗುಡದಾನಂ:** ಗುಡಮಿಕ್ಷುರಸೋದ್ಭೂತಂ ಮಂತ್ರಾಣಾಂ ಪ್ರಣವೋ ಯಥಾ ।
ದಾನೇನಾನೇನ ಚೈತಸ್ಯ ಪರಾ ಲಕ್ಷ್ಮೀಃ ಸ್ಥಿರಾ ಗೃಹೇ ॥

9. **ರೌಪ್ಯದಾನಂ:** ಪ್ರೀತಿರ್ಯತಃ ಪಿತೃಣಾಂ ಚ ವಿಷ್ಣುಶಂಕರಯೋಸ್ಸದಾ ।
ಶಿವನೇತ್ರೋದ್ಭವಂ ರೂಪ್ಯಮತಃ ಶಾಂತಿಂ ಪ್ರಯಚ್ಛ ಮೇ ॥

10. **ಲವಣದಾನಂ:** ಯಸ್ಮಾದನ್ನರಸಾಸ್ಸರ್ವೇ ನೋತ್ಕೃಷ್ಟಾ ಲವಣಂ ವಿನಾ ।
ಶಂಭೋಃ ಪ್ರೀತಿಕರಂ ಯಸ್ಮಾದತಃ ಶಾಂತಿಂ ಪ್ರಯಚ್ಛ ಮೇ ॥

ಅಷ್ಟದಾನಗಳು:

ಆಮಾನ್ನೋದಕುಂಭಗೋವಸ್ತ್ರಭೂಮ್ಯಾಸ್ತರಣಛತ್ರಾಸನಾನಿ ॥
ಅಮುಕಶರ್ಮಣಃ ಪಿತ್ರಾದೇಃ ಪರಲೋಕೇ
ತತ್ತದ್ದಾನಕಲ್ಪೋಕ್ತಫಲಾವಾಪ್ತಯೇಷ್ಟದಾನಾನಿ ಕರಿಷ್ಯೇ ॥

ಆಮಾನ್ನ, ಉದಕುಂಭ, ಗೋವು, ವಸ್ತ್ರ, ಭೂಮಿ, ಶಯ್ಯಾ, ಛತ್ರ, ಆಸನ.

1. **ಆಮಾನ್ನದಾನಂ:** ಅನ್ನಮೇವ ಯತೋ ಲಕ್ಷ್ಮೀಃ ಅನ್ನಮೇವ ಜನಾರ್ಧನಃ ।
ಅನ್ನಂ ಬ್ರಹ್ಮಾಖಿಲತ್ರಾಣಮಸ್ತು ಜನ್ಮನಿ ಜನ್ಮನಿ॥

2. **ಉದಕುಂಭದಾನಂ:** ವಾರಿಪೂರ್ಣೋ್ಘಟಶ್ಚಾಯಂ
ದೇವತ್ರಯಮಯೋ ಯತಃ।
ಪ್ರೀಯತಾಂ ಧರ್ಮರಾಜಸ್ತು ದಾನೇನಾನೇನ ಪುಣ್ಯದಃ॥

3. **ಗೋದಾನಂ:** ಯಜ್ಞಸಾದನಭೂತಾ ಯಾ ವಿಶ್ವಸ್ಯಾಘೌಘನಾಶಿನೀ।
ವಿಶ್ವರೂಪಧರೋದೇವಃ ಪ್ರೀಯತಾಮನಯಾ ಗವಾ॥

4. **ವಸ್ತ್ರದಾನಂ:** ಶೀತವಾತೋಷ್ಣ ಸಂತ್ರಾಣಂ ಲಜ್ಜಾಯಾ ಲಕ್ಷಣಂ ಪರಂ।
ದೇಹಾಲಂಕರಣಂ ವಸ್ತ್ರಮತಃ ಶಾಂತಿಂ ಪ್ರಯಚ್ಛ ಮೇ॥

5. **ಶಯ್ಯಾದಾನಂ:** ಯಥಾ ನ ಕೃಷ್ಣ ಶಯನಂ ಶೂನ್ಯಂ ಸಾಗರಜಾತಯಾ।
ಶಯ್ಯೈತಸ್ಯಾಪ್ಯಶೂನ್ಯಾಸ್ತು ತಥಾ ಜನ್ಮನಿ ಜನ್ಮನಿ ॥

6. **ಛತ್ರದಾನಂ:** ಇಹಾಮುತ್ರಾತಪತ್ರಾಣಂ ಕುರು ಮೇ ಕೇಶವ ಪ್ರಭೋ।
ಛತ್ರಂ ತ್ವತ್ಪ್ರೀತಯೇ ದತ್ತಂ ತಸ್ಯಾಸ್ತು ಚ ಸದಾ ಶುಭಂ॥

7. **ಆಸನದಾನಂ:** ತ್ರಿಲೋಕೀನಾಥ ದೇವೇಶ ಸರ್ವಭೂತ ಕೃಪಾನಿಧೇ।
ಆಸೇನನ ಚ ತುಷ್ಯಸ್ವ ಪ್ರಯಚ್ಛತಸ್ಯವಾಂಛಿತಂ ॥

8. **ತಿಲದಾನಂ:** ಮಹರ್ಷೇಗೋತ್ರ ಸಂಭೂತಾಃ ಕಾಶ್ಯಪಸ್ಯ ತಿಲಾಃ ಸ್ಮೃತಾಃ।
ತಸ್ಮಾದೇಷಾಂ ಪ್ರದಾನೇನಾ ಪಿತೃಪಾಪಂ ವ್ಯಪೋಹತು॥

ಉಪದಾನಗಳು

ಉಪದಾನಗಳು ಒಟ್ಟು ಹದಿನಾಲ್ಕು, ಅವುಗಳೆಂದರೆ:–

ಅನ್ನಂ ಚೋದಕುಂಭಂ ಚೋಪಾನಹೌ ಚ ಕಮಂಡಲುಃ

ಛತ್ರಂ ವಸ್ತ್ರಂ ತಥಾ ಯುಷ್ಟಿಂ ಲೋಹದಂಡಂ ಚ ದಾಪಯೇತ್।

ಅಗ್ನಿಷ್ಟಿಕಾಪ್ರದೀಪಂ ಚ ತಿಲಾಂಸ್ತಾಂಬೂಲಮೇವ ಚಚಂದನಂ ಪುಷ್ಪಂಮಾಲಾಂಚೋಪದಾನಾನಿ ಚತುರ್ದಶಃ ॥

"ಪಿತ್ರಾದೇಃ ಪ್ರೇತಸ್ಯೋತ್ತಮಲೋಕಪ್ರಾಪ್ತ್ಯರ್ಥಂ ಪರಲೋಕೇ ತತ್ತದ್ದಾನಕಲ್ಪೋಕ್ತಫಲಾವಾಪ್ತಯೇ ಚತುರ್ದಶದಾನಾನಿ ಕರಿಷ್ಯೆ" ಎಂದು ಹೇಳಿ ಸಂಕಲ್ಪ ಮಾಡಬೇಕು.

14 ಉಪದಾನಗಳು ಯಾವುದೆಂದರೆ: ಅನ್ನ, ಉದಕುಂಭ, ಪಾದುಕೆ, ಕಮಂಡಲ, ಛತ್ರ, ವಸ್ತ್ರ, ಊರುಗೋಲು, ಲೋಹದಂಡ, ಅಗ್ನಿಷ್ಟಿಕೆ, ದೀಪ, ತಿಲ, ತಾಂಬೂಲ, ಚಂದನ, ಪುಷ್ಪಮಾಲೆ. ಇದರೊಂದಿಗೆ ಪಾತ್ರೆ, ಉಣ್ಣೆ ಬಟ್ಟೆ, ಬೀಸಣಿಗೆ, ತಿಲಪಾತ್ರೆ, ಮುಂತಾದವುಗಳನ್ನು ಕೊಡಬಹುದು.

1. **ಆಮಾನ್ನದಾನ**: ಅನ್ನಮೇವ ಯತೋ ಲಕ್ಷ್ಮೀಃ ಅನ್ನಮೇವ ಜನಾರ್ಧನಃ ।
ಅನ್ನಂ ಬ್ರಹ್ಮಾಖಿಲತ್ರಾಣಮಸ್ತು ಜನ್ಮನಿ ಜನ್ಮನಿ ॥

2. **ಉದಕುಂಭದಾನಂ**: ವಾರಿಪೂರ್ಣೋಘಟಶ್ಚಾಯಂ
ದೇವತ್ರಯಮಯೋ ಯತಃ ।
ಪ್ರೀಯತಾಂ ಧರ್ಮರಾಜಸ್ತು ದಾನೇನಾನೇನ ಪುಣ್ಯದಃ ॥

3. **ಪಾದುಕಾದಾನಂ**:ಉಪಾಹನಹೌ ಪ್ರದಾಸ್ಯಾಮಿ ಕಂಟಕಾದಿ ನಿವಾರಣೇ ।
ಸರ್ವಮಾರ್ಗೇಷು ಸುಖದೇ ಅತಃಶಾಂತಿಂ ಪ್ರಯಚ್ಛಮೇ ॥

4. **ಕಮಂಡಲ**: ತ್ರಿಲೋಕೀನಾಥ ದೇವೇಶ ಸರ್ವಭೂತ ಕೃಪಾನಿಧೇ ।
ಅನೇನ ಪಾತ್ರೇಣ ಸಂತುಷ್ಟಃ ಪ್ರಯಚ್ಚೀತಸ್ಯ ವಾಂಚಿತಂ ॥

5. **ಛತ್ರದಾನಂ**: ಇಹಾಮುತ್ರಾತಪತ್ರಾಣಂ ಕುರು ಮೇ ಕೇಶವ ಪ್ರಭೋ ।
ಛತ್ರಂ ತ್ವತ್ಪ್ರೀತಯೇ ದತ್ತಂ ತಸ್ಯಾಸ್ತು ಚ ಸದಾ ಶುಭಂ॥

6. **ವಸ್ತ್ರದಾನಂ:** ಶೀತವಾತೋಷ್ಣ ಸಂತ್ರಾಣಂ ಲಜ್ಜಾಯಾಶ್ಚ ನಿವಾರಕಂ ।
ದೇಹಾಲಂಕರಣಂ ವಸ್ತ್ರಮತಃ ಶಾಂತಿಂ ಪ್ರಯಚ್ಛ ಮೇ ॥

7. **ಯಷ್ಟಿದಾನಂ:** ತ್ರಿಲೋಕೀನಾಥ ದೇವೇಶ ಸರ್ವಭೂತ ಕೃಪಾನಿಧೇ।
(ಊರುಗೋಲು) ಅನೇನ ಯಷ್ಠಿಕಾನೇನ ಪ್ರಯಚ್ಚಿತಸ್ಯ ವಾಂಚಿತಂ॥

8. **ಲೋಹದಂಡಃ:** ಜ್ಞಾನಾಜ್ಞಾನಕೃತಂ ಪಾಪಂ ತಥಾಂ ಲೋಭಾತ್ ಕೃತಂ ಚಿರಾತ್।
ಲೋಹದಂಡ ಪ್ರದಾನೇನ ಸರ್ವಪಾಪಂ ವ್ಯಪೋಹತು ॥

9. **ಅಗ್ನಿಷ್ಠಿಕಾದಾನಂ:** ತ್ರಿಲೋಕೀನಾಥ ದೇವೇಶ ಸರ್ವಭೂತ ಕೃಪಾನಿಧೇ ।
ಅಗ್ನಿಷ್ಠಿಕಾ ಪ್ರದಾನೇನ ಪ್ರಯಚ್ಚಿತಸ್ಯ ವಾಂಚಿತಂ ॥

10. **ದೀಪದಾನಂ:** ದೀಪೋಜ್ಞಾನಪ್ರದೋನಿತ್ಯಂ ದೇವತಾನಾಂ ಪ್ರಿಯಃ ಸದಾ ।
ದಾನೇನಾಸ್ಯಾ ಭವೇತ್ಸೌಖ್ಯಂ ಶಾಂತಿಸ್ತದ್ವಾಂಛಿತಂ ಫಲಂ ॥

11. **ತಿಲದಾನಂ** ಮಹರ್ಷೇಗೋತ್ರ ಸಂಭೂತಾಃ ಕಾಶ್ಯಪಸ್ಯ ತಿಲಾಃ ಸ್ಮೃತಾಃ ।
ತಸ್ಮಾದೇಷಾಂ ಪ್ರದಾನೇನಾ ಪಿತೃಪಾಪಂ ವ್ಯಪೋಹತುಃ ॥

12. **ತಾಂಬೂಲದಾನಂ:** ಸೋಪಸ್ಕರಂ ಚ ತಾಂಬೂಲಂ ಸರ್ವದಾ ಮಂಗಲಪ್ರಿಯಂ।
ಪ್ರಿಯಂ ಚೈವ ತು ದೇವಾನಾಂ ಸೌಗಂಧ್ಯಂ ವದನೇಸ್ತುವೈ॥

13. **ಚಂದನದಾನಂ:** ತ್ರಿಲೋಕೀನಾಥ ದೇವೇಶ ಸರ್ವಭೂತ ಕೃಪಾನಿಧೇ ।
'ಚಂದನಸ್ಯ ಪ್ರದಾನೇನ ಪ್ರಯಚ್ಚಿತಸ್ಯ ವಾಂಚಿತಂ ॥

14. **ಪುಷ್ಪಮಾಲಾದಾನ:** ತ್ರಿಲೋಕೀನಾಥ ದೇವೇಶ ಸರ್ವಭೂತ ಕೃಪಾನಿಧೇ ।
ಪುಷ್ಪಮಾಲಾ ಪ್ರದಾನೇನ ಪ್ರಯಚ್ಚಿತಸ್ಯ ವಾಂಚಿತಂ ॥

ಈ ರೀತಿಯಾಗಿ ಶ್ರೋತ್ರಿಯರಿಗೆ ದಾನಗಳನ್ನು ಕೊಡಬೇಕು.

ಕಾಮಧೇನು

* ಪಂಚ ಗೋದಾನಗಳು *

ಪಂಚ ಗೋದಾನ ಎಂದರೆ:

1. ಪಾಪ ಧೇನುದಾನಂ
2. ಉತ್ಕ್ರಾಂತಿ ಧೇನುದಾನಂ
3. ವೈತರಣೀ ಧೇನುದಾನಂ
4. ಋಣ ಧೇನುದಾನಂ
5. ಮೋಕ್ಷ ಧೇನುದಾನಂ

ಪಾಪ ಧೇನುದಾನ

"ಆಜನ್ಮೋಪಾರ್ಜಿತಂ ಪಾಪಂ ಮನೋವಾಕ್ಕಾಯ ಕರ್ಮಭಿಃ ।
ತತ್ಸರ್ವಂ ನಾಶಮಾಯಾತು ಪಾಪಧೇನು ಪ್ರದಾನತಃ ॥"

ಮಮ ಪಿತುಃ ಮನೋವಾಕ್ಕಾಯ ಕರ್ಮಭಿಃ ಆಜನ್ಮೋಪಾರ್ಜಿತ ಪಾಪಾಪನೋದನಕಾಮೋಹಂ ಇಮಾಂ ಕೃಷ್ಣಾಂ ಪಾಪಾಪನೋದಧೇನುಂ ಯಥಾಶಕ್ತಿ ಸೋಪಸ್ಕರಂ ರುದ್ರದೈವತಂ.....ಗೋತ್ರಾಯ ....ಶರ್ಮಣೇ ತುಭ್ಯಂ ಸಂಪ್ರದದೇ ನಮಮ" – ಎಂದರೆ ನಮ್ಮ ತಂದೆಯವರು ತಮ್ಮಾಶೋಪೋಷಗಳಿಗಾಗಿ ತಿಳಿದೂ ತಿಳಿಯದೆಯೋ ಮಾಡಿದ ತಪ್ಪುಗಳ ಪ್ರಾಯಶ್ಚಿತ್ತವಾಗಿ ಕಪ್ಪು ಬಣ್ಣದ ಹಸುವನ್ನು ದಾನಮಾಡಿತ್ತಿದ್ದೇನೆ ಎಂದು ಹೇಳಿ ಗೋದಾನವನ್ನು ಬ್ರಾಹ್ಮಣರಿಗೆ ಅಥವಾ ಮಹಾತ್ಮರಿಗೆ ಕೊಡಬೇಕು.

ಉತ್ಕ್ರಾಂತಿ ಧೇನುದಾನ

"ಅಸೌತ್ಕ್ರಾಂತೌ ಪ್ರವೃತ್ತಸ್ಯ ಸುಖೋತ್ಕ್ರಮಣಸಿದ್ಧಯೇ ।
ತುಭ್ಯಮೇನಾಂ ಸಂಪ್ರದದೇ ಧೇನುಮತ್ಕ್ರಾಂತಿ ಸಂಜ್ಞಿತಾಮ್ ॥"

ಮಮ ಪಿತುಃ ಪ್ರಾಣೋತ್ಕ್ರಮಣ ಪ್ರತಿಬಂಧಕೋಕ್ತ ನಿಷ್ಕೃತ್ಯನುಕ್ತ ನಿಷ್ಕೃತಿ ಜನಿತ ಸಕಲ ಪಾಪಕ್ಷಯದ್ವಾರಾ ಸುಖೇನ ಪ್ರಾಣೋತ್ಕ್ರಮಣ ಸಿದ್ಯರ್ಥಂ ಇಮಂ ಉತ್ಕ್ರಾಂತಿ ಸಂಜ್ಞಿತಾಂ ಧೇನುಂ ಯಥಾಶಕ್ತಿ ಸೋಪಸ್ಕರಂ ರುದ್ರ ದೈವತಂ ________________ ಗೋತ್ರಾಯ ____________ಶರ್ಮಣೆ ತುಭ್ಯಮಹಂ ಸಂಪ್ರದದೇ ನಮಮ" – ಪ್ರಾಣೋತ್ಕ್ರಮಣಕಾಲದಲ್ಲಿ ಮೇಲಿನ ಮಂತ್ರದೊಂದಿಗೆ ಸಂಕಲ್ಪವನ್ನು ಮಾಡಿ ಬ್ರಾಹ್ಮಣರಿಗೆ ಗೋದಾನವನ್ನು ಕೊಡಬೇಕು.

ವೈತರಣೀ ಗೋದಾನ

ವಿಷ್ಣುರೂಪ ದ್ವಿಜಶ್ರೇಷ್ಠ ಭೂದೇವ ಗತಿ ಪಾವನ ।
ತರ್ತುಂ ವೈತರಣೀಮಸ್ಯ ಕೃಷ್ಣಾಂ ಗಾಂ ಪ್ರದದಾಮ್ಯಹಮ್ ॥
ಧೇನುಕೇ ತ್ವಂ ಪ್ರತೀಕ್ಷಸ್ವ ಯಮದ್ವಾರೇ ಮಹಾಪಥೇ ।
ಉತ್ತಿತಾರ್ಷುರಯಂ ದೇವಿ ವೈತರಣ್ಯೈ ನಮೋಽಸ್ತುತೇ ॥
ಯಮದ್ವಾರ ಪಥೇಘೋರೆ ಘೋರಾ ವೈತರಣೀನದೀ ।
ತಾಂ ತರ್ತುಮಸ್ಯ ಇಚ್ಛಾಮಿ ಕೃಷ್ಣಾಂ ವೈತರಣೀಂತುಗಾಮ್ ॥

ಆಚಮನ ಮಾಡಿ, ಬೂದು ಅಥವಾ ಕಪ್ಪು ಬಣ್ಣದ ಹಸುವನ್ನು ತಂದು ಕಪ್ಪು ವಸ್ತ್ರವನ್ನು ಹೊದ್ದಿಸಿ ಗೋವನ್ನು ಪೂಜಿಸಿ ಮೇಲಿನ ಶ್ಲೋಕವನ್ನು ಹೇಳಿ ಪ್ರಾರ್ಥಿಸಿ ಮಮ ಪಿತುಃ ಯಮದ್ವಾರಸ್ಥಿತ ವೈತರಣ್ಯಾಭಿಃ ನದ್ಯುತ್ತರಣಾರ್ಥಂ ಗೋದಾನಂ ಕರಿಷ್ಯೇ ಎಂದು ಗೋವಿನ ಬಾಲವನ್ನು ಬ್ರಾಹ್ಮಣನ ಕೈಯಲ್ಲಿಟ್ಟು ಎಳ್ಳು ನೀರನ್ನು ಬ್ರಾಹ್ಮಣನ ಕೈಗೆ ಬಿಡುವುದು.

ಋಣ ಧೇನುದಾನ

ಹಿಂದಿನ ಏಳು ಜನ್ಮಗಳಿಂದ ಮಾಡಿದ ಋಣಗಳು ಪಾಪಕರ್ಮ ಪರಿಹಾರಾರ್ಥವಾಗಿ– "ಮಮ ಪಿತುಃ ಐಹಿಕಾಮುಷ್ಮಿಕ ಸಪ್ತಜನ್ಮಾರ್ಜಿತ ಋಣಪಾತಕಾಪಾಕರಣಾರ್ಥಂ ಗೋದಾನಂ ಕರಿಷ್ಯೇ" ಎಂದು ಹೇಳಿ

ಐಹಿಕಾಮುಷ್ಮಕಂಯಚ್ಚ ಸಪ್ತಜನ್ಮಾರ್ಜಿತಂಋಣಂ ।
ತತ್ಸರ್ವಂ ಶುದ್ಧಿಮಾಯಾತು ಗಾಮೇಕಾಂದದತೋ ಮಮ ॥

ಎಂದು ಹೇಳಿ ಮೇಲಿನ ರೀತಿಯಲ್ಲಿ ಸಂಕಲ್ಪಿಸಿ ಬ್ರಾಹ್ಮಣರಿಗೆ ದಾನವನ್ನು ಕೊಡಬೇಕು.

ಮೋಕ್ಷಧೇನುದಾನ

"ಮಮ ಪಿತುಃ ಸಮಸ್ತ ಪಾಪಕ್ಷಯಪೂರ್ವಕ ಸಂಸಾರ ಮೋಕ್ಷಾ ಪ್ರಾಪ್ತಿಕಾಮಃ ಶ್ರೀ ಪಾಪಾಪಹ ಮಹಾವಿಷ್ಣು ಪ್ರೀತೀಕಾಮುಶ್ಚ ಇಮಾಂ ಮೋಕ್ಷ ಧೇನುಂ ಯಥಾಶಕ್ತಿಸೋಪಸ್ಕರಾಂ ರುದ್ರ ದೈವತಾಂ ____________ ಗೋತ್ರಾಯ______ ಕರ್ಮಣೇ ಸಂಪ್ರದದೇ ನಮಮ"

ಮೋಕ್ಷದೋ ವಾಸುದೇವಸ್ತು ವೇದ ಶಾಸ್ತ್ರೇಷು ಗೀಯತೇ ।
ತತ್ಪ್ರೀತಯೇ ದ್ವಿಜಾಗ್ರ್ಯಾಯ ಮೋಕ್ಷ ಧೇನುಂ ದದಾಮ್ಯಹಮ್ ॥

ಎಂದು ಹೇಳಿ ಬ್ರಾಹ್ಮಣರಿಗೆ ದಾನವನ್ನು ಕೊಡಬೇಕು.

* ಶ್ರಾದ್ಧಗಳು *

ಶ್ರಾದ್ಧಗಳಲ್ಲಿ ಪಾರ್ವಣ ಶ್ರಾದ್ಧ, ಆಮ ಶ್ರಾದ್ಧ, ಸಂಕಲ್ಪ ಶ್ರಾದ್ಧ, ಹಾಗೂ ಹಿರಣ್ಯ ಶ್ರಾದ್ಧಗಳೆಂದು ನಾಲ್ಕು ವಿಧಗಳುಂಟು. (ಆದರೆ ಶಾಸ್ತ್ರದ ರೀತಿಯಲ್ಲಿ ಒಟ್ಟು 12 ವಿಧಗಳು ಉಲ್ಲೇಖವಾಗಿವೆ).

1. **ಪಾರ್ವಣ ಶ್ರಾದ್ಧ:** ಇದರಲ್ಲಿ ಬ್ರಾಹ್ಮಣರನ್ನು ಕರೆದು ಅವರಿಗೆ ಆಸನಾಧಿಗಳನ್ನು ಕೊಟ್ಟು ಪಿತೃಗಳನ್ನು ಆವಾಹನೆ ಮಾಡಿ ಬ್ರಾಹ್ಮಣ ಭೋಜನಾನಂತರ ಪಿಂಡಪ್ರಧಾನವನ್ನು ಮಾಡಿ ತರ್ಪಣವನ್ನು ಕೊಡುವುದು. (ಅಗ್ನೌಕರಣ, ಬ್ರಾಹ್ಮಣಬೊಜನ, ಪಿಂಡಪ್ರದಾನ)

2. **ಆಮ ಶ್ರಾದ್ಧ:** ಶ್ರಾದ್ಧ ಮಾಡಲು ಶಕ್ತಿಯಿಲ್ಲದಿದ್ದರೆ ಬ್ರಾಹ್ಮಣನನ್ನು ಕರೆದು ಅವರಿಗೆ ಯಥಾಶಕ್ತಿ ಆಮಾದಿ ದ್ರವ್ಯಗಳನ್ನು ದಾನ ಮಾಡಿ ತಾಂಬೂಲ ದಕ್ಷಿಣೆಗಳಿಂದ ಬ್ರಾಹ್ಮಣರನ್ನು ತೃಪ್ತಿಪಡಿಸಿ ನಂತರ ತರ್ಪಣವನ್ನು ಬಿಡುವುದು.

3. **ಸಂಕಲ್ಪ ಶ್ರಾದ್ಧ:** ಬ್ರಾಹ್ಮಣನನ್ನು ಕರೆದು ಅವರಿಗೆ ಪಾದಪ್ರಕ್ಷಾಳನವನ್ನು ಮಾಡಿ ಸಂಕಲ್ಪವನ್ನು ಮಾಡಿಸಿ ಯಥಾಶಕ್ತಿ ಭೋಜನವನ್ನು ಮಾಡಿಸಿ ತರ್ಪಣವನ್ನು ಮಾಡಿಸುವುದು.

4. **ಹಿರಣ್ಯ ಶ್ರಾದ್ಧ:** ಮೇಲಿನ ಯಾವುದೂ ಸಾಧ್ಯವಾಗದಿದ್ದರೆ ಆಗ ಬ್ರಾಹ್ಮಣನನ್ನು ಕರೆದು ಯಥಾಶಕ್ತಿ ದಕ್ಷಿಣೆಯನ್ನು ಕೊಟ್ಟು ತಾಂಬೂಲವನ್ನು ನೀಡಿ ನಂತರ ತರ್ಪಣವನ್ನು ಬಿಡತಕ್ಕದ್ದು.

ಪಾರ್ವಣ ಶ್ರಾದ್ಧ ಅತ್ಯಂತ ಮುಖ್ಯವಾಗಿ ಮಾಡಲೇಬೇಕಾದ ಶ್ರಾದ್ಧ. ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಮುಂದಿನ 3 ಶ್ರಾದ್ಧಗಳನ್ನು ಮಾಡಬಹುದಾಗಿದೆಯೇವಿನಃ. ಉದ್ದೇಶ ಪೂರ್ವಕವಾಗಿ ಆಮ, ಸಂಕಲ್ಪ, ಹಿರಣ್ಯ ಶ್ರಾದ್ಧಗಳನ್ನು ಮಾಡಬಾರದು.

ಕೂರ್ಚಲಕ್ಷಣಗಳು

ಪ್ರಥಮಾಬ್ಧೇ ಪಂಚದರ್ಭೈಃ ಪ್ರತ್ಯಬ್ಧೇ ಸಪ್ತಭಿಸ್ತಥಾ ।
ತೀರ್ಥೇ ಮಹಾಲಯೇ ಚೈವ ನವದರ್ಭೈಸ್ತು ಕೂರ್ಚಕಮ್ ॥

ಅಂದರೆ ಪ್ರಥಮಾಬ್ದಿ ಶ್ರಾದ್ಧದಂದು ಐದು ದರ್ಭೆಗಳ ಕೂರ್ಚನ್ನು ಪ್ರತಿಸಾಂವತ್ಸ-ರಿಕಗಳಲ್ಲಿ ಏಳು ದರ್ಭೆಗಳ ಕೂರ್ಚನ್ನು ತೀರ್ಥಶ್ರಾದ್ಧಗಳಲ್ಲಿ ಒಂಬತ್ತು ದರ್ಭೆಗಳ ಕೂರ್ಚನ್ನು ಉಪಯೋಗಿಸಬೇಕು ಎಂದು ಶಾಸ್ತ್ರಗಳಲ್ಲಿ ಉಲ್ಲೇಖಿಸಲಾಗಿದೆ.

* ಶ್ರಾದ್ಧ ಕರ್ಮವನ್ನು ಮರೆತರೆ *

ಒಂದು ವೇಳೆ ಅಜ್ಞಾನದಿಂದ ಶ್ರಾದ್ಧದ ದಿನವನ್ನು ಮರೆತಾಗ ಅಥವಾ ಕರ್ತೃವು ಅನಾರೋಗ್ಯದಿಂದ ಕರ್ಮವನ್ನು ಮಾಡಲು ಸಾಧ್ಯವಾಗದಿದ್ದಾಗ ಅಥವಾ ಅನಿವಾರ್ಯ ಕಾರಣಗಳಿಂದ ಶ್ರಾದ್ಧವನ್ನು ಮಾಡಲಾಗದಿದ್ದಾಗ ಅಂತಹ ಸಂದರ್ಭಗಳಲ್ಲಿ ಮುಂದೆ ಬರುವ ಅಮಾವಾಸ್ಯೆ ಅಥವಾ ಶುಕ್ಲ ಏಕಾದಶಿಯಂದು ಮಾಡಬಹುದು ಎಂದು ಕೆಲವರು ಹೇಳುವುದಾದರೂ ಸಹ ಅಮಾವಾಸ್ಯೆಯಂದೇ ಶ್ರೇಷ್ಠವೆಂದು ಹೇಳುತ್ತಾರೆ.

ಮಹಾಲಯ ಪಕ್ಷ ನಿರ್ಣಯ

ಭಾದ್ರಪದಮಾಸದ ಪೌರ್ಣಮಿಯ ನಂತರ ಕೃಷ್ಣಪಕ್ಷದ ಪ್ರತಿಪದಿಯಿಂದ ಅಮಾವಾಸ್ಯೆ ವರೆಗೆ 15 ದಿನಗಳು ಪ್ರತಿದಿನ ಮಹಾಲಯ ಮಾಡತಕ್ಕದ್ದು. ಒಂದೊಮ್ಮೆ ಪಕ್ಷವೃದ್ಧಿಯಾದರೆ 16 ತಿಥಿಗಳು ಕ್ಷೀಣವಾದರೆ 14 ತಿಥಿಗಳು ಇಲ್ಲವಾದರೆ 15 ಮಹಾಲಯಗಳಾಗುವವು. ಹದಿನೈದೂ ದಿನವು ಮಹಾಲಯ ಶ್ರಾದ್ಧಗಳನ್ನು ಮಾಡಬೇಕು. ಅದು ಸಾಧ್ಯವಾಗದಿದ್ದಲ್ಲಿ ಪಂಚಮಿಯಿಂದಾರಂಭಿಸಿ ಅಮಾವಾಸ್ಯೆಯ ಪರ್ಯಂತ ಮಾಡಬಹುದು. ಇದನ್ನು ಪಂಚಮ್ಯಾದಿಪಕ್ಷಗಳು ಎನ್ನುತ್ತಾರೆ. ಇನ್ನು ಷಷ್ಠ್ಯಾದಿಯಿಂದ ಅಮಾವಾಸ್ಯೆಯವರೆಗೆ ಮಾಡುವುದನ್ನು ಷಷ್ಠ್ಯಾದಿಪಕ್ಷಗಳೆನ್ನುತ್ತಾರೆ. ಅಷ್ಟಮಿಯಿಂದಾರಂಭಿಸಿ ಅಮಾವಾಸ್ಯೆಯವರೆಗೆ ಮಾಡುವುದನ್ನು ಅಷ್ಟಮ್ಯಾದಿಪಕ್ಷವೆಂದು ಕರೆಯುತ್ತಾರೆ. ಈ ರೀತಿ ಶಕ್ತ್ಯಾನುಸಾರ ಯಾವುದಾದರೊಂದು ಪಕ್ಷವನ್ನು ಹಿಡಿದು ಮಹಾಲಯವನ್ನು ಮಾಡತಕ್ಕದ್ದು. ಇದ್ಯಾವುದೂ ಮಾಡಲಾಗದಿದ್ದರೆ, ನಿಶಿದ್ದವಲ್ಲದ ಯಾವುದಾದರೊಂದು ತಿಥಿ-ಯಲ್ಲಿ ಸಕೃನ್ಮಹಾಲಯ (ಇಡೀ ಪಕ್ಷದ ಸಲುವಾಗಿ ಒಂದೇ ಮಹಾಲಯ) ವನ್ನು ಮಾಡತಕ್ಕದ್ದು. ಒಂದು ಪಕ್ಷ ತಂದೆ ಮೃತನಾದ ತಿಥಿಯು ಬಂದಾಗಲೂ ಆ ದಿನದಂದು ಸಕೃನ್ಮಹಾಲಯವನ್ನು ಮಾಡಬಹುದು.

ಶ್ರಾದ್ಧದಲ್ಲಿ ತಂದೆ ಅಥವಾ ತಾಯಿಯಿಂದ ಹಿಡಿದು ಹಿಂದಿನ ಮೂರು ತಲೆಮಾ-ರಿನವರು ವಸು, ರುದ್ರ, ಆದಿತ್ಯರ ರೂಪದಲ್ಲಿ (ಪಿತೃ, ಪಿತಾಮಹ, ಪ್ರಪಿತಾಮಹ ಅಥವಾ ಮಾತೃ, ಪಿತಾಮಹಿ, ಪ್ರಪಿತಾಮಹಿ) ತರ್ಪಣವನ್ನು ಕೊಡಬೇಕು. ಅಮಾವಾಸ್ಯೆಗಳಲ್ಲಿ ಹಾಗೂ ಗ್ರಹಣ ಸಂಕ್ರಾಂತಿಗಳಲ್ಲಿ ತರ್ಪಣವನ್ನು ತಂದೆಯಿಂದ ತಂದೆಯ ತಂದೆ (ತಾತ), ಮುತ್ತಾತ, ತಾಯಿ, ತಂದೆಯ ತಾಯಿ (ಅಜ್ಜಿ), ಮುತ್ತಜ್ಜಿ, ತಾಯಿಯ ತಂದೆ, ತಾಯಿಯ ತಾತ, ಮುತ್ತಾತ, ತಾಯಿಯ ತಾಯಿ, ತಾಯಿಯ ಅಜ್ಜಿ, ಮುತ್ತಜ್ಜಿ ಹೀಗೆ ಕೇವಲ ದ್ವಾದಶ ಪಿತೃಗಳಿಗೆ ಮಾತ್ರ ತರ್ಪಣವನ್ನು ಕೊಡಬೇಕು.

ಮಹಾಲಯದಲ್ಲಿ ಸಮಸ್ತಪಿತೃಣಾಂ ತಿಲತರ್ಪಣಂ ಕರಿಷ್ಯೆ ಎಂದು ಎಲ್ಲಾ ಒಂದು ವರ್ಗಕ್ಕೂ ತರ್ಪಣವನ್ನು ಬಿಡಬೇಕು. ಇದರಲ್ಲಿ (ಮಾತೃವರ್ಗ, ಪಿತೃವರ್ಗ ಹಾಗೂ ಆತ್ಮವರ್ಗಗಳು ಬರುತ್ತವೆ.)

* ಷಣ್ಣವತಿ ಶ್ರಾದ್ಧಗಳು *

ಅಂದರೆ ಒಂದು ವರ್ಷದಲ್ಲಿ ನಾವು 96 ತಿಥಿಗಳನ್ನು ಮಾಡಬೇಕು. ಅವುಗಳೆಂದರೆ:–

ಮನ್ವಾದಿಗಳು:	14
ಮಹಾಲಯಗಳು:	16
ಯುಗಾದಿಗಳು:	4
ಸಂಕ್ರಾಂತಿಗಳು:	12
ಅಮಾವಾಸ್ಯೆಗಳು:	12
ವ್ಯತೀಪಾತದಿನಗಳು:	13
ವೈದೃತಿದಿನಗಳು:	13
ಅನ್ವಷ್ಠಕದಿನಗಳು:	12
ಒಟ್ಟು ----	96

ಈ ಮೇಲಿನ 96 ದಿನಗಳಲ್ಲಿಯೂ ಶ್ರಾದ್ಧಗಳನ್ನು ಮಾಡುವವರಿಗೆ ಪುತ್ರ ಪೌತ್ರಾದಿ ಧನಾಭಿವೃದ್ಧಿಯುಂಟಾಗುತ್ತದೆಂದೂ, ಪಿತೃಗಳ ಪ್ರೀತಿಯನ್ನು ಹೊಂದುತ್ತಾರೆಂದು ಹೇಳುತ್ತಾರೆ.

1. ಮನ್ವಾದಿಗಳು 14. ಅವುಗಳೆಂದರೆ:

* ಭಾದ್ರಪದ ಬಹುಳ ಅಷ್ಠಮಿ
* ಶ್ರಾವಣ ಬಹುಳ ಅಮಾವಾಸ್ಯೆ
* ಆಷಾಡ ಶುದ್ಧ ದಶಮಿ
* ಆಶ್ವೀಜ ಶುದ್ಧ ನವಮಿ
* ಕಾರ್ತೀಕ ಶುದ್ಧ ದ್ವಾದಶಿ
* ಚೈತ್ರ ಶುದ್ಧ ಪೂರ್ಣಮಿ
* ಜೇಷ್ಠ ಶುದ್ಧ ಪೂರ್ಣಮಿ
* ಆಷಾಡ ಶುದ್ಧ ಪೂರ್ಣಮಿ
* ಕಾರ್ತೀಕ ಶುದ್ಧ ಪೂರ್ಣಮಿ
* ಪಾಲ್ಗುಣ ಶುದ್ಧ ಪೂರ್ಣಮಿ
* ಮಾಘ ಶುದ್ಧ ಸಪ್ತಮಿ (ರಥ ಸಪ್ತಮಿ, ಈ ದಿನ ಶುಭಕಾರ್ಯಗಳನ್ನು ಮಾಡಬಾರದು.)

* ಪುಷ್ಯ ಶುದ್ಧ ಏಕಾದಶಿ
* ಚೈತ್ರ ಶುದ್ಧ ತೃತೀಯಾ
* ಭಾದ್ರಪದ ಶುದ್ಧ ತೃತೀಯಾ

2. ಯುಗಾದಿಗಳು 4 ಅವು ಯಾವುವು ಎಂದರೆ:

* ಕಾರ್ತೀಕ ಶುದ್ಧ ನವಮಿ
* ವೈಶಾಖ ಶುದ್ಧ ತೃತೀಯಾ
  (ಅಕ್ಷಯ ತೃತೀಯಾ, ಈ ದಿನ ಶುಭಕಾರ್ಯಗಳನ್ನು ಮಾಡಬಾರದು. ಈ ದಿನದಂದು ಪಿತೃಕಾರ್ಯವನ್ನು ಮಾಡಿದರೆ ಫಲವು ದ್ವಿಗುಣವಾಗುತ್ತದೆ)
* ಮಾಘ ಬಹುಳ ಅಮಾವಾಸ್ಯೆ
* ಭಾದ್ರಪದ ಬಹುಳ ಚತುರ್ದಶಿ

3. ಮಹಾಲಯಗಳು 16 ಅವುಗಳೆಂದರೆ:

ಭಾದ್ರಪದ ಮಾಸದ ಕೃಷ್ಣಪಕ್ಷದ ಪ್ರತಿಪದೆಯಿಂದ ಅಮಾವಾಸ್ಯೆಯವರೆಗೆ ಬರುವಂತಹ ತಿಥಿಗಳು.

4. ಸಂಕ್ರಾಂತಿಗಳು 12 ಅವು ಯಾವುವೆಂದರೆ:

ಪ್ರತಿಮಾಸದಲ್ಲಿಯೂ ಸೂರ್ಯನು ಒಂದು ರಾಶಿಯಿಂದ ಮತ್ತೊಂದು ರಾಶಿಯನ್ನು ಪ್ರವೇಶಿಸುವ ದಿನವನ್ನು ಸಂಕ್ರಾಂತಿಗಳೆನ್ನುತ್ತಾರೆ. 365 ದಿನಗಳಲ್ಲಿ 12 ರಾಶಿಗಳಲ್ಲಿಯೂ ಸೂರ್ಯನು ಸಂಚರಿಸುವುದರಿಂದ 12 ಸಂಕ್ರಮಣಗಳು ಕ್ರಮವಾಗಿ ಮೇಷ ಸಂಕ್ರಮಣದಿಂದ ಮೀನ ಸಂಕ್ರಮಣದವರೆಗೆ ಬರುತ್ತದೆ.

5. ಅಮಾವಾಸ್ಯೆಗಳು 12 ಅವುಗಳೆಂದರೆ:

ಚೈತ್ರಮಾಸದಿಂದ ಪಾಲ್ಗುಣಮಾಸದವರೆಗೆ ಪ್ರತಿ ತಿಂಗಳೂ 30ನೇ ದಿನ ಅಮಾವಾಸ್ಯೆ ಬರುತ್ತದೆ. ಹೀಗೆ ಒಟ್ಟು 12 ಅಮಾವಾಸ್ಯೆಗಳು.

6. ವ್ಯತೀಪಾತ ಹಾಗೂ ವೈಧೃತಿಗಳೆಂಬ ಎರಡು ಯೋಗಗಳು:–

ಒಟ್ಟು 27 ಯೋಗಗಳಿದ್ದು ಅದರಲ್ಲಿ ವಿಷ್ಕಂಭ, ಪ್ರೀತಿ, ಆಯುಷ್ಮಾನ್, ಹೀಗೆ 27 ಯೋಗಗಳಲ್ಲಿ 17ನೇಯದು ವ್ಯತೀಪಾತ ಹಾಗೂ 27ನೇಯದು ವೈಧೃತಿ ಯೋಗಗಳಾಗಿದ್ದು ಪ್ರತಿ ಸಂವತ್ಸರದಲ್ಲಿ 13 ಬಾರಿ ಪುನರಾವರ್ತನೆಯಾಗುತ್ತದೆ.

7. ಅನ್ವಷ್ಟಕಗಳು 12. ಅವುಗಳೆಂದರೆ :–

* ಮಾರ್ಗಶಿರ ಮಾಸದ ಕೃಷ್ಣಪಕ್ಷದ ಸಪ್ತಮಿ, ಅಷ್ಟಮಿ, ನವಮಿ.
* ಪುಷ್ಯ ಮಾಸದ ಕೃಷ್ಣಪಕ್ಷದ ಸಪ್ತಮಿ, ಅಷ್ಟಮಿ, ನವಮಿ.
* ಮಾಘ ಮಾಸದ ಕೃಷ್ಣಪಕ್ಷದ ಸಪ್ತಮಿ, ಅಷ್ಟಮಿ, ನವಮಿ.
* ಪಾಲ್ಗುಣ ಮಾಸದ ಕೃಷ್ಣಪಕ್ಷದ ಸಪ್ತಮಿ, ಅಷ್ಟಮಿ, ನವಮಿ.

ಶ್ರಾದ್ಧಗಳಲ್ಲಿ ಪಕ್ಷಶ್ರಾದ್ಧವನ್ನಾದರೂ, ಸಕೃನ್ಮಹಾಲಯವನ್ನಾದರೂ ಮಾಡುವಂತಹ ಕರ್ತನಿಗೆ ಇಹದಲ್ಲಿ ಪುತ್ರ ಸಂಪತ್ತೂ, ಪರದಲ್ಲಿ ಸ್ವರ್ಗಾದಿಗಳು ಲಭಿಸಲಿದ್ದು, ಮಾಡದವನಿಗೆ ಪುತ್ರನಾಶ, ಧನನಾಶ, ದುಃಖಗಳು, ಪರದಲ್ಲಿ ನರಕಾದಿಗಳೂ ಉಂಟಾಗುತ್ತದೆ.

* ತೀರ್ಥಶ್ರಾದ್ಧಗಳು ಮತ್ತು ಅದರ ಮಹಿಮೆ *

* ನದೀ ಸ್ತೋತ್ರ *

ಕೆಳಗೆ ಕೊಟ್ಟಿರುವ ನದೀಸ್ತೋತ್ರದಲ್ಲಿ ಭಾರತದ ಎಲ್ಲಾ ಪ್ರಮುಖ ಪುಣ್ಯನದಿಗಳ ಸ್ತುತಿಯು ಅಡಗಿರುತ್ತದೆ. ಈ ಸ್ತೋತ್ರವನ್ನು ಯಾವುದೇ ತೀರ್ಥಕ್ಷೇತ್ರದಲ್ಲಿ ತೀರ್ಥಸ್ನಾನ ಮಾಡುವ ಸಂದರ್ಭದಲ್ಲಿ ಹೇಳಿಕೊಂಡರೆ ವಿಶೇಷಪುಣ್ಯವು ಪ್ರಾಪ್ತವಾಗುತ್ತದೆ.

ನದೀ ಸ್ತೋತ್ರಂ ಪ್ರವಕ್ಷ್ಯಾಮಿ   ಸರ್ವ ಪಾಪ ಪ್ರಣಾಶಿನೀ
ಭಾಗೀರಥೀ ವಾರಣಾಸಿ ಯಮುನಾಯೈ ಸರಸ್ವತಿ
ಫಲ್ಗುಣೀ ಶ್ರವಣ ಭದ್ರಾಚ ನರ್ಮದಾ ಗಂಡಕೀ ತಥಾ।
ಮಣಿಕರ್ಣಿಕಾ ಗೋಮತೀ ಪ್ರಯಾಗೇ ಚ ಪುನಃ ಪುನಃ
ಗೋದಾವರೀ ಸಿಂಧುನದೀ ಸರಯೂ ಜಾಹ್ನವೀ ತಥಾ।
ಕೃಷ್ಣವೇಣೀ ಭೀಮರಥೀ ಕಾಕಿನೀ ಭವನಾಶಿನೀ
ತುಂಗಭದ್ರಾ ಮಲಾಪಹಾರೀ ವರದಾ ಕುಮದ್ವತೀ ತಥಾ।
ಕಾವೇರೀ ಕಪಿಲಾ ಕುಮುದಾ ಹೇಮಾವತೀ ಹರಿದ್ರಾವತೀ
ವೇದಾವತೀ ನೇತ್ರಾವತೀ ಸರಯೂ ಜಾಹ್ನವೀ ತಥಾ।
ತಾಮ್ರಪರ್ಣೀ ಸ್ವರ್ಣಮುಖೀ ಪಿನಾಕ್ಯಂಭು ಕುಶಾವತೀ
ಮಂದಾರೀ ತಪತೀ ಕಾಳಿ ಕಾಳಿಂದೀ ಗಣಪತೀ ತಥಾ।
ಕೌಮೋದಕೀ ಕುರುಕ್ಷೇತ್ರೋ ಗೋವಿಂದೋ ದ್ವಾರಕೀ ಭವೇತ್
ಮಹೇಶ್ವರೀ ಧರ್ಮವೇಣೀ ಚಂದ್ರಾಣೀ ಅತ್ರಿಣೀ ತಥಾ।
ನಂದಿನೀ ನಳಿನೀ ಸೀತಾ ಮಾಲತೀ ಚ ಮಲಾಪಹಾ ಸಂಭೂತಾ ವೈಷ್ಣವೀ ತಥಾ।
ಕಮಂಡಲು ಧನುಷ್ ಕೋಟಿ ಕಪಿನೀ ಗೌತಮೀ ತಥಾ।
ಸುಪ್ರಸಿದ್ಯಾತ್ ನದ್ಯಾತ್ ಮಹಾನದ್ಯಾತ್ ಸಂಗಮೇ
ಪಂಚ ಗಂಗಾ ಭರದ್ವಾಜ ಸೇತು ರಾಮೇಶ್ವರಂ ತಥಾ।
ನಾರದೇಚ ನದಿಃ ಪೂರ್ವೇ ಸರ್ವನದ್ಯಾ ಪ್ರಕೀರ್ತಿತಾಃ।
ಪ್ರಾತಃ ಕಾಲೇ ಪಠೇತ್ ನಿತ್ಯಂ ಸ್ನಾನಕಾಲೇ ವಿಶೇಷತಃ।
ಕೋಟಿಜನ್ಮ ಕೃತಂ ಪಾಪಂ ಸ್ಮರಣೇನ ವಿನಶ್ಯತಿ।
ಬ್ರಹ್ಮ ಹತ್ಯಾದಿ ಪಾಪಘ್ನಂ ಮಹಾ ಪಾತಕ ನಾಶನಂ।
ಇಹ ಲೋಕೇ ಸುಖಂ ಪ್ರಾಪ್ತ್ಯಂ ಅಂತೇ ಸಾಯುಜ್ಯಮಾಪ್ನುಯಾತ್।
ಇತೀ ಶ್ರೀ ನದೀಸ್ತೋತ್ರಂ ಸಂಪೂರ್ಣಂ

॥ ಭಾಗೀರಥ್ಯಾರ್ಪಣಮಸ್ತು ॥

ಅಯೋಧ್ಯಾ ಮಥುರಾ ಮಾಯಾ ಕಾಶೀ ಕಾಂಚೀ ಹ್ಯವಂತಿಕಾ ।
ಪುರೀ ದ್ವಾರವತೀಚ್ಛೈವ ಸಪ್ತೈತೇ ಮೋಕ್ಷದಾಯಕಾಃ ॥
ವಿಶ್ವೇಶಂ ಮಾಧವಂ ದುಂಢಿಂ ದಂಡಪಾಣಿಂಚ ಭೈರವಂ ।
ವಂದೇಕಾಶೀಂ ಗುಹಾಂ ಗಂಗಾಂ ಭವಾನೀಂ ಮಣಿಕರ್ಣಿಕಾಂ ॥
ಗೋಕರ್ಣ ಸೇತೋ ಹಿಮಾವಾನ್ ಪ್ರಯಾಗ ।
ಕಾಶ್ಮೀರ ಸೋಮೇಶ್ವರ ರುದ್ರಪಾದಾಃ ॥
ಶ್ರೀರಂಗ ಕೇದಾರ ಮನಂತ ಕನ್ಯಾಂ ।
ಸ್ವಾಮಿನ್ ಕುರುಕ್ಷೇತ್ರ ಸದಾನಮಸ್ತೆ ॥

ನಮ್ಮ ಪವಿತ್ರ ಭರತಖಂಡದಲ್ಲಿ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಅನೇಕ ಪುಣ್ಯಕ್ಷೇತ್ರಗಳಿವೆ. ಈ ಎಲ್ಲಾ ಕ್ಷೇತ್ರಗಳಲ್ಲೂ ಸಂಚರಿಸಿ, ತೀರ್ಥ-ಸ್ನಾನವನ್ನಾಚರಿಸಿ, ಪಿತೃಶ್ರಾದ್ಧವನ್ನು ಕ್ಷೇತ್ರವಿಧಿಯಂತೆ ಆಚರಿಸಿ ನಂತರ ಕ್ಷೇತ್ರಾಧಿದೇವತೆಯ ಸೇವೆಯನ್ನು ಯಥಾಶಕ್ತಿಯಾಗಿ ಮಾಡುವುದು ಅತ್ಯಂತ ಪುಣ್ಯಪ್ರದ. ಆದರೆ ವಿಶಾಲವಾದ ಭರತಖಂಡದಲ್ಲಿ ಇರುವ ಎಲ್ಲಾಕ್ಷೇತ್ರಗಳನ್ನೂ ಸಂದರ್ಶಿಸುವ ಶಕ್ತಿ ಎಲ್ಲರಿಗೂ ಇರುವುದಿಲ್ಲ. ಆದ್ದರಿಂದ ಎಲ್ಲಾಕ್ಷೇತ್ರಗಳ ಪೈಕಿ ಕನಿಷ್ಠ ಐದು ಪ್ರಮುಖ ಕ್ಷೇತ್ರಗಳಾದ ಪ್ರಯಾಗ, ಕಾಶೀ, ಗಯಾ, ಮಾತೃಗಯಾ ಹಾಗೂ ಬದರೀ ಕ್ಷೇತ್ರಗಳನ್ನಾದರೂ ಸಂದರ್ಶಿಸಿ ಪಿತೃಕಾರ್ಯಗಳನ್ನು ನಡೆಸಿ ಪಿತೃಗಳನ್ನು ತೃಪ್ತಿಪಡಿಸಿ ಅವರ ಕೃಪೆಗೂ ಹಾಗೂ ಕ್ಷೇತ್ರಾಧಿದೇವತೆಯ ಕೃಪೆಗೂ ಪಾತ್ರರಾಗುವುದು ಸೂಕ್ತವೆಂದು ಕ್ಷೇತ್ರಪುರಾಣಗಳಲ್ಲಿ ವಿವರಿಸಿದ್ದಾರೆ

ಪ್ರಯಾಗ ಮಹಾತ್ಮೆ

ಪುಣ್ಯಕ್ಷೇತ್ರಗಳಲ್ಲಿ ಪ್ರಯಾಗ ಕ್ಷೇತ್ರವೂ ಒಂದು (ಈಗಿನ ಅಲಹಾಬಾದ್ ನಗರ). ಈ ಕ್ಷೇತ್ರಕ್ಕೆ ಒಂದು ಇತಿಹಾಸವೂ ಇದೆ. ಅದೇನೆಂದರೆ ಒಮ್ಮೆ ಯುದಿಷ್ಠಿರನು ಕಲಿಯುಗ ಪ್ರವೇಶವನ್ನು ತಿಳಿದು ಮಾರ್ಕಂಡೇಯರನ್ನು ಪ್ರಾರ್ಥಿಸಿಕೊಂಡನು. ಸ್ವಾಮಿ! ಕಲಿಯುಗದಲ್ಲಿ ಧರ್ಮ, ದಯೆ, ಸತ್ಯ ಇವುಗಳು ಕ್ಷೀಣವಾಗುತ್ತವೆ. ಮಾನವರು ಅಧರ್ಮಿಗಳಾಗುತ್ತಾರೆ. ಆದ್ದರಿಂದ ಅವರ ಉದ್ಧಾರಕ್ಕಾಗಿ ಏನಾದರೂ ಉಪಾಯವನ್ನು ತಿಳಿಸಬೇಕೆಂದು ವಿನಂತಿಸಿಕೊಂಡಾಗ ಮುನಿಗಳು ಹೇಳುತ್ತಾರೆ. ಕಲಿಯುಗದಲ್ಲಿ ತಪಸ್ಸು ಮತ್ತು ಯಜ್ಞಯಾಗಾದಿಗಳು ಬಹಳ ಕಷ್ಟಕರವಾದ ಕೆಲಸ. ಸುಲಭವಾಗಿ ತಮ್ಮ ಪಾಪಗಳನ್ನು ಪರಿಹರಿಸಿಕೊಳ್ಳಲು ತೀರ್ಥಯಾತ್ರೆಯೊಂದೇ ಶ್ರೇಷ್ಠ. ಅದರಲ್ಲೂ ಪ್ರಯಾಗವನ್ನು ತೀರ್ಥರಾಜನೆಂದೂ, ಸರ್ವಶ್ರೇಷ್ಠನೆಂದೂ ಹೇಳುತ್ತಾರೆ. ಏಕೆಂದರೆ, ಇಲ್ಲಿ ವೇದಾದಿಗಳು, ಇತರ ಎಲ್ಲಾ ಸೃಷ್ಟಿಯೂ ಸೇ-ರಿಕೊಂಡಿದೆ. ಇದರಲ್ಲಿ ಅಕ್ಷಯ ವಟವೃಕ್ಷವೂ ಇದೆ. ಇದೇ ವಟವೃಕ್ಷದಲ್ಲಿ ಭಗವಂತ

ಬಾಲ ಮುಕುಂದನ ಕಾಲಿನ ಹೆಬ್ಬೆರಳನ್ನು ಬಾಯಲ್ಲಿ ಚೀಪುತ್ತಾ ತನ್ನ ಬಾಲ ಲೀಲೆಗಳನ್ನು ಜಗತ್ತಿಗೆ ತೋರುತ್ತಾನೆ. ನಂತರ ವೇದಾದಿಗಳೂ, ನಂತರ ಬ್ರಹ್ಮನೂ ಪ್ರಕಟವಾಗುತ್ತಾರೆ. ಇದೇ ಮೂಲ ಅಕ್ಷಯ ವಟವೃಕ್ಷವಾಗಿದೆ. ಸೂರ್ಯಗ್ರಹಣ ಕಾಲದಲ್ಲಿ ಕುರುಕ್ಷೇತ್ರದಲ್ಲಿ ಸ್ನಾನವನ್ನು ಮಾಡಿದರೆ ಎಂತಹ ಫಲಸಿಗುವುದೊ ಅದರ ಹತ್ತುಪಾಲು ಗಂಗಾ ಸ್ನಾನದಿಂದ ಲಭಿಸುತ್ತದೆ ಹಾಗೂ ವಿಂಧ್ಯಾಚಲದಲ್ಲಿ ಅಥವಾ ಇತರೆ ಗಂಗೆಯಲ್ಲಿ ಸ್ನಾನವನ್ನು ಮಾಡಿದರೆ ಇದಕ್ಕೆ 10ರಷ್ಟು ಹೆಚ್ಚಾಗುತ್ತದೆ. ಕಾಶಿಯಲ್ಲಿನ ಉತ್ತರ ವಾಹಿನಿ ಗಂಗಾ ಸ್ನಾನವನ್ನು ಮಡಿದರೆ ಮತ್ತೂ 10ಪಟ್ಟು ಹೆಚ್ಚಿನ ಫಲವು ಸಿಗುವುದು. ಆದರೆ ಪ್ರಯಾಗದಲ್ಲಿರುವ ಗಂಗಾ, ಯಮುನಾ, ಸರಸ್ವತಿ ಸಂಗಮದಲ್ಲಿ ಸ್ನಾನವನ್ನು ಮಾಡಿದರೆ ಸರ್ವಪಾಪನಿವಾರಣೆಯಾಗಿ ಮಹತ್ತರ ಫಲಗಳನ್ನು ಪಡೆಯಬಹುದು. ಇದರ ವರ್ಣನೆ ಯಾರಿಂದಲೂ ಸಾಧ್ಯವಿಲ್ಲ.

ವೇಣೀಮಾಧವನು ಇಲ್ಲಿ ಸಂಗಮ ಸ್ವರೂಪದಿಂದ ಸ್ಥಿತವಾಗಿರುವನು. ಇಲ್ಲಿ ಅನೇಕ ನದಿಯ ತೀರ್ಥಗಳು ಸೇರುತ್ತವೆ. ಇಲ್ಲಿನ ದರ್ಶನದಿಂದಲೇ ಪ್ರಾಣಿಗಳು ಜಿವನ್ಮುಕ್ತಿಯನ್ನು ಹೊಂದುತ್ತಾರೆ. ಈ ಕ್ಷೇತ್ರದಲ್ಲಿ ಸುಮಾರು ಅರವತ್ತು ಕೋಟಿ ಹತ್ತುಸಾವಿರ ತೀರ್ಥಗಳು ಅಡಕವಾಗಿದೆಯೆಂದು ಮಹಾಭಾರತದಲ್ಲಿ ತಿಳಿಸಿರುತ್ತಾರೆ. ಆದಿಶೇಷನೂ ಈ ತೀರ್ಥಗಳನ್ನು ಹೊಗಳಿರುವುದಾಗಿ ಮಾತ್ಸ್ಯಪುರಾಣ ಹಾಗೂ ಪದ್ಮಪುರಾಣದಲ್ಲಿ ತಿಳಿದುಬಂದಿದೆ. ಇಲ್ಲಿ ವೇಣೀಮಾಧವನೊಂದಿಗೆ 13 ಮಂದಿ ಮಾಧವರಿದ್ದಾರೆ. ಅವರೆಂದರೆ –

ಶಂಖಮಾಧವ, ಚಕ್ರಮಾಧವ, ಗದಾಮಾಧವ, ಪದ್ಮಮಾಧವ, ಅನಂತಮಾಧವ, ಬಿಂದುಮಾಧವ, ಮನೋಹರಮಾಧವ, ಅಸಿಮಾಧವ, ಸಂಕಟಹರಣಮಾಧವ, ಆದಿವೇಣೀಮಾಧವ, ಆದಿಮಾಧವ ಮತ್ತು ವಟಮಾಧವರು ಇಲ್ಲಿ ನೆಲೆಸಿದ್ದಾರೆ.

ಇಲ್ಲಿ ಗಂಗಾ, ಯಮುನಾ, ಸರಸ್ವತೀ ನದಿ ತೀರದಲ್ಲಿ (ಸಂಗಮಕ್ಷೇತ್ರ) ಸ್ನಾನವನ್ನು ಮಾಡಿ ಪಿತೃಗಳಿಗೆ ಶ್ರಾದ್ಧ ಅಥವಾ ತರ್ಪಣಾದಿಗಳನ್ನು ಮಾಡಿದರೆ ಪಿತೃದೇವತೆಗಳು ತಮ್ಮ ಎಲ್ಲಾ ಪಾಪಗಳಿಂದ ಮುಕ್ತರಾಗುತ್ತಾರೆ ಹಾಗೂ ಯಾರುಮಾಡುತ್ತಾರೋ ಅವರಿಗೆ ಪಿತೃಗಳ ಆಶೀರ್ವಾದಗಳು ಸಿಗುತ್ತದೆ.

ಕಾಶೀಯತ್ರೆಯ ಫಲಗಳು

ಸಾಮಾನ್ಯವಾಗಿ ಕಾಶೀ ಎಂಬ ಹೆಸರು ಕೇಳಿದೊಡನೆಯೇ ಮನಸ್ಸಿಗೆ ಗಂಗಾಸ್ನಾನ, ವಿಶ್ವನಾಥ ದರ್ಶನ, ಮೋಕ್ಷ ಹೀಗೆ ನಮ್ಮಲ್ಲಿ ಅನೇಕ ಭಾವನೆಗಳು ಮೂಡುತ್ತವೆ. ಆದರೆ ಅಲ್ಲಿ ಮುಖ್ಯವಾದವುಗಳು ಯಾವುವು? ಹೇಗೆ ನಡೆದುಕೊಳ್ಳಬೇಕು? ಎಂದಾಗ ಬಿಲ್ವಾಷ್ಟೋತ್ತರದಲ್ಲಿದ್ದಂತೆ

"ಕಾಶೀಕ್ಷೇತ್ರ ನಿವಾಸಂ ಚ ಕಾಲಭೈರವ ದರ್ಶನಂ ।
ಪ್ರಯಾಗೇ ಮಾಧವಂ ದೃಷ್ಟ್ವಾ ಏಕ ಬಿಲ್ವಂ ಶಿವಾರ್ಪಣಂ ॥

ಎಂದರೆ ಕಾಶಿಯಲ್ಲಿ ಒಂದು ದಿನವಾದರೂ ಇದ್ದು ಕಾಲಭೈರವನ ದರ್ಶನವನ್ನು ಮಾಡಿ ನಂತರ ಪ್ರಯಾಗ (ಈಗಿನ ಅಲಹಾಬಾದ್) ದಲ್ಲಿನ ವೇಣೀಮಾಧವನ ದರ್ಶನವನ್ನು ಮಾಡಿ ವೇಣೀಮಾಧವನ ಮುಂದಿರುವ ಲಿಂಗಕ್ಕೆ ಬಿಲ್ವವನ್ನು ಸಮರ್ಪಿಸಿ ಎಂದು ತಿಳಿಸುತ್ತದೆ. ಈ ನಿಟ್ಟಿನಲ್ಲಿ ನೋಡಿದಾಗ ಕಾಶೀವಾಸ, ಕಾಶೀಯಲ್ಲಿನ ಯಾತ್ರೆಗಳು, ಪಂಚತೀರ್ಥಗಳಲ್ಲಿ ಸ್ನಾನ, ಕಾಶೀ ವಿಶ್ವೇಶ್ವರನ ದರ್ಶನ ಇವೆಲ್ಲವೂ ಪುಣ್ಯಪ್ರದ. ಕಾಶಿಯಲ್ಲಿ ಮರಣವಂತೂ ಮುಕ್ತಪ್ರದ.

ಹಾಗಿದ್ದಮೇಲೆ, ಕಾಶೀಯಾತ್ರೆ ಮನೋರಂಜನೆಗಾಗಿ ಹೊರಡುವ ಪ್ರವಾಸವಲ್ಲ. ಕಾಶಿಯು ಪಾಪಶಮನಕ್ಕೆ ಹಾಗೂ ಪುಣ್ಯಗಳಿಗೆ ಮೀಸಲಾದ ಯಾತ್ರೆ. ಕಾಶಿಯಾತ್ರೆ ಕೇವಲ ಒಂದೆರೆಡು ದಿನದಲ್ಲಿ ಮುಗಿಸುವ ಯಾತ್ರೆಯಲ್ಲ. ಕಾಶಿಯಲ್ಲಿ 9 ರಾತ್ರಿಗಳನ್ನಾದರೂ ಕಳೆಯಬೇಕೆಂದು ಕೆಲವು ಗ್ರಂಥಗಳಲ್ಲಿ ಉಕ್ತವಾಗಿದೆ ಅಲ್ಲಿ ಅನೇಕ ಸ್ಥಳಗಳಿದ್ದು, ಕೆಲದಿನಗಳ ಮಟ್ಟಿಗಾದರೂ ಅಲ್ಲಿ ನೆಲೆಸಿದರೆ ಮಾತ್ರವೇ ಎಲ್ಲಾ ಸ್ಥಳಗಳಿಗೂ ಹೋಗಲು ಸಾಧ್ಯ. ಸರಿಸುಮಾರು 55/60 ಯಾತ್ರೆಗಳಿದ್ದು ಅವುಗಳಲ್ಲಿ ಕೆಲವು ಮುಖ್ಯಯಾತ್ರೆಗಳನ್ನು ನೋಡಿದಾಗ:

1. **ನಿತ್ಯಯಾತ್ರೆ:–** ಗಂಗಾಸ್ನಾನ, ದುಂಡಿರಾಜಗಣಪತಿ ದರ್ಶನ, ದಂಡಪಾಣಿ, ವಿಶ್ವೇಶ್ವರ, ಅನ್ನಪೂರ್ಣೇಶ್ವರಿ, ಕಾಲಭೈರವ ದರ್ಶನ ಮುಗಿಸಿ ಮುಕ್ತಿಮಂಟಪದಲ್ಲಿ ಯಾತ್ರೆ ಮುಗಿಸಬೇಕು. ಇಲ್ಲವಾದರೆ ಮಣಿಕರ್ಣಿಕೆಯಲ್ಲಿ ಸ್ನಾನ ಮಾಡಬೇಕು.

2. **ಪಂಚತೀರ್ಥಯಾತ್ರೆ:–** ಅಸಿಸಂಗಮ, ದಶಾಶ್ವಮೇಧ, ಪಂಚಗಂಗಾ, ಮಣಿಕರ್ಣಿಕಾ ಮತ್ತು ವರುಣಸಂಗಮ (ಆದಿಕೇಶವ, ಪಾದೋದಕ)

3. **ಅಂತರ್ಗೃಹಯಾತ್ರೆ:–** ಓಂಕಾರೇಶ್ವರ ಖಂಡ, ವಿಶ್ವೇಶ್ವರ ಖಂಡ, ಕೇದಾರೇಶ್ವರ ಖಂಡ ಯಾತ್ರೆಗಳು.

4. **ಪಂಚಕ್ರೋಶಿಯಾತ್ರೆ:–** ಇದು ಎಲ್ಲಕ್ಕಿಂತಲೂ ಶ್ರೇಷ್ಠವಾದದ್ದು. ಮಾನವನು ಮಾಡಿದ ಪಾಪಕರ್ಮಗಳಿಗೆ ಸೂಕ್ತ ಪ್ರಾಯಶ್ಚಿತ್ತವಿಲ್ಲದೆ ಶಾಂತಿಯಿಲ್ಲ. ಹಾಗೆ ಪ್ರಾಯಶ್ಚಿತ್ತವಿಲ್ಲದೆ ಇದ್ದರೆ ಭೈರವೀ ಯಾತನೆ ತಪ್ಪಿದ್ದಲ್ಲ. ಬೇರೆಕಡೆ ಮಾಡಿದ ಪಾಪಗಳಿಗೆ ಕಾಶಿಯಲ್ಲಿ ಪ್ರಾಯಶ್ಚಿತ್ತವಿದ್ದು, ಕಾಶಿಯಲ್ಲಿ ಮಾಡಿದ ಪಾಪಕರ್ಮಕ್ಕೆ ಪ್ರಾಯಶ್ಚಿತ್ತವೆಲ್ಲಿ? ಎಂದಾಗ ಪಂಚಕ್ರೋಶಿಯಾತ್ರೆ ಮಾತ್ರ ಎಂದು "ಕಾಶೀ ರಹಸ್ಯ"ವೆಂಬ ಗ್ರಂಥದಲ್ಲಿ ತಿಳಿಸಿದ್ದಾರೆ. ಬ್ರಹ್ಮಾಂಡದಲ್ಲಿರುವುದೆಲ್ಲ ಪಿಂಡರೂಪದಲ್ಲಿದೆ. ಸಮಷ್ಟಿಯಲ್ಲಿರುವುದೆಲ್ಲಾ ವ್ಯಷ್ಟಿಯಲ್ಲಿ ಅಡಕವಾಗಿದೆ ಎಂಬ ಸೂತ್ರವನ್ನು ಪಂಚಕ್ರೋಶಿಯಾತ್ರೆಯಲ್ಲಿ ಕಾಣಬುಹುದು. ಕಾಶೀಕ್ಷೇತ್ರವೇ ಒಂದು ಪವಿತ್ರಮಂಡಲ. ಅದರಲ್ಲಿ ಬ್ರಹ್ಮಾಂಡದ ಎಲ್ಲ ಪವಿತ್ರತೆಯೂ ನೆಲೆಯಾಗಿದೆ. ಅದರಲ್ಲೂ ಪಂಚಕ್ರೋಶಿ ಈ ಪವಿತ್ರ ಕ್ಷೇತ್ರದ ಜ್ಞಾನಸ್ವರೂಪ. ಭಕ್ತರಿಗೆ ಪಂಚಕ್ರೋಶಿ ಪವಿತ್ರ ಸ್ಥಳಗಳು ಶಿವನ ಒಂದೊಂದು ಭಾಗವಿದ್ದಂತೆ. ಆದ್ದರಿಂದ ಇಲ್ಲಿ ಯಾತ್ರೆ ಮಾಡಿದಲ್ಲಿ ಎಲ್ಲಾ ಪಾಪಗಳೂ ನಾಶವಾಗುತ್ತದೆಂದು ಪದ್ಮಪುರಾಣದಲ್ಲಿ ತಿಳಿಸಿದೆ. ಇದರ ಕೇಂದ್ರಬಿಂದು ಮಧ್ಯೇಶ್ವರ ಯಾತ್ರೆಗಳು ಪಂಚಕ್ರೋಶಿಯಾತ್ರೆಯ ಮಾರ್ಗದ 55 ಮೈಲಿಗಳನ್ನು ಕಾಲ್ನಡಿಗೆಯಲ್ಲಿ ಮೂರರಿಂದ ಐದುದಿನಗಳಲ್ಲಿ ಕ್ರಮಿಸುತ್ತಾರೆ. ಇದರಲ್ಲಿ ಕರ್ದಮೇಶ್ವರ, ಭೀಮಚಂಡಿ, ರಾಮೇಶ್ವರ, ಶಿವಪುರ, ಕಪಿಲಧಾರ, ಮತ್ತು ಮಣಿಕರ್ಣಿಕಾ ಎಂಬ ಆರು ಸ್ಥಳಗಳಲ್ಲಿ ನಿಲ್ಲುವ ಕ್ರಮವಿದೆ. ಜೊತೆಗೆ ಏಕಪಾದಗಣ, ಲಂಗೋಟಿಯ ಹನುಮಾನ್, ದೆಹಲಿ ವಿನಾಯಕ, ಖರ್ವವಿನಾಯಕ, ಎಂಬಲ್ಲಿ ವಿಶೇಷ ಪೂಜೆ ಸಲ್ಲಿಸಬಹುದು. ಎಂಟು ಕಡೆ ವಿಶೇಷ ಸ್ನಾನ, ಪೂಜೆ ಮಾಡಬೇಕು ಎಂಬ ವಿಧಿಯಿದೆ. ಮಾರ್ಗದಲ್ಲಿರುವ 108 ಮಂದಿರಗಳು, ತೀರ್ಥಕುಂಡಗಳಲ್ಲಿ ದರ್ಶನ ಪಡೆಯುತ್ತಾರೆ. ಅವೆಂದರೆ 56– ಶಿವಲಿಂಗ, 11– ವಿನಾಯಕ, 10– ಶಿವಗಣ, 10– ದೇವಿ, 4– ವಿಷ್ಣು, 2– ಭೈರವ ಮತ್ತು 15 ಇತರ ತೀರ್ಥಗಳು ಸೇರಿವೆ. ಈ ಯಾತ್ರೆಯನ್ನು ನಡೆಸುವವರು ವಿಶ್ವೇಶ್ವರ ಅಂತರ್ಗೃಹ ನೆಡೆಸುವುದು ಅಗತ್ಯ ಎನ್ನುತ್ತಾರೆ.

ಇದಲ್ಲದೆ ಮಹಾವಿಷ್ಣುವಿನ ನಾಲ್ಕು ಧಾಮಗಳು, ಪಂಚಾಯತನ, ಸಪ್ತರ್ಷಿ, ಸಪ್ತಪುರಿ, ಅಷ್ಟಮಹಾಲಿಂಗ, ಅಷ್ಟಭೈರವ, ನವಗೌರಿ, ನವದುರ್ಗಾ, ನವಶಕ್ತಿ, ನವಗ್ರಹ, ಏಕಾದಶಮಹಾರುದ್ರ, ದ್ವಾದಶಜ್ಯೋತಿರ್ಲಿಂಗ, ದ್ವಾದಶಾದಿತ್ಯ, ನಲವತ್ತೆರೆಡು ಮಹಾಲಿಂಗಗಳು, 56– ವಿನಾಯಕ, 64 –ಯೋಗಿನಿಯರ ಅನುಕ್ರಮ, ಷಡಾಂಗ, ತ್ರಿಕಂಟಕ, ನಗರಪ್ರದಕ್ಷಿಣೆಗಳು ಸೇರಿವೆ.

* ಗಯಾ ಮಹಾತ್ಮೆ *

'ಜೀವತೋ ವಾಕ್ಯಕರಣಾತ್ ಔರ್ಧ್ವದೈಹಿಕ ಸತ್ಕ್ರಿಯಾತ್ ।
ಗಯಾಯಾಂ ಪಿಂಡದಾನೇನ ತ್ರಿಭಿಃ ಪುತ್ರಸ್ಯ ಪುತ್ರತಾ' ॥

ಅತ್ಯಂತ ಪ್ರಾಚೀನ ಕಾಲದಲ್ಲಿ ಗಯಾಸುರನೆಂಬ ಒಬ್ಬ ದೈತ್ಯನಿದ್ದ. ಇವನು ಕೋಲಾಹಲ ವೆಂಬ ಪರ್ವತದಲ್ಲಿ ಬ್ರಹ್ಮನನ್ನು ಕುರಿತು ತಪಸ್ಸನ್ನು ಮಾಡಿ ಬ್ರಹ್ಮನಿಂದ ಎರಡು ವರಗಳನ್ನು ಕೇಳಿದನು. ಅವುಗಳೆಂದರೆ "ನಾನು ಮೂರು ಲೋಕದಲ್ಲಿದ್ದವರೆಲ್ಲರಿಗಿಂತಲೂ ಪವಿತ್ರನಾಗಿರಬೇಕು ಮತ್ತು ನನ್ನನ್ನು ಸ್ಪರ್ಷ ಮಾಡಿದ ವಸ್ತುಗಳೂ, ಜೀವಿಗಳೂ ಮುಕ್ತಿಯನ್ನು ಹೊಂದಲು ಯೋಗ್ಯರಾಗ ಬೇಕು." ಆಗ ಬ್ರಹ್ಮನು ಗಯಾಸುರನ ಅಪೇಕ್ಷೆಯಂತೆ ಈ ಎರಡು ವರಗಳನ್ನು ಕೊಟ್ಟನು. ಈ ವರಗಳ ಪ್ರಕಾರ ಇವನನ್ನು ಮುಟ್ಟಿದವರೆಲ್ಲ ಮುಕ್ತಿಗೆ ಯೋಗ್ಯರಾಗುತ್ತಿದ್ದರು. ಇದರ ಪರಿಣಾಮದಿಂದ ಧರ್ಮ, ದಾನ, ಪಿತೃಕಾರ್ಯ ಈ ಎಲ್ಲವೂ ಕಮ್ಮಿಯಾಗುತ್ತಾ ಬಂತು. ಏಕೆಂದರೆ ಎಲ್ಲರೂ ಇವನನ್ನೇ ಸ್ಪರ್ಶಿಸಿ ಮುಕ್ತಿ ಪದವಿಯನ್ನು ಪಡೆಯುತ್ತಿದ್ದರು. ಇದರ ಪರಿಣಾಮವಾಗಿ ಯಮಲೋಕ, ಸ್ವರ್ಗ, ನರಕ ಎಲ್ಲವೂ ಬಿಕೋ ಎನಿಸಿದವು. ಇದರಿಂದ ಪ್ರಕೃತಿಯ ನಿಯಮವೂ ಬದಲಾಯಿತು. ನಿತ್ಯ ಆಚರಣೆಯು ನಿಂತು ಹೋಯಿತು. ಎಲ್ಲಾ ದೇವತೆಗಳು ಬ್ರಹ್ಮನ ಸಮೀಪ ಹೋಗಿ ಪ್ರಾರ್ಥಿಸಿದರು. ದೇವತೆಗಳ ಸಹಿತ ಬ್ರಹ್ಮ ದೇವರು ಅನಾದಿಯಾದ ವಿಷ್ಣುವಿನ ಬಳಿಗೆ ಹೋದರು. ವಿಷ್ಣುವನ್ನು ಪ್ರಾರ್ಥಿಸಿದರು. ಆ ವಿಷ್ಣುವು ದೇವತೆಗಳ ಹಾಗೂ ಬ್ರಹ್ಮ ದೇವರ ಪ್ರಾರ್ಥನೆಯನ್ನು ಕೇಳಿ ಹೇಳಿದನು, "ನೀವು ಗಯಾಸುರನ ಸಮೀಪಕ್ಕೆ ಹೋಗಿ ಅವನ ಶರೀರವನ್ನೇ ಯಜ್ಞಕ್ಕಾಗಿ ಬೇಕೆಂದು ಕೇಳಿರಿ ಹೀಗೆ ಸಮಾಧಾನ ಹೇಳಿ ಉಪಾಯವನ್ನು ತಿಳಿಸಿಕೊಟ್ಟನು.

ಶ್ರೀ ಭಗವಾನ್ ಮಹಾವಿಷ್ಣುವಿನ ಉಪಾಯವನ್ನೂ ಕೇಳಿದ ಬ್ರಹ್ಮ ಸಹಿತ ದೇವತೆಗಳೆಲ್ಲರೂ ಗಯಾಸುರನ ಬಳಿಗೆ ಹೋದರು. ದೇವತೆಗಳಿಂದ ಸಹಿತನಾಗಿ ಬಂದಿರುವ ಬ್ರಹ್ಮನನ್ನು ನೋಡಿ ಬಲು ಸಂತೋಷದಿಂದ ಗಯಾಸುರನು ಅರ್ಘ್ಯಪಾದ್ಯಾದಿಗಳನ್ನು ಕೊಟ್ಟು ತಾವು ಬಂದಿರುವ ಕಾರಣವೇನು? ನನಗೆ ಯಾವ ಅನುಗ್ರಹ ಮಾಡಲು ಬಂದಿರುವಿರಿ ಎಂದು ವಿನಮ್ರತೆಯಿಂದ ಕೇಳಿದನು. ಅದಕ್ಕೆ ಬ್ರಹ್ಮದೇವರು ಹೀಗೆ ಹೇಳಿದರು. "ಹೇ ಗಯಾಸುರ ಇಡೀ ಪ್ರಪಂಚದಲ್ಲಿ ನಾನು ಯಜ್ಞಕ್ಕೆ ಪವಿತ್ರವಾದ ಸ್ಥಳವನ್ನು ಹುಡುಕಿದೆ. ಆದರೆ ನಿನ್ನ ಶರೀರದಷ್ಟು ಪವಿತ್ರವಾದ ಸ್ಥಳ ನನಗೆ ಮತ್ತೊಂದಿಲ್ಲವೆಂದು ತಿಳಿದು ಯಜ್ಞಕ್ಕಾಗಿ ನಿನ್ನ ಶರೀರವನ್ನು ಕೇಳಲು ಬಂದಿದ್ದೇನೆ" ಎಂದರು. ಬ್ರಹ್ಮನ ಈ ಮಾತನ್ನು ಕೇಳುತ್ತಿರುವಾಗಲೇ ಗಯಾಸುರನು ನಾನೇ ಧನ್ಯ ಎಂದುಕೊಂಡು ತನ್ನ ಶರೀರವನ್ನು ಯಜ್ಞಕ್ಕೆ ಕೊಡಲು ಒಪ್ಪಿದನು.

ಗಯಾ ಕ್ಷೇತ್ರ

ಫಲ್ಗುಣಿ ನದಿ

ವಿಷ್ಣು ಪಾದ

ವಟ ವೃಕ್ಷ

ಶ್ರೀ ಗದಾಧರಸ್ವಾಮಿ ದೇವಸ್ಥಾನ

ಶ್ರೀ ಗದಾಧರಸ್ವಾಮಿ

ಉತ್ತರಕ್ಕೆ ತನ್ನ ತಲೆಯನ್ನಿಟ್ಟು ದಕ್ಷಿಣಕ್ಕೆ ತನ್ನ ಕಾಲುಗಳನ್ನು ಚಾಚಿ ಮಲಗಿದನು. ಅದು ಎಷ್ಟು ದೂರ ಹೋಯಿತೆಂದರೆ "ಪಂಚಕ್ರೋಶಂ ಗಯಾ ಕ್ಷೇತ್ರಂ ಕ್ರೋಶಂ ಏಕಂ ಗಯಾ ಶಿರಃ". ಎಂದರೆ 5 ಕ್ರೋಶದವರೆಗೆ ಕೈಕಾಲುಗಳು ಹಬ್ಬಿದ್ದವು. ಒಂದು ಕ್ರೋಶದವರೆಗೆ ತಲೆಮಾತ್ರ ಹಬ್ಬಿತ್ತು. ಅಂದರೆ ಸುಮಾರು 20 ಮೈಲಿ ದೂರದವರೆಗೆ ಹಬ್ಬಿತ್ತು. ಆ ಶರೀರದ ಮೇಲೆಯೇ ಬ್ರಹ್ಮ ದೇವರು ಯಜ್ಞ ಪ್ರಾರಂಭಿಸಿದರು. ದರ್ಭೆಗಳನ್ನು ಅಭಿಮಂತ್ರಿಸಿ ಬ್ರಾಹ್ಮಣರನ್ನು ಸೃಷ್ಟಿಸಿದರು. ಬ್ರಾಹ್ಮಣರಿಗೆ ಯಜ್ಞಾದಿ ಕ್ರಿಯೆಗಳಿಗೆ ಅಧಿಕಾರವನ್ನು ಕೊಟ್ಟರು. ಯಜ್ಞ ಪ್ರಾರಂಭವಾಯಿತು. ಗಯಾಸುರನ ಮೇಲೆ ಯಜ್ಞ ಪ್ರಾರಂಭವಾದಾಗ ಗಯಾಸುರನು ಬಿಸಿಯನ್ನು ತಾಳಲಾರದೆ ಅಲುಗಾಡಲು ಪ್ರಾರಂಭಿಸಿದನು. ಇದರಿಂದ ಯಜ್ಞದ ಪದಾರ್ಥ-ಗಳು ಬೀಳಲಾರಂಭಿಸಿದವು. ಆಗ ಬ್ರಹ್ಮನು ಯಮಧರ್ಮರಾಜನಿಗೆ ಹೇಳಿದನು "ಹೇ ಯಮಧರ್ಮನೇ! ನಿನ್ನಲ್ಲಿರುವ ದೇವಮಯವಾದ ಶಿಲೆಯನ್ನು ತಂದು ಅದನ್ನು ಈ ದಾನವನ ಶರೀರದ ಮೇಲಿಡು ಆಗ ಈ ಕಂಪನ ನಿಲ್ಲುತ್ತದೆ" ಎಂದು ಹೇಳಿದ. ಯಮದರ್ಮರಾಜನು ಹಾಗೆ ಮಾಡಿದರೂ ಕಂಪನ ನಿಲ್ಲಲಿಲ್ಲ. ಅಲ್ಲಿದ್ದ ಎಲ್ಲಾ ದೇವತೆಗಳೂ ಒಟ್ಟಾಗಿ ತಮ್ಮ ಬಲವೆಲ್ಲಾ ಹಾಕಿ ಎತ್ತಿ ಹಿಡಿದರೂ ಆಗಲಿಲ್ಲ. ಆಗ "ಹೇ ವಿಷ್ಣುವೇ! ನೀನೇ ಗತಿ, ಯಜ್ಞ ಮುಗಿಸಬೇಕಿದ್ದರೆ ಈ ಕಂಪನ ನಿಲ್ಲಬೇಕು" ಎಂದು ಪ್ರಾರ್ಥಿಸಿದರು. ಆಗ ಆ ದೇವತೆಗಳ ಈ ದೀನ ಅವಸ್ಥೆಯನ್ನು ಕಂಡ ಶ್ರೀ ವಿಷ್ಣುವು ತಾನೇ ಗದಾಧಾರಿಯಾಗಿ ಧರ್ಮ ಶಿಲೆಯ ಮೇಲೆ ಪ್ರಕಟನಾದನು. ಆಗ ಕಂಪನವು ಶಾಂತವಾಯಿತು. ಆಗ ಆ ಗದಾಧರನು ಪ್ರಸನ್ನನಾಗಿ ಗಯಾಸುರನಿಗೆ ವರ ಕೇಳಲು ಹೇಳಿದನು. ಆಗ ಗಯಾಸುರನು ಪ್ರಾರ್ಥಿಸಿದನು "ಹೇ ದೇವ! ತಮ್ಮ ಕೃಪೆಯಿಂದ ನಾನು ಕೃತಾರ್ಥನಾಗಿದ್ದೇನೆ. ತಾವು ನನ್ನ ಮೇಲೆ ಪ್ರಸನ್ನರಾಗಿದ್ದೀರ, ಆದ್ದರಿಂದ ಈ ಗದಾಧರ ರೂಪದಿಂದಲೇ ನನ್ನ ಶರೀರದ ಮೇಲೆ ಯಾವಾಗಲೂ ವಿರಾಜಿಸುತ್ತಿದ್ದು ನನ್ನನ್ನು ಪವಿತ್ರನನ್ನಾಗಿ ಮಾಡು, ಅಲ್ಲದೆ ನನ್ನ ಶರೀರದ ಮೇಲೆ ದೇವತೆಗಳ ವಾಸವಾಗಲಿ. ಹಾಗೂ ವಿಶೇಷವಾಗಿ ನನ್ನ ಶರೀರದ ಮೇಲೆ ಪಿತೃಕಾರ್ಯ ನಡೆಯಲು ನಿನ್ನ ಪಾದವಿಡು. ಪಿತೃಕಾರ್ಯಕ್ಕಾಗಿ ಈ ಸ್ಥಳ ಪ್ರಸಿದ್ಧವಾಗಲಿ. ಪಿತೃಗಳಿಗೆ ಅಕ್ಷಯವಾದ ತೃಪ್ತಿ ದೊರೆಯಲಿ. ಈ ನನ್ನ ಶರೀರದ ಮೇಲೆ ನಿನ್ನ ಪಾದದ ಚಿನ್ಹೆ ಇರುವ ಶಿಲೆಯ ಮೇಲೆ ಯಾರು ಪಿಂಡಪ್ರದಾನವನ್ನು ಮಾಡುತ್ತಾರೋ ಅವರ ಪಿತೃ ದೇವತೆಗಳಿಗೆ ಅಕ್ಷಯಲೋಕ ಪ್ರಾಪ್ತವಾಗಲಿ ಮತ್ತು ನಿತ್ಯ ಪಿತೃಕಾರ್ಯ ನಡೆಯುತ್ತಿರಲಿ ಎಂದು ವರವನ್ನು ಕೇಳಿದನು. ಗದಾಧರ ರೂಪಿಯಾದ ಮಹಾವಿಷ್ಣುವು ಪ್ರಸನ್ನನಾಗಿ ಅಂದಿನಿಂದ ಇಂದಿನವರೆಗೂ ಭಗವಂತ ಗದಾಧರನ ರೂಪದಿಂದ ಗಯಾ ಕ್ಷೇತ್ರದಲ್ಲಿದ್ದು ಪಿತೃಗಳಿಗೆ ಮುಕ್ತಿಯನ್ನು ಕೊಡುವ ಕೃಪೆಯನ್ನು ಮಾಡುತ್ತಲಿದ್ದಾನೆ. ಆ ಸ್ಥಳವೂ "ವಿಷ್ಣುಪಾದ"ವೆಂದೇ ಪ್ರಖ್ಯಾತವಾಗಿದೆ.

ಗಯಾಶ್ರಾದ್ಧ ಫಲ

ಗಯೆಯಲ್ಲಿ ಸ್ವಲ್ಪವಾದರೂ ಪಿಂಡಪ್ರಧಾನ ಮಾಡಿದವನ ಪಿತೃದೇವತೆಗಳಿಗೆ ಷೋಡಶಮಹಾದಾನಾದಿಗಳಿಂದ ಉಂಟಾಗುವ ಫಲವು ಸಂತುಷ್ಟಿಯೂ ಸ್ವರ್ಗವೂ ಮೋಕ್ಷವೂ ಉಂಟಾಗುವುದೆಂತಲೂ "ಕಾಲಾಮೃತ" ಎಂಬ ಗ್ರಂಥದಲ್ಲಿ ವಿವರಿಸಿದ್ದಾರೆ.

ಗಯೆಯಲ್ಲಿ ಮಾಡುವ ಪಿತೃಪಕ್ಷದಲ್ಲಿನ ಶ್ರಾದ್ಧದ ವಿವರ

ಕ್ರಮ.ಸಂ	ಪಿತೃಪಕ್ಷದ ಶ್ರಾದ್ಧದ ಹೆಸರು	ತಿಥಿ
1.	ಗಾಯತ್ರಿ ಘಾಟ್, ಮೊಸರು ಮತ್ತು ಅಕ್ಕಿ ದಾನ	ಪಾಡ್ಯಮಿ
2.	ಉತ್ತರಮಾನಸ ಪಂಚ ತೀರ್ಥಾದಿ, ಮೌನಾಚರಣೆ	ದ್ವಿತೀಯಾ
3.	ಸರಸ್ವತೀ ಸ್ನಾನ, ತರ್ಪಣ, ಪಂಚರತ್ನ ದಾನ	ತೃತೀಯಾ
4.	ಬೋಧಗಯಾ ಅಶ್ವತ್ಥ ದರ್ಶನ	ಚತುರ್ಥಿ
5.	ಕಾಕವಲೀ (ಇಲ್ಲಿ ದರ್ಶನ ಪ್ರೋಕ್ಷಣೆ)	ಪಂಚಮಿ
6.	ಬ್ರಹ್ಮ ಪಾದ	ಷಷ್ಠೀ
7.	ಆಮ್ರ ಸೇಚನ	ಸಪ್ತಮಿ
8.	ಕಣ್ವಪಾದ ಮಾತಂಗವಾಪೀ	ಅಷ್ಟಮಿ
9.	ರಾಮಾಗಯಾ ಶ್ರಾದ್ಧ	ನವಮಿ
10.	ಆದಿ ಗದಾಧರ	ದಶಮಿ
11.	ಗಯಾಶಿರ, ಗಯಾಕೂಪ	ಏಕಾದಶೀ
12.	ಧೌತಪಾದ ಖೋವಾ ಶ್ರಾದ್ಧ	ದ್ವಾದಶೀ
13.	ಗದಾಲೋಲ ದರ್ಶನ (ಪವಿತ್ರದಾನ)	ತ್ರಯೋದಶಿ
14.	ಫಲ್ಗುಣೀ ತರ್ಪಣ ದೀಪದಾನ	ಚತುರ್ದಶಿ
15.	ವೈತರಣೀ ತರ್ಪಣ ಗೋದಾನ	ಅಮಾವಾಸ್ಯೆ
16.	ಪುನಪ್ರಭಾ ಗೋದಾವರೀ ಕುಂಡಶ್ರಾದ್ಧ	
17.	ಫಲ್ಗುಣೀ ಸ್ನಾನ ಮತ್ತು ಶ್ರಾದ್ಧ (ಪಾಯಸ ದಾನ)	
18.	ಬ್ರಹ್ಮ ಕುಂಡ	
19.	ಪ್ರೇತ ಶಿಲಾ	
20.	ರಾಮ ಶಿಲಾ	
21.	ರಾಮ ಕುಂಡ	
22.	ಕಾಕಾವಲೀ (ಮೂರು ಪಿಂಡ ಕಾಕಾ, ಶ್ವಾನ, ಯಮ ಜವಚೂರ್ಣ ಪಿಂಡ)	
23.	ಉದೀಚಿ	

24.	ಕನಬಲ	
25.	ದಕ್ಷಿಣ ಮಾನಸ	
26.	ಹ್ಯಾಲೋಲ	
27.	ಗದಾಧರ ದೇವರಿಗೆ ಪಂಚಾಮೃತ ಸ್ನಾನ	
28.	ಮಾತಂಗ ವಾಪೀ ಶ್ರಾದ್ಧ	
29.	ಧರ್ಮಾರಣ್ಯ ಕೂಪ ದರ್ಶನ	
30.	ಬ್ರಹ್ಮ ಸರೋವರ ಗದಾ ಪರಿಕ್ರಮದಿಂದ ಪಂಚರತ್ನದಿಂದ ತಾರಕ ಬ್ರಹ್ಮದರ್ಶನ	
31.	ಆಮ್ರಸೇಚನ	
32.	ರಂದ್ರ ಪಾದ	
33.	ವಿಷ್ಣು ಪಾದ ಖೀರಾದಿ ಶ್ರಾದ್ಧ	
34.	ಬ್ರಹ್ಮ ಪಾದ	
35.	ಕಾರ್ತಿಕ ಪಾದ	
36.	ದಕ್ಷಿಣಾಗ್ನಿ ಪಾದ	
37.	ಗಾರ್ಹಪತ್ಯಾಗಿ ಪಾದ	
38.	ಆವಹನೀಯಾಗ್ನಿ ಪಾದ	
39.	ಸೂರ್ಯ ಪಾದ	
40.	ಸೂರ್ಯ ಪಾದ	
41.	ಚಂದ್ರ ಪಾದ	
42.	ಗಣೇಶ ಪಾದ	
43.	ಸಾಮ್ಯಾಗ್ನಿ ಪಾದ	
44.	ಅವಸಾಗ್ನಿ ಪಾದ	
45.	ದದೀಚಿ ಪಾದ	
46.	ಕ್ರೌಂಚ ಪಾದ	
47.	ಇಂದ್ರ ಪಾದ	
48.	ಅಗಸ್ತ್ಯ ಪಾದ	
49.	ಕಾಶ್ಯಪ ಪಾದ	
50.	ಗಜಕರ್ಣ ಪಾದ ತರ್ಪಣ ಅನ್ನದಾನ	
51.	ಸೀತಾ ಕುಂಡ ಸೌಭಾಗ್ಯ (ಮರಳು ಉಂಡೆ ಪಿಂಡ) ವಾಯನ ದಾನ	
52.	ಭೀಮಗಯಾ ಗೌ ಪ್ರಚಾರ	
53.	ಅಕ್ಷಯವಟ ಖೀರ ಶ್ರಾದ್ಧ ಅಲಂಕಾರ ಸಹಿತ ಶಯ್ಯಾ ದಾನ	
54.	ವೈತರಣೀ ತರ್ಪಣ ದಾನ	
55.	ವೇದಿಯ ಪೂರ್ಣ ದರ್ಶನ.	

ಈ ರೀತಿ ಮಾಡಿದರೆ ಗಯಾ ಶ್ರಾದ್ಧ ಪೂರ್ಣವಾದಂತೆ, ನಮಗೆ ಒಂದೇ ಕ್ಷೇತ್ರದಲ್ಲಿ ಎಲ್ಲಾ ಶ್ರಾದ್ಧವನ್ನು ಸಂಕ್ಷೇಪವಿಧಿ, ಸುರರು ಮುನಿಗಳು ಎಲ್ಲರೂ ಮಾತಾಪಿತೃಗಳ ಶ್ರಾದ್ಧವನ್ನು ಸುಲಭವಾಗುವಂತೆ ಪರಿವರ್ತಿಸಿದ್ದಾರೆ. ಮೊದಮೊದಲು ಉತ್ತರೋತ್ತರ ಪ್ರಕಾರ ಶ್ರಾದ್ಧ ತ್ರೈಪಕ್ಷಿಕ ಹೇಳಿದ್ದಾರೆ. ಸಮಯವೇ ಇಲ್ಲದಿದ್ದರೆ ನಾಲ್ಕು ದಿನದ ಶ್ರಾದ್ಧ ಹೇಳಿದೆ. ಅದೂ ಆಗಲಿಲ್ಲವೆಂದರೆ ಮೂರು ದಿನಕ್ಕೆ ಹೇಳಿದ್ದಾರೆ. ಹೀಗೆ ಅಷ್ಟಗಯಾ, ಪಂಚಗಯಾ ಎಂದೆಲ್ಲಾ ಪ್ರಸಿದ್ಧಿಯಾಗಿದೆ. ಕೊನೇ ಪಕ್ಷ ಒಂದೇ ದಿನವಿದ್ದು ಶ್ರಾದ್ಧ ಮಾಡಿಕೊಂಡು ಬರಬಹುದು.

ಪ್ರಮುಖ ಸ್ಥಳಗಳಲ್ಲಿ ಕಾರ್ಯವನ್ನು ಮಾಡುವುದು. ಅಷ್ಟರಿಂದಲೇ ಪಿತೃಗಳಿಗೆ ತೃಪ್ತಿಯಾಗುತ್ತದೆ. ಅಲ್ಲಿಗೆ ಹೋದಾಗ ತಿಥಿ, ವಾರ, ನಕ್ಷತ್ರ, ರಾಹುಕಾಲ, ಗುಳಿಕಕಾಲ ಒಂದೂ ನೋಡಬಾರದು. ಆದರೆ ಮಾಧ್ವಸಂಪ್ರದಾಯಸ್ಥರು ಏಕಾದಶಿಯಂದು ಹಾಗೂ ಗ್ರಹಣಾದಿಗಳನ್ನು ಬಿಟ್ಟು ಎಲ್ಲರೂ ಮಾಡುವಂತೆಯೇ ಮಾಡುವುದು. ಯಾವುದೇ ಕ್ಷೇತ್ರಕ್ಕೆ ಹೋಗಿದ್ದರೂ ಏಕಾದಶಿ ಶ್ರಾದ್ಧ ಮಾಡಬಾರದು. ಅದನ್ನು ಮಾರನೇ ದಿನಕ್ಕೆ ಹಾಕಿಕೊಳ್ಳಿ.

* ಫಲ್ಗುಣೀ, ವಿಷ್ಣುಪಾದ, ಅಕ್ಷಯ ವಟದ ವಿಚಾರ *

ಗಯಾದಲ್ಲಿದ್ದು ಮೂರು ದಿನ ಶ್ರಾದ್ಧ ಮಾಡಲಾಗಲಿಲ್ಲವೆಂದರೆ ಒಂದೇ ದಿನದಲ್ಲಿ ಶ್ರಾದ್ಧ ಮಾಡುವುದು ಅವಶ್ಯಕವಾಗಿದೆ. ಒಟ್ಟು ಪಿತೃ ಶಾಂತಿಯಾಗಲು ಶ್ರಾದ್ಧ ಮಾಡಬೇಕೋ ಅದನ್ನು ಮಾಡುವುದು. ಕರ್ತೃವಿಗೂ ಅದರಿಂದ ಒಂದು ಉತ್ಕೃಷ್ಟವಾದ ಆನಂದ ಸಿಗುತ್ತದೆ. ಪ್ರಮುಖವಾದ ಆ ಮೂರು ಕ್ಷೇತ್ರಗಳು (1) ಫಲ್ಗುಣೀ ತಟ (2) ವಿಷ್ಣು ಪಾದ (3) ಅಕ್ಷಯ ವಟ ವೃಕ್ಷ ಶ್ರಾದ್ಧ.

* ಮಾತೃಗಯಾ ವೈಶಿಶ್ಟ್ಯತೆ *

ಮಾತೃಗಯಾ ಕ್ಷೇತ್ರವು ಈಗಿನ ಗುಜರಾತ್ ರಾಜ್ಯದ ಪಠಾನ ಜಿಲ್ಲೆಯಲ್ಲಿದೆ. ಋಗ್ವೇದದಲ್ಲಿ ಉಲ್ಲೇಕಿಸಿರುವಂತೆ ಸರಸ್ವತೀ ನದೀ ತೀರದಲ್ಲಿನ ಶ್ರೀಸ್ಥಳ ಎಂಬ ಹೆಸರಿನಲ್ಲಿ ಪ್ರಕ್ಯಾತವಾಗಿದ್ದ ಈ ಕ್ಷೇತ್ರಕ್ಕೆ ಈಗ "ಸಿದ್‌ಪುರ್" ಎಂಬ ಹೆಸರಿದೆ. ಪೌರಾಣಿಕವಾಗಿ ಇದು ಕರ್ದಮ ಪ್ರಜಾಪತಿ ಮತ್ತು ದೇವಹೂತಿ ದಂಪತಿಗಳ ಕ್ಷೇತ್ರ. ಈ ದಂಪತಿಗಳ ಆದರ್ಶ ದಾಂಪತ್ಯವನ್ನು ಭಾಗವತ ಪುರಾಣದಲ್ಲಿ ರಮಣೀಯವಾಗಿ ವರ್ಣಿಸಲಾಗಿದೆ. ಇವರ ತಪಸ್ಸಿಗೆ ಮೆಚ್ಚಿ ಶ್ರೀಮಹಾವಿಷ್ಣುವೇ "ಕಪಿಲ" ಎಂಬ ಹೆಸರಿನಿಂದ ಇವರ ಮಗನಾಗಿ ಜನಿಸಿ ತಾಯಿಯಾದ ದೇವಹೂತಿಗೆ ಜ್ಞಾನೋಪದೇಶವನ್ನು ಮಾಡಿ ಮುಂದೆ "ಕಪಿಲ ಮಹರ್ಷಿ" ಎಂಬ ಹೆಸರಿನಿಂದ ಖ್ಯಾತನಾಗಿ ಜಗತ್ತಿಗೆ ಸಾಂಖ್ಯದರ್ಶನವನ್ನು ಕೊಡುತ್ತಾನೆ. ಕರ್ದಮನು

ತಪಸ್ಸಿಗೆ ಹೊರಟುಹೋಗಲು ದೇವಹೂತಿಯು ಮಗನಿಂದ ಜ್ಞಾನವನ್ನು ಪಡೆದು ತಪಸ್ವಿನಿಯಾಗಿ ಕೊನೆಗೆ ದೇಹತ್ಯಾಗ ಮಾಡುತ್ತಾಳೆ. ಆ ದೇಹವು ಒಂದು ನದಿಯಾಗಿ ಹರಿಯುತ್ತದೆ. ಭಾರತದಲ್ಲಿ ಪಂಚಮಹಾಸರೋವರಗಳೆಂದು ಹೆಸ-ರಿರುವ ಐದು ಸರೊವರಗಳಿವೆ. ಇವು ಯಾವುವೆಂದರೆ

1. ಮಾನಸ ಸರೋವರ (ಟೀಬೆಟ್ಟಿನಲ್ಲಿದೆ)
2. ಪುಷ್ಕರ ಸರೋವರ (ರಾಜಾಸ್ತಾನದಲ್ಲಿದೆ)
3. ಬಿಂದು ಸರೋವರ (ಗುಜರಾತಿನಲ್ಲಿದೆ)
4. ನಾರಾಯಣ ಸರೋವರ (ಗುಜರಾತಿನ ಕಛ್ ಪ್ರದೇಶದಲ್ಲಿದೆ)
5. ಪಂಪಾ ಸರೋವರ (ಕರ್ನಾಟಕದಲ್ಲಿದೆ)

ಈ ಪಂಚ ಸರೋವರಗಳ ಪೈಕಿ ಬಿಂದು ಸರೋವರವು ಮಾತೃಗಯಾ ಕ್ಷೇತ್ರದಲ್ಲಿದೆ.

ಈಗ ಈ ಸರೋವರದ ದಡದಲ್ಲಿ ಕರ್ದಮ, ದೇವಹೂತಿ, ಕಪಿಲಮಹರ್ಷಿ ಮತ್ತು ಶ್ರೀಮಹಾವಿಷ್ಣುವಿಗೆ ಮಂದಿರಗಳನ್ನು ನಿರ್ಮಿಸಲಾಗಿದೆ.

ಈ ಕ್ಷೇತ್ರದ ವೈಶಿಷ್ಟ್ಯತೆ ಎಂದರೆ ಇಲ್ಲಿ ತಾಯಿಗೆ ಮಾತ್ರ ಶ್ರಾದ್ಧ ಕರ್ಮವನ್ನು ಆಚರಿಸುವ ಸಂಪ್ರದಾಯವಿದೆ. ತಾಯಿಗೆ ಮಾತ್ರವೇ ಹದಿನಾರು ಪಾರ್ವಣಗಳನ್ನು ಇಡುವ ಪದ್ಧತಿಯಿದೆ. ಜೀವನು ತಾಯಿಯ ಗರ್ಭವಾಸದ ಒಂಬತ್ತು ತಿಂಗಳಲ್ಲಿ ತಾಯಿಗೆ ನಾನಾವಿಧದ ಕ್ಲೇಶಗಳುಂಟಾಗುತ್ತದೆ. ಈ ಎಲ್ಲಾ ಕ್ಲೇಶಗಳನ್ನು ಹದಿನಾರು ವಿಧವಾಗಿ ಪರಿಗಣಿಸಿ ಪ್ರತಿಯೊಂದಕ್ಕೂ ಮಂತ್ರಪೂರ್ವಕವಾಗಿ ಅತ್ಯಂತ ದೈನ್ಯತೆಯಿಂದ ಕ್ಷಮಾಪಣೆ ಬೇಡುತ್ತಾ ಹದಿನಾರು ಪಾರ್ವಣಗಳನ್ನು ಇಡುವ ಪದ್ಧತಿಯುಂಟು. ಆ ಮಂತ್ರಗಳ ಅರ್ಥವನ್ನು ತಿಳಿದವರಿಗೆ ಹೃದಯವು ಕರಗಿ ಕಣ್ಣೀರಾಗಿ ಹರಿಯುವುದು ಖಂಡಿತ. ಜೀವನದಲ್ಲಿ ಮಾತೃಋಣ ತೀರಿಸಲು ಅಸಾಧ್ಯವಾದರೂ ಈ ಮಾತೃಗಯಾ ಶ್ರಾದ್ಧದಿಂದ ಸ್ವಲ್ಪ ಧನ್ಯತಾಭಾವವನ್ನು ಪಡೆಯಬಹುದು.

ಬದರಿಕ್ಷೇತ್ರ – ಬ್ರಹ್ಮಕಪಾಲ

ಬದರೀನಾಥ ಕ್ಷೇತ್ರವು ಹಿಮಾಲಯದ ಶ್ರೇಣಿಯಲ್ಲಿರುವ ಅತ್ಯಂತ ಪವಿತ್ರವಾದ ಕ್ಷೇತ್ರವು. ಸಮುದ್ರ ಮಟ್ಟದಿಂದ 10,279 ಅಡಿ ಎತ್ತರದಲ್ಲಿದ್ದು, ಭಾರತದ ಉತ್ತರಖಂಡ ರಾಜ್ಯದ ಚಮೋಲಿ ಜಿಲ್ಲೆಗೆ ಸೇರಿರುತ್ತದೆ. ಇಲ್ಲಿನ ಆರಾಧ್ಯ ದೇವತೆ "ಬದರೀನಾರಾಯಣ" "ಬದರೀವಿಶಾಲ" ಎಂದು ಪ್ರಸಿದ್ಧಿ ಪಡೆದಿರುತ್ತಾನೆ. ಇಲ್ಲಿನ ದೇವತಾ ಮೂರ್ತಿಯು ಸ್ವಯಂವ್ಯಕ್ತವಾಗಿದೆ. ಬದರೀಯಾತ್ರೆ ಎಂಬುದು

ಎಲ್ಲಾ ಹಿಂದೂಗಳಿಗೆ ಅತ್ಯಂತ ಪವಿತ್ರವಾದ ಕಾರ್ಯಕ್ರಮವಾಗಿದೆ. ಈ ಪ್ರಸಿದ್ಧ ದೇವಸ್ಥಾನದಲ್ಲಿ ನಡೆಯುವ ಅಭಿಷೇಕಾದಿ ಕಾರ್ಯಕ್ರಮಗಳು ಪ್ರಸಿದ್ಧಿಯನ್ನು ಪಡೆದಿರುವುದಲ್ಲದೆ, ಈ ಕ್ಷೇತ್ರದಲ್ಲಿರುವ ಬ್ರಹ್ಮಕಪಾಲದ ಬಳಿ ನಡೆಯುವ ಶ್ರಾದ್ಧ ಕರ್ಮಗಳೂ ಕೂಡ ಅತ್ಯಂತ ಪ್ರಸಿದ್ಧವಾಗಿದೆ.

ಬ್ರಹ್ಮಕಪಾಲ ಎಂದರೆ ಬ್ರಹ್ಮನ ತಲೆ ಎಂದರ್ಥ. ಶಿವನಿಗೂ, ಬ್ರಹ್ಮನಿಗೂ, ಇಬ್ಬ-ರಿಗೂ ಐದೈದು ತಲೆಗಳು ಇದ್ದದ್ದು ಎಲ್ಲರಿಗೂ ಗೊತ್ತಿರುವ ಸಂಗತಿ. ಒಂದು ಸಲ ಇವರಿಬ್ಬರಲ್ಲಿ ಯಾರು ಹೆಚ್ಚು ಎಂದು ವಾದ ಉಂಟಾದಾಗ, ಶಿವನು ಸಿಟ್ಟಿನಿಂದ ಬ್ರಹ್ಮನ ಒಂದು ಶಿರವನ್ನು ಚಿವುಟಿ ಹಾಕಿದನು. ಆ ಶಿರವು ಕಪಾಲವಾಗಿ ಶಿವನ ಕೈಗೆ ಅಂಟಿಕೊಂಡಿತು. ಶಿವನು ಆ ರೀತಿ ಕೈಗೆ ಅಂಟಿಕೊಂಡ ಕಪಾಲದಿಂದ ಭಿಕ್ಷೆ ಬೇಡುತ್ತಾ ಅಲೆಯಬೇಕಾಯ್ತು. ಎಷ್ಟು ಪ್ರಯತ್ನಿಸಿದರೂ ಆ ಕಪಾಲವು ಕೈಯಿಂದ ಕೆಳಚದಿದ್ದಾಗ ವಿಷ್ಣುವಿನ ಸಲಹೆಯಂತೆ ಶಿವನು ಪಾರ್ವತಿ ಹತ್ತಿರ ಬಿಕ್ಷೆ ಬೇಡುತ್ತಾನೆ. ಪಾರ್ವತಿ ದೇವಿಯು ಬಿಕ್ಷೆ ಹಾಕಿದ ಕೂಡಲೆ ಆ ಕಪಾಲವು ಶಿವನ ಕೈಯಿಂದ ಕಳಚಿ ಬದರೀ ಕ್ಷೇತ್ರದಲ್ಲಿ, ಈಗ ಇರುವ ಸ್ಥಳದಲ್ಲಿ ಬೀಳುತ್ತದೆ. ಅಂದಿನಿಂದ ಪಾರ್ವತಿ ದೇವಿಗೆ ಅನ್ನಪೂರ್ಣೇಶ್ವರಿ ಎಂಬ ಹೆಸರಾಯಿತು. ಈ ಬ್ರಹ್ಮ ಕಪಾಲದ ಬಳಿ ಅಲಕನಂದಾ ನದಿ ಹರಿಯುತ್ತದೆ. ಅಲ್ಲದೆ ಅಲ್ಲಿ "ತಪ್ತಕುಂಡ" ಅಥವಾ "ಬ್ರಹ್ಮಕುಂಡ" ಎಂದು ಕರೆಯಲ್ಪಡುವ ಬಿಸಿನೀರಿನ ಬುಗ್ಗೆ ಇದೆ. ಹಿಮಾಲಯದ ಛಳಿಯಲ್ಲಿ ಈ ಬಿಸಿನೀರಿನ ಬುಗ್ಗೆಯಲ್ಲಿ ಸ್ನಾನ ಮಾಡುವುದು ಅತ್ಯಂತ ಆಹ್ಲಾದಕರ. ಆದರೆ ಹೆಚ್ಚಿನ ಸಮಯ ನೀರಿನಲ್ಲಿರುವುದು ತುಂಬಾ ಅಪಾಯಕಾರಿ. ಗಂಧಕಾಂಶದಿಂದ ಕೂಡಿರುವ ಈ ಬಿಸಿನೀರು ಛಳಿಗೆ ಹಿತಕರವಾದರೂ ಮಿತವಾಗಿ ಬಳಸಬೇಕು.

ಈ ತಪ್ತ ಕುಂಡದಲ್ಲಿ ಸ್ನಾನವನ್ನು ಆಚರಿಸಿ ಬ್ರಹ್ಮಕಪಾಲದಬಳಿ ಪಿತೃಶ್ರಾದ್ಧವನ್ನು ಆಚರಿಸುವುದು ಪ್ರತಿ ಯಾತ್ರಿಕನಿಗೂ ಅತ್ಯಂತ ಪವಿತ್ರವಾದ ಕರ್ಮ. ಸಾಮಾನ್ಯವಾಗಿ, ಭಾರತದ ಎಲ್ಲಾ ಪುಣ್ಯಕ್ಷೇತ್ರಗಳಲ್ಲೂ ಹಾಗೂ ಪ್ರಸಿದ್ಧವಾದ ಗಯಾ ಕ್ಷೇತ್ರದಲ್ಲೂ ಶ್ರಾದ್ಧ ಕರ್ಮಗಳನ್ನು ಆಚರಿಸಿದ ನಂತರ ಕಟ್ಟ ಕಡೆಯದಾಗಿ ಬದರಿಯಲ್ಲಿರುವ ಬ್ರಹ್ಮಕಪಾಲದ ಬಳಿ ಶ್ರಾದ್ಧ ಕರ್ಮಗಳನ್ನು ಆಚರಿಸಲಾಗುತ್ತದೆ. ಅಲ್ಲಿ ಪಿಂಡ ಪ್ರದಾನ ಮಾಡಿ ಆ ಪಾರ್ವಣಗಳನ್ನು ಬ್ರಹ್ಮ ಕಪಾಲದ ಮೇಲಿಟ್ಟು ಪ್ರಾರ್ಥನೆ ಸಲ್ಲಿಸಿ ನಂತರ ಅವುಗಳನ್ನು ಅಲಕನಂದ ನದಿಯಲ್ಲಿ ವಿಸರ್ಜಿಸಲಾಗುತ್ತದೆ. ಇಷ್ಟು ಮಾಡಿದರೆ ಪಿತೃಗಳು ತೃಪ್ತರಾಗುತ್ತಾರೆ ಎಂಬುದು ಶಾಸ್ತ್ರಸಮ್ಮತವಾದ ವಿಚಾರವಾಗಿದೆ.

ಪಾಪಪರಿಹಾರಕ್ಕಾಗಿ ಅನುಸರಿಸ ಬೇಕಾದ ಕ್ರಮಗಳು

ಮಾನವನು ತನ್ನ ಜೀವನದಲ್ಲಿ ಅಜ್ಞಾನದಿಂದ ಅನೇಕ ವಿಧವಾದ ಕಾರ್ಯಗಳನ್ನು ಮಾಡುತ್ತಿರುತ್ತಾನೆ. ಕೆಲವೊಂದು ಪುಣ್ಯಪ್ರದವೂ ಆಗಿರಬಹುದು ಅಥವಾ ಪಾಪಪ್ರದವೂ ಆಗಿರಬಹುದು ಹೀಗಿರುವಾಗ ಪಾಪಪ್ರದವಾದ ಕರ್ಮಗಳಿಗೆ ಪರಿಹಾರಗಳನ್ನು ತಿಳಿದು ಸೂಕ್ತ ರೀತಿಯಲ್ಲಿ ಆಚರಿಸಿದರೆ ಪಾಪಪರಿಹಾರವಾಗಿ ಶುಭಫಲಗಳನ್ನು ನಿರೀಕ್ಷಿಸಬಹುದು.

ಪಾಪಪರಿಹಾರಕ್ಕಾಗಿ ಆಚರಿಸಬೇಕಾದ ಕೆಲವೊಂದು ಕ್ರಮಗಳು ಹೀಗಿದೆ:

1. ಕೂಷ್ಮಾಂಡ ಹೋಮ
2. ತಿಲ ಹೋಮ
3. ಶತರುದ್ರಾಭಿಷೇಕ ಮತ್ತು ರುದ್ರ ಹೋಮ
4. ಹರಿವಂಶ ಪಾರಾಯಣ
5. ಭಾಗವತ ಸಪ್ತಾಹ
6. ಗುರುಚರಿತ್ರೆ ಪಾರಾಯಣ
7. ದುರ್ಗಾ ಸಪ್ತಷತಿ ಪಾರಾಯಣ
8. ಸುಂದರಕಾಂಡ ಪಾರಾಯಣ
9. ಲಕ್ಷ್ಮೀನಾರಾಯಣಹೃದಯ ಸಂಪುಟೀಕರಣ ಪಾರಾಯಣ ಮುಂತಾದವುಗಳು

* ಗೋಕರ್ಣದಲ್ಲಿ ಪಿತೃಕಾರ್ಯದ ವಿಚಾರ *

ಸಾಮಾನ್ಯವಾಗಿ ಪಿತೃಕಾರ್ಯಗಳನ್ನು ಗೋಕರ್ಣದಲ್ಲಿ ಮಾಡುವುದುಂಟು. ಅದರ ಇತಿಹಾಸವನ್ನು ತಿಳಿಯೋಣ.

ಒಂದೊಮ್ಮೆ ಬ್ರಹ್ಮನು ಸಂಧ್ಯಾ ಎಂಬ ಸ್ತ್ರೀ ರೂಪದಲ್ಲಿ ಶಿವನನ್ನು ಕುರಿತು ತಪಸ್ಸು ಮಾಡಲು ಶಿವನು ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷನಾಗಿ ಈ ಸ್ಥಳವು ಅತ್ಯಂತ ಪುಣ್ಯಸ್ಥಳ ಹಾಗೂ ಉತ್ತಮ ಗತಿಯನ್ನು ನೀಡುವ ಸ್ಥಳವಾಗಿದೆ. ಇಲ್ಲಿ ಯಾವುದೇ ಕರ್ಮಗಳನ್ನು ಮಾಡಿದರೂ ಅದು ಉತ್ತಮ ಫಲಗಳನ್ನು ನೀಡುತ್ತದೆ. ಪಿತೃಕಾರ್ಯಗಳನ್ನು ಮಾಡಿದರೆ ಪಿಶಾಚತ್ವ ನಿವಾರಣೆಯಾಗಿ ಪಿತೃಗಳು ತೃಪ್ತರಾಗುತ್ತಾರೆ ಹಾಗೂ ಇಲ್ಲಿ ಮಾಡಿದ ಶ್ರಾದ್ಧಕರ್ಮಗಳಿಂದ ವಿಶೇಷ ಪುಣ್ಯಭಾಗವು ದೊರೆಯಲೆಂದು ವರವನ್ನಿತ್ತನು.

ಇದೇರೀತಿ ಕಾಮಧೇನುವು ಶಿವನನ್ನು ಕುರಿತು ತಪಸ್ಸು ಮಾಡಿ ಯಾರಿಗೆ ಮರಣಾನಂತರ ಕರ್ಮಗಳನ್ನು ಮಾಡಲಾಗುವುದಿಲ್ಲವೊ, ಅಥವಾ

ಕರ್ಮಲೋಪಗಳಾಗಿರುತ್ತದೆಯೊ, ಭ್ರೂಣಹತ್ಯಾದೋಷ, ಶಿಶುಹತ್ಯಾದೋಷ, ಪ್ರೇತಶಾಪ, ಸ್ತ್ರೀಶಾಪ, ಮುಂತಾದ ಅನೇಕ ವಿದವಾದ ಶಾಪಗಳಿಂದ ಬಳಲುತ್ತಿರುವ ಅನಾಥ ಪ್ರೇತಗಳಿಗೆ ಪ್ರೇತಶಾಪದಿಂದ ಮುಕ್ತಿಹೊಂದಲು ಪರಿಹಾರವೇನೆಂದು ಕೇಳಲು ಆಗ ಶಿವನು ಹೇಳುತ್ತಾನೆ ಯಾರು ಗೋಕರ್ಣಕ್ಷೇತ್ರಕ್ಕೆ ಹೋಗಿ ಕೋಟಿ–ತೀರ್ಥದಲ್ಲಿ ಸ್ನಾನಮಾಡಿ ಪಿತೃಗಳನ್ನುದ್ದೇಶಿಸಿ ಕರ್ಮಗಳನ್ನು ಮಾಡುತ್ತಾರೆಯೋ ಅವರ ಸಕಲ ಪಾಪಗಳೂ ಪರಿಹಾರವಾಗಿ ಪಿತೃಗಳು ತೃಪ್ತರಾಗುತ್ತಾರೆಂದು ವರವನ್ನಿತ್ತನು.

ಈ ಕ್ಷೇತ್ರದಲ್ಲಿ ಶಣ್ಣವತಿ ಶ್ರಾದ್ಧದ ದಿನಗಳಂದು ಹಾಗೂ ತುಲಾ ಸಂಕ್ರಾಂತಿಯುಕ್ತ ಕಾರ್ತೀಕ ಮಾಸವು ಅತ್ಯಂತ ಶ್ರೇಷ್ಠವೆಂತಲೂ, ಸಾಕ್ಷಾತ್ ದೇವತೆಗಳೂ, ಮುನಿಗಳೂ ಸಹ ಈ ಕಾಲದಲ್ಲಿ ಇಲ್ಲಿ ಬಂದು ಸ್ನಾನವನ್ನು ಮಾಡುವರೆಂಬ ಪ್ರತೀತಿಯಿದೆ.

* ಸಮುದ್ರ ಸ್ನಾನ ಹಾಗೂ ಪಂಚತೀರ್ಥ ಸ್ನಾನ *

ಸಮುದ್ರದಬಳಿಗೆ ಹೋಗಿ ನಾರಾಯಣನ ಪ್ರೀತಿ ಪಾತ್ರನಾದ ಸಮುದ್ರರಾಜನೇ, ಪ್ರಾಣಿಗಳೆಲ್ಲರ ಪ್ರಾಣ ಸ್ವರೂಪ ನೀನು. ನನ್ನನ್ನು ರಕ್ಷಿಸು ಎಂದು ಸಮುದ್ರನನ್ನು ಪ್ರಾರ್ಥಿಸಿ, ಸಮುದ್ರ ಸ್ನಾನವನ್ನು ಮಾಡಿ, ಸಮುದ್ರದ ದಡದಲ್ಲಿ ಶ್ರೀಮನ್ ನಾರಾಯಣ, ಬಲರಾಮ, ಕೃಷ್ಣ, ಸುಬದ್ರೆ, ಇವರನ್ನು ಅರ್ಚಿಸಿ ಕೊನೆಗೆ ಸಮುದ್ರವನ್ನೂ ಸಹಾ ಅರ್ಚಿಸಬೇಕು. ಹಾಗೆ ಕ್ರಮವಾಗಿ ಎಲ್ಲರನ್ನೂ ಪೂಜೆಗೈದವ–ರಿಗೆ ಮೂರು ಅಶ್ವಮೇಧ ಯಾಗದಿಂದ ಪ್ರಾಪ್ತವಾಗುವ ಫಲದಷ್ಟು ಫಲವನ್ನು ಪಡೆಯುವನು. ಇಂತಹ ಮಹಾತ್ಮನಪಾಪಗಳನ್ನೆಲ್ಲಾ ಕಳೆದು ಇಹಲೋಕದಲ್ಲಿ ಸುಖ ಹಾಗೂ ಪರದಲ್ಲಿ ದಿವ್ಯವಾದ ವಿಷ್ಣುಲೋಕವನ್ನು ಪಡೆಯುತ್ತಾನೆ ಹಾಗೂ ಅವರ ಕುಲದಲ್ಲಿ 21 ಪಿತೃಗಳು ಉದ್ಧರಿಸಲ್ಪಡುವರು.

ಗ್ರಹಣ, ಸಂಕ್ರಮಣ, ದಕ್ಷಿಣಾಯನ, ಉತ್ತರಾಯಣ, ವಿಷ್ಣುವಿನ ಪುಣ್ಯಕಾಲ, ಯುಗಾದಿ, ವ್ಯತೀಪಾತ, ಷಣ್ಣವತಿ ಪರ್ವಕಾಲಗಳು, ಆಷಾಢ, ಕಾರ್ತೀಕ, ಮಾಘ, ಈ ಮಾಸಗಳ ಅಮಾವಾಸ್ಯೆಗಳು. ಈ ಮೇಲಿನ ದಿನಗಳಲ್ಲಿ ಸಮುದ್ರದಲ್ಲಿ ಸ್ನಾನ ಮಾಡಿ ನಂತರ ಬ್ರಾಹ್ಮಣರಿಗೆ ದಾನ ಮಾಡಿದರೆ, ಉಳಿದ ಎಲ್ಲಾ ತೀರ್ಥ ಕ್ಷೇತ್ರಗಳಲ್ಲೂ ಮಾಡಿದರೆ ಎಷ್ಟು ಪುಣ್ಯಪ್ರಾಪ್ತಯಾಗುತ್ತದೆಯೋ ಅದರ ಸಹಸ್ರ ಪಟ್ಟು ಅಧಿಕ ಫಲ ಪ್ರಾಪ್ತವಾಗುತ್ತದೆ. ಹಾಗೆಯೇ ಸಮುದ್ರ ದಡದಲ್ಲಿ ಪಿತೃಕಾರ್ಯಗಳನ್ನು ಮಾಡಿ ಶಾಸ್ತ್ರೋಕ್ತವಾಗಿ ಪಿಂಡಪ್ರಧಾನ ಮಾಡಿದರೆ ಪಿತೃದೇವತೆಗಳಿಗೆ ಅಕ್ಷಯ ಪುಣ್ಯಫಲ ಲಭಿಸುವುದು.

ಸಮುದ್ರ ಸ್ನಾನಾನಂತರದಲ್ಲಿ ಇಂದ್ರದ್ಯುಮ್ನ ತೀರ್ಥಕ್ಕೆ ಹೋಗಬೇಕು. ಅಲ್ಲಿ

ಆಚಮನ ಮಾಡಿ ಶ್ರೀಹರಿಯನ್ನು ಸ್ಮರಿಸಿ ಸ್ನಾನಮಾಡಲು ಅನುಮತಿಗಾಗಿ ಈ ಮಂತ್ರಗಳಿಂದ ಪ್ರಾರ್ಥಿಸಬೇಕು.

ಅಶ್ವಮೇಧಾಂಗ ಸಂಭೂತ ತೀರ್ಥ ಸರ್ವಾಘನಾಶನ ।
ಸ್ನಾನಂ ತ್ವಯಿ ಕರೋಮ್ಯದ್ಯ ಪಾಪಂ ಹರಿ ನಮೋಸ್ತುತೇ ॥

ಅಶ್ವಮೇದಕ್ಕೆ ಸಹಾಯವಾಗಿರುವ, ಸಕಲ ಪಾಪಗಳನ್ನೂ ನಾಶ ಮಾಡುವ ಹೇ ತೀರ್ಥರಾಜನೇ, ನಿನ್ನಲ್ಲಿ ಸ್ನಾನ ಮಾಡಲು ಅನುಮತಿಸು ನಿನಗೆ ವಂದನೆಗಳು. ಹೀಗೆ ಪ್ರಾರ್ಥಿಸಿ ಆ ತೀರ್ಥದಲ್ಲಿ ಸ್ನಾನ ಮಾಡಿ ಮೌನದಿಂದ ತರ್ಪಣ ಪುನರಾಚಮನ, ಪಿಂಡಪ್ರದಾನಾದಿ ಕಾರ್ಯಕ್ರಮಗಳನ್ನು ಮುಗಿಸಿ ಭಗವಂತನನ್ನು ಪೂಜಿಸಬೇಕು. ಹೀಗೆಮಾಡಿದರೆ ಹತ್ತು ಅಶ್ವಮೇಧ ಯಾಗದ ಫಲ ಲಭಿಸುತ್ತದೆ. ಈ ಕಾರ್ಯವನ್ನು ಮಾಡಿದವನ ಪೂರ್ವದ ಏಳು ಜನ ಪಿತೃಗಳು ಮುಂದಿನ ಏಳು ತಲೆಮಾ-ರಿನವರು ಉದ್ಧೃತರಾಗುತ್ತಾರೆ ಕೊನೆಗೆ ವಿಷ್ಣುಲೋಕವನ್ನು ಹೊಂದುತ್ತಾರೆ.

ಏಕಾದಶೀ ದಿನ ನಿರಾಹಾರಿಯಾಗಿದ್ದು ಈ ಹಿಂದೆ ಹೇಳಿದ ತೀರ್ಥಗಳಲ್ಲಿ ಸ್ನಾನಾದಿಗಳನ್ನು ಆಚರಿಸಿದವರು ನಿಶ್ಚಿತವಾಗಿ ವಿಷ್ಣುವಿನ ಸಾನ್ನಿಧ್ಯವನ್ನು ಹೊಂದುತ್ತಾರೆ.

ಹಾಗೆಯೇ ವ್ಯಾಸರು ತಿಳಿಸುತ್ತಾರೆ – ಮಾಘ, ಫಾಲ್ಗುಣವನ್ನು ಬಿಟ್ಟು ಜೇಷ್ಠ ಮಾಸವೂ ಅತ್ಯಂತ ಶ್ರೇಷ್ಠವಾದದ್ದು. ಹೇಗೆಂದರೆ ಭೂಮಿಯಲ್ಲಿ ಮಹಾನದಿಗಳು, ಸರೋವರಗಳು, ಕೊಳ–ಕಲ್ಯಾಣಿಗಳು, ಭಾವಿಗಳು, ಸಮುದ್ರಗಳು ಈ ಎಲ್ಲಾಜಲಾಕರಗಳಲ್ಲಿ ಜೇಷ್ಠ ಶುದ್ಧ ದಶಮಿ ದಿನದಿಂದ ಏಳು ದಿನಗಳ ವರೆಗೆ ಆಯಾ ತೀರ್ಥಗಳ ಅಭಿಮಾನಿ ದೇವತೆಗಳು ಅಭಿವ್ಯಕ್ತರಾಗುತ್ತಾರೆ. ಆದ-ದರಿಂದ ಆಕಾಲದಲ್ಲಿ ನದಿ ಮೊದಲಾದ ಪವಿತ್ರ ಸ್ಥಾನಗಳಲ್ಲಿ ಪುಣ್ಯಕಾರ್ಯ ಆಚರಿಸಿದರೆ ಮಹತ್ಫಲಗಳು ಪ್ರಾಪ್ತ ವಾಗುತ್ತದೆ. ಜೇಷ್ಠ ಶುದ್ಧ ದಶಮಿ ದಿನಕ್ಕೆ "ದಶಹಂ" "ದಶಪಾಪಹರ ದಶಮಿ" ಎಂದು ಹೆಸರು. ಏಕೆಂದರೆ ಈ ಶುಭದಿನ ಹತ್ತು ಪಾಪಗಳನ್ನು ಹೋಗಲಾಡಿಸುವುದು. ಈ ದಿನದಂದು ಶ್ರೀಕೃಷ್ಣ, ಬಲರಾಮ, ಸುಭದ್ರಾದೇವಿಯರ ದರ್ಶನ ಮಾಡಿದವರು ಪಾಪರಹಿತವಾಗಿ ಸದ್ಗತಿಯನ್ನುಹೊಂದುತ್ತಾರೆ.

ಹೀಗೆಯೇ ಉತ್ತರಾಯಣ, ದಕ್ಷಿಣಾಯನ, ಮುಂತಾದ ಪರ್ವಕಾಲಗಳಲ್ಲಿ ಈ ಮೂವರ ದರ್ಶನ ಮಾಡಿದವನು ಉಚ್ಚಸ್ಥಾನವನ್ನು ಹೊಂದುವನು. ಹಾಗೆಯೇ ಫಾಲ್ಗುಣ ಮಾಸದಲ್ಲಿ ಡೋಲೋತ್ಸವ (ಉಯ್ಯಾಲೋತ್ಸವ) ಕಾಲದಲ್ಲಿ ಡೋಲಾಯಗತನಾದ ಭಗವಂತನನ್ನು ಸಂದರ್ಶಿಸಿ ಭಕ್ತಿಯಿಂದ ಆರಾಧಿಸಿದವನು ವಿಷ್ಣುವಿನ ಲೋಕವನ್ನು ಪಡೆಯುತ್ತಾನೆ. ವೈಶಾಖ ಬಹುಳ

ತದಿಗೆ ದಿನ ಶ್ರೀಗಂಧದಿಂದ ಶೋಭಿತನಾದ ಶ್ರೀಕೃಷ್ಣನನ್ನು ಸಂದರ್ಶಿಸುವವನು, ವಿಷ್ಣುಲೋಕವನ್ನು ಪಡೆಯುತ್ತಾನೆ. ಜೇಷ್ಠಾ ನಕ್ಷತ್ರ ಸಹಿತವಾದ ಹುಣ್ಣಿಮೆ ದಿನದಂದು ಭಗವಂತನ ದರ್ಶನ ಮಾಡಿದವನ ಇಪ್ಪತ್ತೆರಡು ಜನ ಪಿತೃಗಳು ವಿಸ್ಮೃತರಾಗುತ್ತಾರಲ್ಲದೇ ಅವನಿಗೂ ಪರಮಪುಣ್ಯಲೋಕವು ಪ್ರಾಪ್ತವಾಗುತ್ತದೆ ಎಂದು ಬ್ರಹ್ಮ ಪುರಾಣದಲ್ಲಿ ತಿಳಿಸಿರುತ್ತಾರೆ.

ದ್ವೈತ ಹಾಗೂ ವಿಶಿಷ್ಟಾದ್ವೈತ ಸಿದ್ಧಾಂತಗಳಲ್ಲಿ ಅಂತ್ಯೇಷ್ಠಿಯ ವಿವರಣೆಗಳು:

1. **ಬುಭುಕ್ಷು:** ತಾನು ಮಾಡಿದ ಕರ್ಮಫಲಗಳನ್ನು ತಾನೇ ಅನುಭವಿಸಬೇಕೆಂದು ಇಚ್ಛಿಸುವ ಚೇತನರನ್ನು ಬುಭುಕ್ಷು ಚೇತನರೆನ್ನುತ್ತಾರೆ.

2. **ಮುಮುಕ್ಷು:**ಪ್ರಾರಬ್ಧಕರ್ಮವನ್ನುಳಿದು ಇನ್ನಾವ ಕರ್ಮವನ್ನು ಅನುಭವಿಸಲು ಇಷ್ಟಪಡದೆ ಕರ್ಮಬಂಧದಿಂದಲೇ ಬಿಡುಗಡೆಯನ್ನು ಹೊಂದಬೇಕೆಂದು ಇಚ್ಛಿಸಿ ಅದಕ್ಕೆ ಮಾಡಲೇಬೇಕಾದ ಕರ್ಮಯೋಗ, ಜ್ಞಾನಯೋಗ, ಭಕ್ತಿಯೋಗ, ಅಥವಾ ಶರಣಾಗತಿಯನ್ನು ಅನುಷ್ಠಿಸಿರುವ ಚೇತನರನ್ನು "ಮುಮುಕ್ಷು" ಎಂದು ಕರೆಯುತ್ತಾರೆ.

ದ್ವೈತ ಸಿದ್ಧಾಂತ: (ಮಧ್ವ ಸಿದ್ದಾಂತ) ಜೀವನು ದೇಹವನ್ನು ಬಿಟ್ಟು ಹೊರಡುವಾಗ ಕೆಳಮಟ್ಟ ದಲ್ಲಿರುವ ಇಂದ್ರಿಯಗಳಲ್ಲಿರುವ ಅಭಿಮಾನಿ ದೇವತೆಗಳು ಮೇಲ್ಮಟ್ಟ ಅಭಿಮಾನಿ ದೇವತೆಗಳಲ್ಲಿ ಲಯಹೊಂದುತ್ತಾರೆ. ಮೊದಲು ವಾಗಾಭಿಮಾನಿಯರಾದ ವಾರುಣಿ – ಸುಪರ್ಣಿಯರಿಬ್ಬರೂ, ಮನೋಭಿಮಾನಿಗಳಾದ ಶೇಷ, ಸುಪರ್ಣರೂ ನಂತರ ವಾಣಿಯ ಮುಖಾಂತರ ಚತುರ್ಮುಖ ಬ್ರಹ್ಮ(ಪ್ರಾಣ) ನಲ್ಲಿ ಲಯವನ್ನು ಹೊಂದುತ್ತಾರೆ. ಪ್ರಾಣ ಅಥವಾ ಬ್ರಹ್ಮನು ತೇಜಸ್ಸಿನ ಮುಖಾಂತರ ವಿಷ್ಣುವನ್ನು ಪ್ರವೇಶಿಸುತ್ತಾನೆ. ಜೀವನು ಪ್ರಕೃತಿಯನ್ನು ಬಿಟ್ಟು ವಿಷ್ಣುವನ್ನು ಪ್ರವೇಶಿಸುವುದೇ ಮೋಕ್ಷ. ಜ್ಞಾನಿಚೇತ ನನು ಭೌತಿಕ ದೇಹವನ್ನು ಬಿಟ್ಟು ವಿಷ್ಣುವಿನಲ್ಲಿ ಹೋಗಿ ಸೇರುವುದು ಮುಕ್ತಿಯ ಮುಖ್ಯವಾದ ಹಂತ. ಚೇತನನು ದೇಹವನ್ನು ಬಿಡುವ ಮುನ್ನ ಅವನ ಹೃದಯ ಮುಂಭಾಗದಲ್ಲಿ ಹರಿಯ ಕೃಪೆಯಿಂದ ದೇಹದೊಳಗಿನ ನಾಡಿಗಳೆಲ್ಲವನ್ನೂ ಪ್ರಕಾಶಿಸುವಬೆಳಗಿನ ಸೂರ್ಯನ ಕಿರಣಗಳಂತಿರುವ ಬೆಳಕು ಕಂಡುಬರುತ್ತದೆ. ಆಗ ದೇವತೆಗಳ ಅನುಗ್ರಹದಿಂದ ಜೀವನು ಸುಷುಮ್ನಾ ನಾಡಿಯ ಮುಖಾಂತರ ಪ್ರಯಾಣ ಮಾಡುತ್ತಾನೆ. ರಾತ್ರಿಕಾಲಗಳು ಅಥವಾ ದಕ್ಷಿಣಾಯನಗಳಲ್ಲಿ ಇವನ ಪ್ರಯಾಣಕ್ಕೆ ಅಡ್ಡಿಯಿರುವುದಿಲ್ಲ.

ಸುಷುಮ್ನಾ ನಾಡಿಯಲ್ಲಿ ಹೊರ ಹೊರಟ ಮುಮುಕ್ಷುವು ಮೊದಲು ಬೆಳಕಿನಿಂದ ಪ್ರಕಾಶಿಸುವ ಅರ್ಚಿರಾದಿ ಲೋಕವನ್ನೂ ನಂತರ ದಿನ ಶುಕ್ಲಪಕ್ಷ, ಕೃಷ್ಣಪಕ್ಷ,

ವರ್ಷ, ವಿದ್ಯುತ್, ವರುಣ, ಪ್ರಜಾಪತಿ, ಸೂರ್ಯ, ಸೋಮ, ವೈಶ್ವಾನರ, ಧೃವ ಮುಂತಾದವರ ಮುಖೇನ ದೇವತೆಗಳ ಲೋಕವನ್ನು ಸೇರಿ ಕೊನೆಗೆ ವಾಯುವನ್ನು ಸೇರುತ್ತಾನೆ.

ಆದ್ದರಿಂದ ಜೀವನು ಈ ಪ್ರಯಾಣದಲ್ಲಿ ಮುಖ್ಯವಾದ ವಾಯುವೇ ಕೊನೆಯ ಸ್ಥಾನವಾಗಿರುತ್ತದೆ. ಈ ವಾಯುವು ಉಪಾಸನೆ ಮಾಡಿದ ಚೇತನರನ್ನು ನೇರವಾಗಿ ವಿಷ್ಣುವಿನಲ್ಲಿಗೆ ಕುಳುಹಿಸುತ್ತಾನೆ. ಹೀಗೆ ವಿಷ್ಣುವಿನಲ್ಲಿ ಸೇರುವುದೇ ಮೋಕ್ಷ. ಹೀಗೆ ಮೋಕ್ಷವನ್ನು ಪಡೆದವನಿಗೆ ಮತ್ತೆ ಪುನರ್ಜನ್ಮವಿರುವುದಿಲ್ಲ ಹಾಗೂ ಒಂದೊಮ್ಮೆ ಜನಿಸಿದರೂ ದುಃಖವಿಲ್ಲದ ಆನಂದವನ್ನು ಮಾತ್ರ ಅನಿಭವಿಸುತ್ತಾನೆ.

ವಿಶಿಷ್ಟಾದ್ವೈತ ಸಿದ್ದಾಂತ: (ಶ್ರೀವೈಷ್ಣವರ ಸಂಪ್ರದಾಯ) ಜೀವನು ಭಗವಂತನ ಸೌಹಾರ್ದದಿಂದ ಯಾದೃಚ್ಛಿಕವಾಗಿ ಕೇವಲ ಪುಣ್ಯ ಕೆಲಸಗಳನ್ನು ಮಾಡಿ ಅದರಿಂದ ಭಗವಂತನಿಗೆ ಉಂಟಾದ ದಯೆಯಿಂದ ಮುಂದಿನ ಜನ್ಮದಲ್ಲಿ ಹುಟ್ಟುವಾಗಲೇ ಭಗನಂತನ ಕಟಾಕ್ಷಕ್ಕೆ ಪಾತ್ರನಾಗಿ ಯಾವೊಂದು ಜೀವರಾಶಿಗಳಲ್ಲಿಯೂ ದ್ವೇಷಾಸೂಯೆಗಳಿಲ್ಲದಂತಾಗಿ, ಸತ್ಪುರುಷರ ಸಹವಾಸದಲ್ಲಿ ಅಭಿಮುಖ್ಯವುಂಟಾಗಿ ಅವರೊಡನೆ ಕಲೆತು ಮಾತನಾಡುವಲ್ಲಿ ಚಿತ್, ಅಚಿತ್, ಮತ್ತು ಈಶ್ವರ ಎಂಬ ತತ್ವಗಳ ವಿಷಯವನ್ನು ಸ್ಥೂಲವಾಗಿ ತಿಳಿದವನಾಗಿ ಅದನ್ನು ಇನ್ನೂ ಆಳವಾಗಿ ಅಧ್ಯಯನ ಮಾಡಬೇಕು ಎಂದು ಆಚಾರ್ಯರುಗಳಲ್ಲಿ ಹೋಗಿ ಕಾಲಕ್ಷೇಪಾದಿಗಳನ್ನು ಮಾಡಿ ತತ್ವಗಳ ಯಥಾರ್ಥಜ್ಞಾನ ವನ್ನು ಪಡೆಯುತ್ತಾನೆ. ಆಗ ಭಗವಂತನನ್ನು ಸ್ವಾಮಿಯೆಂದೂ ತಾನು ಅವನ ದಾಸನೆಂದೂ, ನಿರಂತರವಾಗಿ ಅವನ ದರ್ಶನ ಮಾಡುತ್ತಾನೆ. ಅವನ ಕೈಂಕರ್ಯ ಮಾಡುವುದರಿಂದಲೇ ತನಗೆ ನಿರಂತರ ಆನಂದವು ಲಭಿಸುವುದೆಂದೂ, ತಾನೂ ಪರಬ್ರಹ್ಮನಂತೆಯೇ ಆನಂದಮಯನಾಗಿದ್ದೇನೆ ಎಂತಲೂ ತುಚ್ಛವಾದ ವಿಷಯಾಸಕ್ತಿಯಿಂದ ಕೂಡಿದ ಸಂಸಾರವು ಮತ್ತೆ ತನ್ನನ್ನು ಕರ್ಮಬಂಧನಕ್ಕೆ ಒಳಮಾಡುತ್ತದೆ ಎಂದು ಅರಿತವನಾಗಿ ಸಂಸಾರದಲ್ಲಿ ಆಸಕ್ತಿಯನ್ನು ತೊರೆದವನಾಗಿ ಈ ಕರ್ಮಯೋಗ, ಜ್ಞಾನಯೋಗ, ಸಹಕೃತವಾದ ಭಕ್ತಿಯೋಗವನ್ನನುಷ್ಠಿಸಲು ತಾನು ಅನರ್ಹನೆಂದು ಮನಗಂಡು ಮುಂದೆ ತನಗಿರುವ ದಾರಿ ಭಗವಂತನಲ್ಲಿ ಶರಣಾಗತಿ ಎಂದು ಅರಿತು ಅವನಲ್ಲಿ ಶರಣಾಗುತ್ತಾನೆ.

"ಅತ್ಯುತ್ಕಟೈಃ ಪುಣ್ಯಪಾಪೈಃ ಇಹೈವ ಫಲಮಶ್ನುತೇ"

ಆಗಾಮಿಕರ್ಮ, ಪ್ರಾರಬ್ಧಕರ್ಮ,. ಸಂಚಿತಕರ್ಮಗಳ ಫಲಗಳನ್ನು ಅನುಸ-ರಿಸುವ ಸಲುವಾಗಿಯೇ ನಾನಾ ಜನ್ಮಗಳನ್ನು ಪಡೆಯುತ್ತಾನೆ.

ಹೀಗೆ ನಿರಂತರ ಭಗವಂತನಲ್ಲಿ ಶರಣಾಗಿ ಆತನ ಕೈಂಕರ್ಯಗಳಲ್ಲಿ

ಲೀನವಾದಾಗ ನಿರಪರಾಧ ಕೈಂಕರ್ಯವನ್ನು ಅನುಗ್ರಹಿಸಿ ರಕ್ಷಿಸಬೇಕೆಂದು ಪ್ರಾರ್ಥಿಸಿದಾಗ ಅಂತಹವರು ಇಹಜನ್ಮದಲ್ಲಿ ಮಾಡಲ್ಪಡುವ ಭಗವದ್ಭಾಗವತ ಕೈಂಕರ್ಯಕ್ಕೆ ಅಡ್ಡಿಯಾಗಿ ಬರುವ ಅವನ ಪ್ರಾರಬ್ಧಕರ್ಮವನ್ನು ನಷ್ಟವಾಗುವಂತೆ ಮಾಡುತ್ತಾನೆ ಹಾಗೂ ಮುಂದೆ ಯಾವುದೇ ತೊಂದರೆಗಳು ಸಂಭವಿಸುವುದಿಲ್ಲ ಹಾಗೂ ಅಜ್ಞಾನದಿಂದ ಮಾಡಿದ ತಪ್ಪುಗಳಿಂದ ಪಾಪಕರ್ಮವು ಸಂಭವಿಸಿದರೆ ಪ್ರಾಯಶ್ಚಿತ್ತ ಕರ್ಮವನ್ನು ಶಾಸ್ತ್ರೋಕ್ತ ರೀತಿಯಲ್ಲಿ ಮಾಡಿಕೊಳ್ಳಬೇಕು.

ಅದೂ ಸಾದ್ಯವಾಗದಿದ್ದರೆ ಭಗವಂತನಲ್ಲಿ ಶರಣಾಗತನಾಗಿ ತನ್ನನ್ನು ಈ ಪಾಪಕರ್ಮದಿಂದ ಬಿಡಿಸಬೇಕೆಂದು ಪ್ರಾರ್ಥಿಸಿಕೊಂಡರೆ ಆ ಕರ್ಮವು ಅಂಟದಂತೆ ಮಾಡುತ್ತಾನೆ. ಈ ರೀತಿಯಾದ ಕರ್ಮವನ್ನೂ "ಪ್ರಾಯಶ್ಚಿತ್ತಪ್ರಮದನ" ಎಂದು ಕರೆಯುತ್ತಾರೆ.

ಒಂದು ವೇಳೆ ಈ ಎರಡನ್ನೂ ಮಾಡದವನಿಗೆ ಭಗವಂತನು ಲಘು ಶಿಕ್ಷೆಯನ್ನು ಈ ಜನ್ಮ ದಲ್ಲಿಯೇ ಅನುಭವಿಸುವಂತೆ ಮಾಡಿ ಚೇತನನನ್ನು ಕರ್ಮಗಳಿಂದ ಪಾರುಮಾಡಿ ರಕ್ಷಿಸುತ್ತಾನೆ ಎಂದು ವೇದಾಂತ ದೇಶೀಕರು "ರಹಸ್ಯತ್ರಯಿಸಾರ" ಗ್ರಂಥದಲ್ಲಿ ತಿಳಿಸಿರುತ್ತಾರೆ.

ಹೀಗೆ ಪ್ರಪನ್ನನಾದ ಭಗವಂತನಲ್ಲಿ ಶರಣಾಗತನಾಗುವುದರಿಂದ ಭಗವಂತನಿಗೆ ಆತನ ವಿಷಯದಲ್ಲಿ ನಿರಂತರವಾದ ದಯೆಯುಂಟಾಗಿ ಆತನ ಕೃಪೆಗೆ ಪಾತ್ರನಾಗುತ್ತಾನೆ ಹಾಗೂ ಅವನ ದೇಹಾವಸಾನಕಾಲದಲ್ಲಿ ದೇಹಬಿಡುವಾಗ ಸೂಕ್ಷ್ಮರೂಪದಲ್ಲಿರುವ ಇಂದ್ರಿಯ, ಮನಸ್ಸು, ಪ್ರಾಣ, ಮತ್ತು ಭೂತಸೂಕ್ಷ್ಮಗಳಿಂದ ಕೂಡಿದ ಸೂಕ್ಷ್ಮ ಶರೀರದಿಂದ ಕೂಡುವಂತೆ ಮಾಡಿ ಪುನರ್ಜನ್ಮಗಳಿಗೆ ದಾ–ರಿಯಿಲ್ಲದಂತೆ ತಡೆದು ಶ್ರೀವೈಕುಂಠವನ್ನು ಸೇರಲು ಬ್ರಹ್ಮನಾಡಿ ಅಥವಾ ಸುಷುಮ್ನಾ ನಾಡಿಯ ಮುಖಾಂತರ ದೇಹವನ್ನು ಹೊರಕ್ಕೆ ಕರೆದುಕೊಂಡು ಹೋಗುತ್ತಾನೆ. ನಂತರ ಅತಿವಾಹಕರೆಂದು ಕರೆಯಲ್ಪಡುವ ಅಗ್ನಿ, ಹಗಲಿನ, ಶುಕ್ಲಪಕ್ಷದ, ಉತ್ತರಾಯಣದ, ಸಂವತ್ಸರದ ಅಭಿಮಾನಿ ದೇವತೆಗಳೂ, ವಾಯು, ಸೂರ್ಯನೂ, ಚಂದ್ರನೂ, ವಿದ್ಯುತ್, ಪುರುಷ ಅಥವಾ ವೈದ್ಯುತನೂ ಈತನಿಗೆ ಸಹಕಾರಿಗಳಾದ, ವರುಣ, ಇಂದ್ರ, ಚತುರ್ಮುಖ ಬ್ರಹ್ಮ ಎಂಬ ಹನ್ನೆರಡು ಜನ ಮಾರ್ಗ ನಡೆಸುವವರ ಜೊತೆಯಲ್ಲಿ ಕರೆದುಕೊಂಡು ಹೋಗಿ ಆಯಾಯ ದೇವತೆಗಳು ಅವರವರ ಎಲ್ಲೆಕಟ್ಟಿ ನವರೆಗೂ ಮುಕ್ತಾತ್ಮನೊಡನೆ ಬಂದು ಆ ಪ್ರಪನ್ನನನ್ನು ಸತ್ಕರಿಸುವಂತೆ ಅವರವರ ಲೋಕಗಳಲ್ಲಿ ಭೋಗಗಳನ್ನು ಪ್ರಪನ್ನನಿಗೆ ಅನುಭವಿಸುವಂತೆ ಮಾಡಿ ಈ ಪ್ರಕೃತಿಮಂಡಲವನ್ನು ದಾಟಿಸುತ್ತಾನೆ.

ಈ ಅತಿವಾಹಕರಲ್ಲಿ ಒಂಬತ್ತನೆಯವನಾದ ವೈದ್ಯುತನು ಒಬ್ಬ ನಿತ್ಯಾತ್ಮನು.

ಇವನು ವೈಕುಂಠ ಲೋಕದಲ್ಲಿರುವ ಪರಸ್ಪರ ರೂಪದ ಪರಮಾತ್ಮನನ್ನು ಪ್ರಪನ್ನನು ಸೇರುವವರೆಗೂ ಜೊತೆಯಲ್ಲಿಯೇ ಇರುತ್ತಾನೆ. ಇವನೇ ಭಗವಂತನಲ್ಲಿಗೆ ಮುಕ್ತನನ್ನು ಕರೆದುಕೊಂಡು ಹೋಗಿ ಸೇರಿಸುವವನಾಗಿದ್ದು ಇದನ್ನು " ವೈದ್ಯುತೇನೈವ ತತಸ್ತಚ್ಛ್ರುತೇಃ " ಎಂದು "ಬ್ರಹ್ಮಸೂತ್ರ"ವೆಂಬ ಸೂತ್ರಭಾಷ್ಯದಲ್ಲಿ ರಾಮಾನುಜಾಚಾರ್ಯರು ತಿಳಿಸಿರುತ್ತಾರೆ.

ಪಿತೃಕಾರ್ಯದ ಬಗ್ಗೆ ಕೆಲವು ವಿದ್ವಾಂಸರ ಅಭಿಪ್ರಾಯಗಳು

ವಿದ್ವಾನ್ ಎಸ್.ವಿ. ಶ್ಯಾಮಭಟ್ಟರ ಅಭಿಪ್ರಾಯ:

ಪಿತೃ ಎಂದರೆ ನಮಗೆ ಜನ್ಮಕೊಟ್ಟು, ರಕ್ಷಿಸಿ, ಪೋಷಿಸಿ, ನಮ್ಮ ಸರ್ವವಿಧ ಪ್ರಗತಿಗೂಕಾರಣರಾದ ತಾಯಿ, ತಂದೆ, ಹಾಗೂ ಹಿರಿಯರು. ಅವರನ್ನು ಶೃತಿಯಲ್ಲಿ "ಮಾತೃದೇವೋ ಭವ", ಪಿತೃದೇವೋ ಭವ", ಎಂದರೆ ಮಾತಾ-ಪಿತೃಗಳನ್ನು ದೇವತೆಗಳಂತೆ ತಿಳಿ ಎಂದು ತಿಳಿಸಿದೆ. ಅಂದರೆ

"ಜೀವತೋ ರ್ವಾಕ್ಯಕರಣಾತ್ ಶ್ರಾದ್ಧೇ ಭೂರಿಪ್ರದಾನತಃ|
ಗಯಾಯಾಂ ಪಿಂಡದಾನಾಶ್ಚ ತ್ರಿಭಿಃ ಪುತ್ರಸ್ಯ ಪುತ್ರತಾ||"

"ಪುಂನಾಮ್ನೋ ನರಕಾತ್ತ್ರಾಯತ ಇತಿ ಪುತ್ರಾಃ"ಎಂದರೆ ತಂದೆ ತಾಯಿಗಳು ಬದುಕಿರುವಾಗ ಅವರ ಮನಸ್ಸಿಗೆ ನೋವುಂಟುಮಾಡದೆ ಶುಶ್ರೂಷೆ ಮಾಡುತ್ತಲೂ ಅವರ ಅಂತ್ಯಕಾಲದಲ್ಲಿ ಅಂತ್ಯಕರ್ಮಗಳನ್ನು ವಿಧಿವಿಹಿತ ರಿತಿಯಲ್ಲಿ ಮಾಡಿ ಗಯೆಯಲ್ಲಿ ವಿಹಿತವಾದ ಶ್ರಾದ್ಧಾದಿಗಳನ್ನು ಮಾಡಿದವನು "ಪುತ್ರ" ಎಂಬ ಹೆಸರಿಗೆ ಅರ್ಹನು. "ಪುತ್" ಎಂಬ ನರಕದಿಂದ ಪಾರುಮಾಡುವವನೇ ಪುತ್ರನು ಎಂದು ತಿಳಿಸುತ್ತಾರೆ. ಅಲ್ಲದೆ ಐಹಿಕವಾದ ಸಕಲ ಅಭ್ಯುದಯಗಳಿಗೂ, ನಿಶ್ರೇಯಸಕ್ಕೂ ಪಿತೃಗಳೇ ಮೂಲಕಾರಣರು ಎಂದು ಶೃತಿ, ಸ್ಮೃತಿ, ಪುರಾಣಾದಿಗಳು ಸಾರುತ್ತವೆ.

ಈ ಪಿತೃಋಣವನ್ನು ತೀರಿಸಲು ಹಾಗೂ ಋಣಮುಕ್ತನಾಗಲೂ ಶ್ರಾದ್ಧಾದಿಗಳಿಂದ ಸಾಧ್ಯವೇ ವಿನಃ ಬೇರೆ ಯಾವುದರಿಂದಲೂ ಸಾಧ್ಯವಿಲ್ಲ ಎಂಬುದನ್ನು ನಾವು ಶಾಸ್ತ್ರಗಳಿಂದ ಅರಿಯಬೇಕು. ತಂದೆ ತಾಯಂದಿರು ಜೀವಿತಕಾಲದಲ್ಲಿ ಅವರ ಸೇವೆಗೈದು ಅವರು ಗತಿಸಿದ ನಂತರ ವಿಧಿ ವಿಹಿತವಾಗಿ ಶ್ರಾದ್ಧಾದಿಗಳನ್ನು ಭಕ್ತಿ, ಶ್ರದ್ಧೆಯಿಂದ ವಿಹಿತಕಾಲದಲ್ಲಿ ತಪ್ಪದೆ ಮಾಡಿ ಅವರ ಋಣದಿಂದ ಮುಕ್ತರಾಗಬೇಕು. ಇದು ಪ್ರತಿಯೊಬ್ಬ ಮಾನವನಿಗೂ ವಿಹಿತವಾಗಿದೆ. "ತಸ್ಮಾತ್ ಶಾಸ್ತ್ರಂ ಪ್ರಮಾಣಂತೇ", "ಶೃತಿ ಸ್ಮೃತಿ ಮಮೈವಾಜ್ಞೇ" ಎಂಬ ಗೀತಾ ವಚನದಂತೆ ಶಾಸ್ತ್ರಗಳಲ್ಲಿ ತಿಳಿಸಿರುವ ಪ್ರಮಾಣದಲ್ಲಿಯೇ ನೆಡೆಸಬೇಕು.

ಶ್ರಾದ್ಧ ಸ್ವರೂಪ: ಪ್ರತಿ ವರ್ಷ ಮೃತ ತಿಥಿಯಂದು ಮಾಡುವ ಶ್ರಾದ್ಧವು

ಅಮಂಗಳವಲ್ಲ. ಅಂದರೆ ವಿವಾಹಾದಿಗಳಂತೆ ಮಂಗಳ ಕಾರ್ಯವೂ ಅಲ್ಲ. ವಿಶೇಷ ನಿಯಮಗಳನ್ನು ಕುಟುಂಬದವರು, ಕರ್ತೃಗಳೂ, ಭೋಕ್ತೃಗಳೂ ಪಾಲಿಸುತ್ತಾ, ವಿಶೇಷ ಶ್ರದ್ಧೆ, ಭಕ್ತಿ ಮತ್ತು ಪ್ರಾಮಾಣ್ಯ ಬುದ್ಧಿಯಿಂದ ಆಚರಿಸುವ ಒಂದು ವಿಶೇಷ ಕರ್ಮ. ಇದರಲ್ಲಿ ಪಾಣಿ ಹೋಮ, ಬ್ರಾಹ್ಮಣಭೋಜನ ಮತ್ತು ಪಿಂಡಪ್ರದಾನ, ಈ ಮೂರೂ ಮುಖ್ಯವಾದ ಕರ್ಮಗಳು. (ಋಗ್ವೇದಿಗಳಿಗೆ ಪಾಣಿಹೋಮ ಹಾಗೂ ಯಜುರ್ವೇದಿಗಳಿಗೆ ಅಗ್ನೌಕರಣ)

ನಿಮಂತ್ರಣ ಯೋಗ್ಯರು: ನಿಮಂತ್ರಿತ ವಿಪ್ರರು ಕರ್ತೃವಿನ ಗೋತ್ರದವರಾಗಿರಬಾರದು. ಪತ್ನಿ ಗರ್ಭಿಣಿಯಾಗಿದ್ದಾಗ ನಿಮಂತ್ರಣಕ್ಕೆ ಅರ್ಹರಾಗಿರುವುದಿಲ್ಲ. ಜ್ಞಾತಿಗಳೂ, ಆಚಾರ ಹೀನರೂ, ಬ್ರಹ್ಮಚಾರಿಗಳು, ವಿಧುರರೂ, ಸುಲಭಕೋಪಿಗಳೂ ಆಗಿರಬಾರದು. ನಿತ್ಯಸಂಧ್ಯಾವಂದನೆ, ನಿತ್ಯಾನುಷ್ಠಾನವನ್ನು ಮಾಡುವವರು ಪ್ರತಿವಚನಗಳನ್ನು ಹೇಳಲು ಅರ್ಹರಾದವರು ಮತ್ತು ಯೋಗ್ಯರಾದವರು ಮಾತ್ರ ಅರ್ಹರ. ಅಂತಹವರು ಆ ದಿನ ಬ್ರಹ್ಮಚರ್ಯವನ್ನು ಪಾಲಿಸಬೇಕು, ರಾತ್ರಿಭೋಜನ ನಿಶಿದ್ಧ, ದೂರ ಸಂಚಾರ, ಕಠಿಣ ಕಾರ್ಯಗಳು ಮಾಡಬಾರದು. ಸಂದ್ಯಾದಾನ ತೆಗೆದುಕೊಳ್ಳುವುದು, ಹವನ ಅಥವಾ ದೇವತಾಕಾರ್ಯದಲ್ಲಿ ಪಾಲ್ಗೊಳ್ಳುವುದು ನಿಶಿದ್ಧ.

ಶ್ರಾದ್ಧಕ್ಕೆ ಅಪರಾಹ್ನವ್ಯಾಪಿಯಾದ ತಿಥಿಯೇ ಶ್ರೇಷ್ಠ ಹಾಗೂ ಶ್ರಾದ್ಧಕ್ಕೆ ಸ್ವಗೃಹವೇ ಶ್ರೇಷ್ಠವಾದದು. ಬೇರೆಯವರ ಮನೆಯಲ್ಲಿ ಶ್ರಾದ್ಧಕರ್ಮಗಳನ್ನು ಆಚರಿಸಿದರೆ ಆ ಮನೆಯ ಪಿತೃಗಳಿಗೆ ಶ್ರಾದ್ಧಫಲವು ಹೋಗುತ್ತದೆ ಎಂದು ನಿಷೇಧಿಸಿರುತ್ತಾರೆ. ಪುಣ್ಯಕ್ಷೇತ್ರವಾದರೆ ದೋಷವಿಲ್ಲ. ಒಂದೊಮ್ಮೆ ಪರರ ಮನೆಯಲ್ಲಿ ಮಾಡಬೇಕಾದರೆ ಅಂದಿನ ದಿನಕ್ಕೆ ಬಾಡಿಗೆಯನ್ನು ಕೊಟ್ಟು ನೆಡೆಸಬೇಕು.

ಪರಕೀಯ ಗೃಹೇ ಯಸ್ತ ಸ್ವ ಪಿತೄನ್ ತರ್ಪಯೇದ್ಯದಿ
ತದ್ಭೂಮಿ ಸ್ವಾಮಿನಸ್ತಸ್ಯ ಹರಂತಿ ಪಿತರೋ ಬಲಾತ್।
ತಸ್ಮಾತ್ ಕ್ರೀತ್ವಾ ಮಹೀಂ ದತ್ವಾಸ್ವಲ್ಪಾಮಪಿ ವಿಚಕ್ಷಣಃ
ಪಿಂಡಃ ಪಿತೃಭ್ಯೋ ದತ್ತೋ ವೈ ತಸ್ಯಾಂ ಭವತಿ ಶಾಶ್ವತಃ॥

ಶ್ರಾದ್ಧದ ದಿನ ಮನೆಯ ಮುಂದೆ ರಂಗವಲ್ಲಿ, ಪುಷ್ಪಾಲಂಕಾರ, ವಿಭೂತಿಧಾರಣೆ, ದಾನಗಳನ್ನು ಕೊಡುವುದು, ಜಗಳವಾಡುವುದು, ಅಳುವುದು, ರೇಗುವುದು, ಕೆಟ್ಟಮಾತುಗಳನ್ನು ಆಡುವುದು ಬಿಡಬೇಕು. ಗಂಟಾನಾದವನ್ನು ಬಿಡಬೇಕು. ಇದೆಲ್ಲಾ ಮಾಡಿದರೆ ಪಿತೃಗಳು ನಿರಾಶರಾಗಿ ಹಿಂದಿರುಗುತ್ತಾರೆ.

ಶ್ರಾದ್ಧದ ದಿನ ಬ್ರಹ್ಮಚಾರಿಗಳು 4 ಮೊಳದ ದಟ್ಟಿ ಪಂಚೆಯನ್ನೂ, ಗೃಹಸ್ಥರು ಕಚ್ಚೆ ಪಂಚೆಯನ್ನುಡಬೇಕು.

ಶ್ರಾದ್ಧದ ದಿನ ಬ್ರಾಹ್ಮಣ ಭೋಜನವಾಗುವವರೆಗೂ ಬೇರೆ ಯಾರಿಗೂ ದಾನಗಳನ್ನು ಕೊಡಬಾರದು. ಭಿಕ್ಷೆಯನ್ನು ಹಾಕಬಾರದು. ಹೀಗೆ ಅನೇಕ ವಿಚಾರಗಳನ್ನು ವಿದ್ವಾನ್ ಎಸ್.ವಿ. ಶ್ಯಾಮಭಟ್ಟರು ತಮ್ಮ "ಆಶ್ವಲಾಯನ ಶ್ರಾದ್ಧ ಪ್ರಯೋಗಃ" ಎಂಬ ಕೃತಿಯಲ್ಲಿ ತಿಳಿಸಿದ್ದಾರೆ. ಇವರಿಗೆ ನನ್ನ ಅನಂತ ವಂದನೆಗಳು.

ಪರಮಪೂಜ್ಯ ಶ್ರೀಶ್ರೀ ಶ್ರೀರಂಗಪ್ರಿಯ ಶ್ರೀಪಾದಸ್ವಾಮಿಗಳ ಅಭಿಪ್ರಾಯ:

ಶ್ರದ್ಧೆಯಿಂದ ಆಚರಿಸುವ ಕರ್ಮಕ್ಕೆ 'ಶ್ರಾದ್ಧ' ಎಂದು ಹೆಸರು. ಪ್ರೇತವನ್ನಾಗಲಿ, ಪಿತೃದೇವತೆಗಳನ್ನಾಗಲಿ ಕುರಿತು ಶ್ರದ್ಧೆಯಿಂದ ವಿಧಿಪೂರ್ವಕವಾಗಿ, ಸರಿಯಾದ ದೇಶ-ಕಾಲ-ಪಾತ್ರಗಳಲ್ಲಿ ಸಮರ್ಪಿಸುವ ದಾನಹೋಮಾದಿ ಕರ್ಮಗಳನ್ನು 'ಶ್ರಾದ್ಧ' ಎಂದು ಪಾರಿಭಾಷಿಕವಾಗಿ ಕರೆಯುತ್ತಾರೆ.

"ಪ್ರೇತಂ ಪಿತೃಂಶ್ಚ ನಿರ್ದಿಶ್ಯ ಭೋಜ್ಯಂ ಯತ್ ಪ್ರಿಯಮಾತ್ಮನಃ
ಶ್ರದ್ದಯಾ ಕ್ರಿಯತೇ ಯತ್ ತು ತಚ್ಛ್ರಾದ್ಧಂ ಪರಿಕೀರ್ತಿತಮ್।
ದೇಶೇ ಕಾಲೇ ಚ ಪಾತ್ರೇ ಚ ಶ್ರದ್ಧಯಾ ವಿಧಿನಾ ಚ ಯತ್
ಪಿತ್ರೂನ್ ಉದ್ದಿಶ್ಯ ವಿಪ್ರೇಭ್ಯೋ ದತ್ತಂ ಶ್ರಾದ್ಧಮ್ ಉದಾಹೃತಮ್॥"

ಅವರನ್ನು ಉದ್ದೇಶಿಸಿ ಮಾಡುವ ಹೋಮ, ತರ್ಪಣ, ಪಿಂಡಪ್ರದಾನ, ಬ್ರಾಹ್ಮಣ ಭೋಜನ- ಇತ್ಯಾದಿಗಳೂ ಶ್ರಾದ್ಧಪ್ರಕಾರಗಳೇ.

ಶ್ರಾದ್ಧವು ಅತ್ಯಂತ ಪವಿತ್ರವಾದ ಕರ್ಮವೆಂದು ಪರಿಗಣಿತವಾಗಿ, ದೇವಕರ್ಮಕ್ಕಿಂತಲೂ ಮುಖ್ಯವಾದುದೆಂದು ಶಾಸ್ತ್ರಗಳು ಸಾರುತ್ತವೆ.

"ದೇವಕಾರ್ಯಾದಪಿ ಪರಂ ಪಿತೃಕಾರ್ಯಂ ಪ್ರಚಕ್ಷತೇ"

ಪಿತೃದೇವತೆಗಳು ದೇವತೆಗಳಿಗೂ ಪಿತೃಗಳಾಗಿರುವುದರಿಂದ, ಅವರನ್ನು ಕುರಿತು ಕರ್ಮಗಳು ದೇವಕರ್ಮಗಳಿಗಿಂತಲೂ ಪ್ರಧಾನವೆಂದು, ಈ ಶ್ರಾದ್ಧಕರ್ಮವನ್ನು ಪ್ರಶಂಸೆ ಮಾಡಿದೆ. ಹಾಗೆಯೇ ಶ್ರಾದ್ಧಕರ್ಮವನ್ನು ಆಚ-ರಿಸದೇ ಇದ್ದರೆ, ಮಹಾಹಾನಿಯುಂಟಾಗುತ್ತದೆಂದೂ ಶಾಸ್ತ್ರಗಳು ಘೋಷಿಸುತ್ತವೆ.

"ನ ತತ್ರ ವೀರಾ ಜಾಯಂತೇ ನಾರೋಗಾ ನ ಶತಾಯುಷಃ ।
ನ ಚ ಶ್ರೇಯೋಧಿಗಚ್ಛಂತಿ ಯತ್ರ ಶ್ರಾದ್ಧಂ ವಿವರ್ಜಿತಮ್ ॥"

ದೇಹವನ್ನು ತೊರೆದ ಬಂಧು, ಮಿತ್ರ ಅಥವ ಆ ಪ್ರೀತ್ಯಾದರಪಾತ್ರ – ಇವರನ್ನು ಕುರಿತು, ಪ್ರಶಂಸೆ, ಪ್ರಾರ್ಥನೆ, ಪೂಜೆ ಇತ್ಯಾದಿಗಳ ಮೂಲಕ, ಕೃತಜ್ಞತೆಯನ್ನು ಸಲ್ಲಿಸುವ ಪದ್ಧತಿಯು ನಾನಾ ಸಮಾಜದಲ್ಲಿ ಕಂಡುಬರುತ್ತಿದೆ. ಇವುಗಳೂ ತಾತ್ತ್ವಿಕವಾಗಿ ಶ್ರಾದ್ಧದ ರೂಪಗಳೇ ಆದರೂ, ಶ್ರಾದ್ಧಕರ್ಮವನ್ನು

ವಿಚಾರಪೂರ್ವಕವಾಗಿ ವೈಜ್ಞಾನಿಕವಾಗಿ ಮತ್ತು ಪರಿಷ್ಕೃತ ರೂಪದಲ್ಲಿ ಆಚರಿಸುವ ಸಂಪ್ರದಾಯವು ಭಾರತೀಯರ ಪರಂಪರೆಯಲ್ಲಿ ಬಂದಿದೆ.

ಶ್ರಾದ್ಧವನ್ನು ಶ್ರಧ್ಧೆಯಿಂದ ಮಾಡಬೇಕು – ಎಂದು ಶಾಸ್ತ್ರಗಳು ಹೇಳಿರುತ್ತವೆ. ಆದರೆ 'ಅಂಧಶ್ರದ್ಧೆಯಿಂದ ಮಾಡಬೇಕು'ಎಂದು ಅವು ಹೇಳಿರುವುದಿಲ್ಲ. ಮಾಡುವ ಯಾವುದೇ ಕೆಲಸವನ್ನೂ ವಿವೇಕದಿಂದ ವಿಚಾರಪೂರ್ವಕವಾಗಿ ಆಚರಿಸಬೇಕು ಎಂಬುದು ಜ್ಞಾನಿಗಳ ಸಂದೇಶ. 'ಶ್ರದ್ಧಯಾ, ವಿದ್ಯಯಾ, ಉಪನಿಷದಾ ________ ವೀರ್ಯವತ್ತರಂ ಭವತಿ' ಅಂತಹ ಆಚರಣೆಗೆ ಮೂಲಭೂತವಾಗಿರುವ ಆವಶ್ಯಕವಾಗಿರುವ ಮತ್ತು ಸತ್ಯಾರ್ಥದ ಅನುಭವದಲ್ಲಿ ಪರ್ಯವಸಾನ ಹೊಂದುವ ನಂಬಿಕೆಯನ್ನು ಮಾತ್ರವೇ ಶಾಸ್ತ್ರಗಳು ಶ್ರದ್ಧೆಯೆಂದು ಕರೆಯುತ್ತವೆ.

ಶ್ರಾದ್ಧದ ಆಚರಣೆಯನ್ನು ಕುರಿತು ಬಗೆಬಗೆಯಾದ ಸಂದೇಹ, ಆಕ್ಷೇಪಗಳನ್ನು ನೋಡುತ್ತೇವೆ.

(1)ದೇಹವೆಂಬುದೇ ಆತ್ಮ : ಅದರ ಅಂತ್ಯದೊಡನೆ ಆತ್ಮದ ಅಂತ್ಯವೂ ಆಗಿಬಿಡುತ್ತದೆ. ಆದ್ದರಿಂದ ಅದನ್ನು ಕುರಿತು ಮಾಡುವ ಬ್ರಾಹ್ಮಣಸಂತರ್ಪಣೆ ಮುಂತಾದವುಗಳು ವ್ಯರ್ಥ 'ಭಸ್ಮೀಭೂತಸ್ಯ ದೇಹಸ್ಯ ಪುನರಾಗಮನಂ ಕುತಃ?

(2)ದೇಹಾತಿರಿಕ್ತವಾದ ಆತ್ಮವು ಇದೆ ಎಂದಿಟ್ಟುಕೊಂಡರೂ, ಅದು ದೂರದಲ್ಲಿರುವ ಲೋಕಾಂತರಕ್ಕೆ ಹೋಗಿಬಿಡುವುದರಿಂದ ಇಲ್ಲಿ ಆಚರಿಸುವ ಹೋಮ, ಭೋಜನ ಮುಂತಾದವು ಅಲ್ಲಿಯವರೆಗೆ ಹೇಗೆ ತಲುಪುತ್ತದೆ? ಹೀಗೆ ಇಲ್ಲಿ ಊಟ ಮಾಡಿಸಿದರೆ ದೂರದೇಶದಲ್ಲಿರುವವನಿಗೆ ತೃಪ್ತಿಯುಂಟಾಗುವ ಪಕ್ಷಕ್ಕೆ, ಪ್ರಯಾಣಿಕರು ಕೈಯಲ್ಲಿ ಬುತ್ತಿಯನ್ನು ಏಕೆ ಒಯ್ಯಬೇಕು?

(3)ಸತ್ತವರ ಜೀವವು ಇಲ್ಲಿ ಪುಣ್ಯವನ್ನು ಮಾಡಿದ್ದರೆ ಅದರ ಫಲವಾಗಿ ಪರಲೋಕದಲ್ಲಿ ಸ್ವರ್ಗಾದಿ ಸುಖಗಳನ್ನು ಅನುಭವಿಸುತ್ತಿರುತ್ತದೆ: ಅಥವಾ ಜ್ಞಾನಬಲದಿಂದ ಮುಕ್ತಿಯನ್ನು ಹೊಂದಿರಬಹುದು. ಅದಕ್ಕೆ ಈ ಲೋಕದಲ್ಲಿರುವವರು ಕೊಡುವ ಭೋಜನ ತರ್ಪಣ ಮುಂತಾದವುಗಳು ಆವಶ್ಯಕತೆಯಾದರೂ ಏನು?

(4) ಸತ್ತವನು ಪಾಪಿಯಾಗಿದ್ದರೆ ನರಕದಲ್ಲಿ ಕಷ್ಟವನ್ನು ಅನುಭವಿಸಬೇಕಾಗುತ್ತದೆ. ಆತನಿಗೆ ಈ ಲೋಕದಲ್ಲಿರುವವರು ಕೊಡುವ ಅನ್ನಪಾನಾದಿಗಳನ್ನು ಸ್ವೀಕರಿಸುವ ದೇಹೇಂದ್ರಿಂಯಗಳು, ಶಕ್ತಿಸಾಮರ್ಥ್ಯಗಳು ಮತ್ತು ಅವುಗಳಿಂದ ತೃಪ್ತಿಪಡೆಯಲು ಅನುಮತಿಯಿರುತ್ತವೆಯೇ?

(5) ಸತ್ತುಹೋದ ಮನುಷ್ಯನು ಹುಲಿ, ಸಿಂಹ, ತೋಳ ಮುಂತಾದ ಜನ್ಮವನ್ನು ಹೊಂದಿದ್ದಲ್ಲಿ, ಆತನಿಗೆ ಬೇರೆಯವರು ಕೊಡುವ ಮಾನುಷಪ್ರಿಯವಾದ ವಡೆ –

ಪಾಯಸಾದಿಗಳು ಸೇರುತ್ತವೆಯೇ? / ರುಚಿಸುತ್ತವೆಯೇ? ಮತ್ತೆ ಮನುಷ್ಯನಾಗಿಯೇ ಹುಟ್ಟಿದರೂ ಅವನಲ್ಲಿಗೆ ಅವನ್ನು ಒಯ್ಯುವವರಾದರೂ ಯಾರು? ಇಲ್ಲಿಂದಲ್ಲಿಗೆ ಸಾಗಾಣಿಕೆ ಹೇಗೆ? ಒಬ್ಬನು ಊಟ ಮಾಡಿದರೆ ಮತ್ತೊಬ್ಬನಿಗೆ ತೃಪ್ತಿಯಾದೀತೆ?

(6) ಶ್ರಾದ್ಧ ಮಾಡುವುದರಿಂದ ಅದನ್ನು ಆಚರಿಸಿದವನಿಗೆ ಒಳ್ಳೆಯದಾಗುವುದೋ? ಅಥವಾ ಯಾರನ್ನು ಉದ್ದೇಶಿಸಿ ಶ್ರಾದ್ಧ ಮಾಡಲಾಗುತ್ತದೆಯೋ ಆತನಿಗೆ ಒಳ್ಳೆಯದಾಗುತ್ತದೆಯೋ?

ಇವೇ ಮುಂತಾದ ನಾನಾ ಆಕ್ಷೇಪಗಳಿಗೆ ಸಂಕ್ಷಿಪ್ತವಾದ ಉತ್ತರವನ್ನು ಇಲ್ಲಿ ಕೊಡುತ್ತೇವೆ. ದೇಹಾತಿರಿಕ್ತವಾದ ಆತ್ಮವು ಉಂಟೆಂದು ಜ್ಞಾನಿಗಳು ಹೇಳುತ್ತಾರೆ. ಜೀವವು ದೇಹದಲ್ಲಿರುವಾಗ ಹೇಗಿರುತ್ತದೆ? – ದೇಹವನ್ನು ಬಿಟ್ಟಾದ ಬಳಿಕ ಅದರ ಸ್ಥಿತಿಗತಿಗಳುಹೇಗಿರುತ್ತವೆ? - ಎಂಬುದಕ್ಕೆ ಆ ಜ್ಞಾನಿಗಳ ದರ್ಶನವೇ ಪ್ರಮಾಣ, ಜ್ಞಾನದೃಷ್ಟಿಯನ್ನು ಪಡೆದು ಅದನ್ನು ಅರಿತುಕೊಳ್ಳಬೇಕು. ಅದುವರೆಗೂ ಆ ವಿಷಯದಲ್ಲಿ ಆಪ್ತರಾದ ಜ್ಞಾನಿಗಳ ವಚನವೇ ನಮಗೆ ಪ್ರಮಾಣ. ಲೋಕವ್ಯವಹಾರದಲ್ಲಿಯೂ ಕೂಡ ನಮಗೆ ಅರ್ಥವಾಗದೆ ಇರುವ ಅಥವಾ ಎಟುಕದೇ ಇರುವ ವಿಷಯಗಳನ್ನು ಆಪ್ತರ ಮಾತಿನಿಂದಲೇ ನಾವು ಅನೇಕ ಸನ್ನಿವೇಶಗಳಲ್ಲಿ ಅರಿಯುತ್ತೇವಷ್ಟೆ!

ದೇಹಾತಿರಿಕ್ತವಾದ ಆತ್ಮನಿಲ್ಲ ; ದೇಹವೇ ಆತ್ಮ - ಎಂದಿಟ್ಟುಕೊಂಡರೂ ಶ್ರಾದ್ಧಕರ್ಮವು ವ್ಯರ್ಥವಲ್ಲ. ಏಕೆಂದರೆ ಅದರಿಂದ ಸತ್ತುಹೋದ ಬಂಧುಮಿತ್ರಾದಿಗಳ ಸ್ಮರಣೆ ನಮಗೆ ಉಂಟಾಗಿ ಮನಸ್ಸಿಗೆ ಸಂತೋಷವುಂಟಾಗುತ್ತದೆ. ಇತರರಿಗೆ ಭೋಜನ - ದಕ್ಷಿಣೆಗಳನ್ನು ಕೊಡುವುದರಿಂದ ಪದಾರ್ಥಗಳ ಸದ್ವಿನಿಯೋಗವಾಗುತ್ತದೆ.

ಶಬ್ದವನ್ನೂ ರೂಪವನ್ನೂ ಅತ್ಯಂತ ದೂರದವರೆಗೂ (ಬಾಹ್ಯಾಕಾಶ ಗ್ರಹಾಂತರಗಳವರೆಗೂ) ಯೋಗ್ಯವಾದ ಮಾಧ್ಯಮಗಳ ಮೂಲಕ ತಲುಪಿಸುವ ವಿಜ್ಞಾನವನ್ನು ಇಂದು ನಾವು ತಿಳಿದೇ ಇದ್ದೇವೆ. ಹಾಗೆಯೇ ಯೋಗ್ಯವಾದ ಶಕ್ತಿಯನ್ನು ದ್ವಾರವಾಗಿಟ್ಟು ಕೊಂಡು, ಇಲ್ಲಿ ಸಮರ್ಪಿಸುವ ಪದಾರ್ಥಗಳ ಸಾರವು ಲೋಕಾಂತರದವರೆಗೂ ತಕ್ಕ ವಿಜ್ಞಾನವಿದ್ದಲ್ಲಿ ಏಕೆ ತಲುಪಿಸಲ್ಪಡಬಾರದು? ಇಲ್ಲಿ ಸಮರ್ಪಿಸಿದ ಭಕ್ಷ್ಯ ಭೋಜ್ಯಾದಿಗಳು, ಭೋಜನ ಮಾಡುವ ಜ್ಞಾನಿಗಳ ಶಕ್ತಿಯಿಂದ ಮತ್ತು ಮಂತ್ರತಂತ್ರಾದಿಗಳಿಂದ ಮತ್ತು ಕರ್ತೃವಿನ ಶ್ರದ್ಧಾಬಲದಿಂದ 'ಸ್ವಧಾ' ಎಂಬ ಹೊಸ ರೂಪ ತಾಳಿ, ಲೋಕಾಂತರದಲ್ಲಿರುವ ಜೀವಗಳಿಗೆ ಭೋಜ್ಯವಾಗುತ್ತದೆ.

ಗತಿಸಿದ ಜೀವವು ಮುಕ್ತಾತ್ಮನೇ ಆಗಿದ್ದರೆ ಅಥವಾ ಸ್ವರ್ಗಸುಖವನ್ನನುಭವಿಸುತ್ತಿದ್ದರೆ ಆತನಿಗೆ ಈ ಲೋಕದಲ್ಲಿ ಸಮರ್ಪಿಸಲಾಗುವ ಯಾವುದೇ ಭೋಜ್ಯವಸ್ತುವಿನ ಅವಶ್ಯಕತೆಯಿರುವದಿಲ್ಲ.

“ನ ಹಿ ತೇನ ಪಥಾ ತನುತ್ಯಜಃ ತನಯಾವರ್ಜಿತಪಿಂಡಕಾಂಕ್ಷಿಣಃ।”

ಆದರೆ ಅವರನ್ನು ಕುರಿತು ಮಾಡುವ ಶ್ರಾದ್ಧವು, ದೇವತಾ ಪೂಜೆಯ ರೂಪವನ್ನು ತಾಳಿ, ಕರ್ತೃವಿಗೆ ದೇವತಾಪೂಜೆಯ ಫಲವಾದ ಪುರುಷಾರ್ಥಗಳನ್ನು ಕೊಡುತ್ತದೆ.

ಸತ್ತವನು ಪಾಪಿಯಾಗಿದ್ದು ನರಕಾದಿಗಳಲ್ಲಿದ್ದರೆ, ಅವನನ್ನು ಕುರಿತು ಮಾಡುವ ಶ್ರಾದ್ಧದಿಂದ ಆತನಿಗೆ ದುಃಖಶಮನವಾಗಿ ಸುಖಾನುಭವವುಂಟಾಗುತ್ತದೆ. ಶ್ರಾದ್ಧದಲ್ಲಿ ನಿಮಂತ್ರಿತನಾದ ಜ್ಞಾನಿಯ ಅನುಗ್ರಹ ಆಶೀರ್ವಾದಗಳಿಂದಲೂ ಸಾನ್ನಿಧ್ಯದಿಂದಲೂ ದುಃಖ ಪರಿಹಾರ ಮತ್ತು ಸುಖಪ್ರಾಪ್ತಿಗಳು ಉಂಟಾಗುತ್ತವೆ. ಶ್ರಾದ್ಧದಲ್ಲಿ ಜ್ಞಾನಿಯಾದವನನ್ನೂ ಸದಾಚಾರಸಂಪನ್ನನಾದವನನ್ನೂ ಆತ್ಮಗುಣಸಂಪನ್ನನನ್ನೂ ನಿಮಂತ್ರಿಸಬೇಕೆಂದು ಶಾಸ್ತ್ರಗಳು ಹೇಳುತ್ತವೆ. ಜಿತೇಂದ್ರಿಯನಾದವನು ಕೇವಲ ಗಾಯತ್ರೀಜಪನಿರತನಾಗಿದ್ದರೂ ಆತನು ಶ್ರಾದ್ದ ನಿಮಂತ್ರಣಕ್ಕೆ ಯೋಗ್ಯನು.

“ಗಾಯತ್ರೀಮಾತ್ರಸಾರೋಽಪಿ ವರಂ ವಿಪ್ರೋ ಜಿತೇಂದ್ರಿಯಃ।”

ಸತ್ತ ಮನುಷ್ಯನು ಯಾವುದಾದರೂ ಪ್ರಾಣಿಯಾಗಿ ಹುಟ್ಟಿದ್ದರೂ, ಆತನನ್ನು ಕುರಿತು ಮಾಡುವ ಶ್ರಾದ್ಧವು ಸಫಲವಾಗುವುದು. ಶ್ರಾದ್ಧದಲ್ಲಿ ಪಿತೃದೇವತೆಗಳನ್ನು ಪೂಜಿಸಲಾಗುತ್ತದೆ. ಆ ಪೂಜೆಯಿಂದ ಸಂತುಷ್ಟರಾದ ವಸು-ರುದ್ರಾದಿ ಪಿತೃದೇವತೆಗಳು ತಮ್ಮ ಜ್ಞಾನಶಕ್ತಿಗಳಿಂದ, ಇಲ್ಲಿ ಬಡಿಸಿದ ಭೋಜ್ಯಪದಾರ್ಥವು ಆ ಪ್ರಾಣಿಗೆ ಯೋಗ್ಯವಾದ ಆಹಾರ ಸಂತೃಪ್ತಿಯು ಉಂಟಾಗುವಂತೆ ಮಾಡುತ್ತಾರೆ. ತೆಗೆದುಕೊಳ್ಳುವ ಆಹಾರವು ಮುಖ್ಯವಲ್ಲ, ಅದರಿಂದುಂಟಾಗುವ ತೃಪ್ತಿಯು ಮುಖ್ಯವಾದುದು. ಅದನ್ನುಂಟುಮಾಡುವ ಶಕ್ತಿಯು ಪಿತೃದೇವತೆಗಳಿಗುಂಟು ಮತ್ತು ಎಲ್ಲ ದೇವತೆಗಳಿಗೂ ಅಂತರ್ಯಾಮಿಯಾಗಿರುವ ಪರಮಾತ್ಮನಿಗೆ ಆ ಶಕ್ತಿ ಇದ್ದೇ ಇರುತ್ತದೆ.

ಇಲ್ಲಿ ಅಂಚೆಪೆಟ್ಟಿಗೆಯಲ್ಲಿ ಹಾಕಿದ ಪತ್ರವು ಅತಿದೂರದಲ್ಲಿರುವವನಿಗೆ ತಲುಪುವುದನ್ನು ನೋಡುತ್ತೇವೆ. ಅಂಚೆ ವ್ಯವಸ್ಥೆಯು ಸರಿಯಾಗಿದ್ದರೆ, ಸತ್ಯವಾಗಿಯೂ ಇದು ಸಾಧ್ಯವಾಗುತ್ತದೆ. ಅಂಚೆ ತಲುಪಿದ್ದಕ್ಕೆ ಪ್ರಮಾಣದ ಲೇಖನವೂ ಬರುತ್ತದೆ. ಪ್ರಕೃತವಾದ ಶ್ರಾದ್ಧದಲ್ಲಿ ಅದು ವಿಧಿಪೂರ್ವಕವಾಗಿ ನಡೆದಿದ್ದರೆ, ಅಂತೆಯೇ ಇಷ್ಟಾರ್ಥವೂ ಸಿದ್ಧಿಸುತ್ತದೆ. ಇಲ್ಲಿ ಭಗವಂತನ ಮತ್ತು ಆತನ ವಿಭೂತಿಗಳಾದ ಪಿತೃದೇವತೆಗಳ ವ್ಯವಸ್ಥೆಯಿಂದ ಉದ್ದಿಷ್ಟಕಾರ್ಯವು ಸಿದ್ಧಿಸುತ್ತದೆ. ಜ್ಞಾನದೃಷ್ಟಿಯನ್ನು ಪಡೆದರೆ ಪದಾರ್ಥವು ಸಂಬಂಧ ಪಟ್ಟವರನ್ನು ತಲುಪಿದ್ದಕ್ಕೆ, ಪ್ರಮಾಣದ ಗುರುತೂ ತಿಳಿಯುತ್ತದೆ.

ಶ್ರಾದ್ಧವನ್ನು ಮಾಡುವುದರಿಂದ ಯಾರನ್ನು ಕುರಿತು ಅದನ್ನು ಆಚರಿಸಲಾಗುತ್ತದೆಯೋ ಆತನಿಗೆ ಸುಖವುಂಟಾಗುವುದು. ಆತನಿಗೆ ಆ ಸುಖದ ಅವಶ್ಯಕತೆಯಿಲ್ಲದಿದ್ದರೂ, ಶ್ರಾದ್ಧ ಮಾಡಿದವನಿಗೆ ಸುಕೃತವುಂಟಾಗುತ್ತದೆಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಹೀಗೆ ವಿವೇಚನೆ ಮಾಡಿ ನೋಡಿದಾಗ ಶ್ರಾದ್ಧಕರ್ಮವನ್ನು ಅದಕ್ಕೆ ಅಧಿಕಾರಿಯಾದವನು ಅವಶ್ಯವಾಗಿ ಆಚರಿಸಬೇಕು - ಎಂಬುದಾಗಿ ವಿವೇಕಿಗಳಿಗೆ ತಿಳಿಯುತ್ತದೆ. ಶ್ರಾದ್ಧಗಳಲ್ಲಿ ನಾನಾ ರೀತಿಯ ಕಲ್ಪಗಳಿರುತ್ತವೆ. ಇವುಗಳಲ್ಲಿ ಮುಖ್ಯವಾದ ಕಲ್ಪವನ್ನು ಆಚರಿಸಲು ಸಾಧ್ಯವಿಲ್ಲದೇ ಇದ್ದಾಗ, ಅನುಕಲ್ಪಶ್ರಾದ್ಧವನ್ನಾದರೂ ಆಚರಿಸಲೇಬೇಕು. ಆಪತ್‌ಕಾಲದಲ್ಲಿ ಅನುಕಲ್ಪವನ್ನಾಚರಿಸಿದರೂ ಮುಖ್ಯ ಕಲ್ಪದ ಆಚರಣೆಯ ಫಲವೇ ಉಂಟಾಗುತ್ತದೆ. ಆದರೆ ಶ್ರಾದ್ಧದಲ್ಲಿ ಕಾರ್ಪಣ್ಯವನ್ನು ಮಾಡಬಾರದು, ಅತಿ ವೈಭವದಿಂದ ಆಚರಿಸಿ ಶ್ರಾದ್ಧದ ಶುದ್ಧಿಯನ್ನು ಕಡಿಮೆ ಮಾಡಲೂ ಬಾರದು.

ಶ್ರಾದ್ಧದಲ್ಲಿ ಪೂಜೆ ಮಾಡುವುದು ಮುಖ್ಯವಾಗಿ ಪರಮಾತ್ಮನನ್ನು ಮತ್ತು ಅವನ ವಿಭೂತಿಗಳಾದ ವಸು-ರುದ್ರ-ಆದಿತ್ಯ ಮುಂತಾದ ಪಿತೃಗಳನ್ನು. ಅವರು ಸಂತುಷ್ಟರಾದರೆ, ಅವರ ಸಮಸ್ತ ಪುರುಷಾರ್ಥಗಳನ್ನೂ ಕಾಲವಿಶೇಷದಲ್ಲಿ ದಯಪಾಲಿಸುತ್ತಾರೆ.

"ಶ್ರಾದ್ಧಕೃತ್ ಸತ್ಯವಾದೀ ಚ ಗೃಹಸ್ಥೋಽಪಿ ವಿಮುಚ್ಯತೆ ॥"

ಸತ್ಯಸಂಧನನಾಗಿದ್ದು ವಿಧಿಪೂರ್ವಕವಾಗಿ ಶ್ರಾದ್ಧವನ್ನು ಆಚರಿಸಿದರೆ, ಗೃಹಸ್ಥನೂ ಕೂಡ ಮುಕ್ತಿಯನ್ನು ಪಡೆಯುತ್ತಾನೆ. ಶ್ರೀ ಶ್ರೀ ಶ್ರೀರಂಗಪ್ರಿಯ ಶ್ರೀಪಾದಂಗಳಿಗೆ ಅನಂತ ವಂದನೆಗಳು.

ವೇ॥ಬ್ರ॥ಶ್ರೀ ಕೇಶವ ಅವಧಾನೀ ಯವರ ಅಭಿಪ್ರಾಯ:

"ಪಿತೃ ಮಾತ್ರಾದೀನ್ ಮೃತಾನುದ್ದಿಶ್ಯ ವಿಹಿತೇ ದೇಶೇಕಾಲೇ ಪಕ್ವಾನ್ನಾಮಾನ್ನ ಹಿರಣ್ಯಾದೀನಾಮನ್ಯತಮ ದ್ರವ್ಯಸು ವಿಧಿಪೂರ್ವಕಂ ಶ್ರದ್ಧಯಾ ತ್ಯಾಗಃ ಶ್ರಾದ್ಧಮ್"

ಮೃತರಾದ ತಂದೆ, ತಾಯಿ ಮುಂತಾದವರಿಗೋಸ್ಕರ ಶಾಸ್ತ್ರೋಕ್ತವಾದ ದೇಶ ಹಾಗೂ ಸಮಯಗಳಲ್ಲಿ ಬೇಯಿಸಿದ ಅನ್ನ, ಅನ್ನಸಾಮಗ್ರಿಗಳು, ಹಿರಣ್ಯ ಇವುಗಳಲ್ಲಿ ಯಾವುದಾದರೊಂದು ದ್ರವ್ಯವನ್ನು ವಿಧಿಯಲ್ಲಿ ತಿಳಿಸಿರುವಂತೆ ಶ್ರದ್ಧೆಯಿಂದ ಕೊಡುವುದಕ್ಕೆ ಶ್ರಾದ್ಧವೆಂದು ಹೆಸರು.

ಎಲ್ಲ ಕರ್ಮಗಳಿಗೂ ಶ್ರದ್ಧೆಯು ಅವಶ್ಯಕವೆ, ಎಲ್ಲ ಕರ್ಮಗಳಂತೆ ಇಲ್ಲಿಯೂ

ಅಗ್ನಿಯಲ್ಲಿ ಹೋಮ ನಡೆಸಿದರೂ ಇಲ್ಲಿ ಒಂದು ವಿಶೇಷವಿದೆ. "ಶ್ರಾದ್ಧೇ ಪಿತರೋ ದೇವತಾಃ ಬ್ರಹ್ಮಣಸ್ತು ಆಹವನೀಯಾರ್ಥೇ" ಎಂಬ ಧರ್ಮಸೂತ್ರದಂತೆ ಶ್ರಾದ್ಧದಲ್ಲಿ ದೇವತೆಗಳು ಪಿತೃಗಳಾದರೆ, ಆಹವನೀಯಾಗ್ನಿಯ ಸ್ಥಾನದಲ್ಲಿ ಬ್ರಾಹ್ಮಣರು ಇರುವರು. ಆದ್ದರಿಂದ ಉಳಿದ ಎಲ್ಲ ಕರ್ಮಗಳಲ್ಲಿ ದೇವತೆಗಳ ಆರಾಧನೆ ಪರೋಕ್ಷವಾಗಿ ನಡೆದರೆ, ಇಲ್ಲಿ ಪ್ರತ್ಯಕ್ಷವಾಗಿ ನಡೆಯುವುದು. ಅಂ-ದರೆ ಪಾದಪ್ರಕ್ಷಾಳನೆಯಿಂದ ಮೊದಲ್ಗೊಂಡು ಎಲ್ಲಾ ಉಪಚಾರಗಳೂ ಪ್ರತ್ಯಕ್ಷ ಬ್ರಾಹ್ಮಣರೂಪೀ ಪಿತೃಗಳಿಗೆ ನಡೆಯುವುದರಿಂದ ಇಲ್ಲಿ ಶ್ರದ್ಧೆಯು ಪೂರ್ಣ ತುಂಬಿಕೊಂಡಿರಬೇಕು. ಆದ್ದರಿಂದ ಶ್ರಾದ್ಧಕ್ಕೆ ಬ್ರಾಹ್ಮಣರನ್ನು ನಿಮಂತ್ರಿಸುವಾಗ ಆದರಣೀಯ ಗೌರವಾರ್ಹರನ್ನೇ ನಿಮಂತ್ರಿಸಬೇಕು. ಶಾಸ್ತ್ರದಲ್ಲಿ ನಿಷೇಧಿಸಿರುವ ಕರ್ಮಗಳನ್ನು ಮಾಡುತ್ತಿರುವ, ಮಹಾಪಾಪಗಳಿಗೆ ಗುರಿಯಾಗಿರುವ, ಸಂಧ್ಯಾದಿ ನಿತ್ಯಕರ್ಮ ರಹಿತರಾದ, ನಾಸ್ತಿಕರಾದ, ಪ್ರತಿವಚನವನ್ನು ಹೇಳಲು ಬಾರದ ಬ್ರಾಹ್ಮಣರನ್ನು ನಿಮಂತ್ರಿಸಬಾರದು.

ಶಾಸ್ತ್ರೋಕ್ತ ಕರ್ಮಾನುಷ್ಠಾನ, ತತ್ಪರರೂ, ವೇದಾಧ್ಯಾಯಿಗಳೂ, ಭಗವದ್ಭಕ್ತರೂ, ಸದಾಚಾರಸಂಪನ್ನರೂ, ವೇದಾಂತಜ್ಞಾನಸಂಪನ್ನರೂ ಆದಂತಹ ಒಳ್ಳೆಯ ನಡತೆಯ ಬ್ರಾಹ್ಮಣರನ್ನು ನಿಮಂತ್ರಿಸಿ ಅವರ ಮೂಲಕ ಶಾಸ್ತ್ರೋಕ್ತ ರೀತಿಯಲ್ಲಿ ಶ್ರದ್ಧೆಯಿಂದ ಪಿತೃಗಳನ್ನು ಆರಾಧಿಸುವ ಕರ್ಮಕ್ಕೆ ಶ್ರಾದ್ಧವೆಂದು ಹೆಸರು.

ಶ್ರಾದ್ಧದ ಉದ್ದೇಶ: ಶ್ರಾದ್ಧ ಸಂಕಲ್ಪದಲ್ಲಿಯೇ ತಿಳಿಸಿರುವಂತೆ ಮೃತರಾದ ಪಿತೃಮಾತ್ರದಿಳಿಗೆ ಕೊನೆಯಿಲ್ಲದ ತೃಪ್ತಿಯುಂಟಾಗುವುದಕ್ಕೂ, ನಾಶವಿಲ್ಲದ ಪುಣ್ಯಲೋಕವು ದೊರಕುವುದಕ್ಕೋಸ್ಕರವೂ ಪುತ್ರಾದಿ ಅಧಿಕಾರಿಗಳು ಶ್ರಾದ್ಧವನ್ನು ಮಾಡಬೇಕು.

ತನಗೆ ಜನ್ಮವಿತ್ತಂತಹ, ಪ್ರೀತಿಯಿಂದ ಸಾಕಿ-ಸಲಹಿ ಬೆಳೆಸಿದ ತನ್ನ ಮಾತಾಪಿತೃಗಳಿಗೋಸ್ಕರ ಗೊತ್ತಾದ ದಿನಗಳಲ್ಲಿ ಶ್ರಾದ್ಧ ಮಾಡಿ ತನ್ನ ಕೃತಜ್ಞತೆಯನ್ನು ಪ್ರಕಟಿಸುವುದು, ಪುತ್ರಾದಿಗಳು ಮಾಡುವ ಶ್ರಾದ್ಧವು ಪಿತೃಗಳಿಗೆ ಹೇಗೆ ತೃಪ್ತಿಕರವಾಗುವುದು ಎಂದು ನಮ್ಮ ಲೌಕಿಕ ಬುದ್ದಿಯಿಂದ ತರ್ಕಿಸಬಾರದು. ಸಂಪ್ರದಾಯದಲ್ಲಿ ಹೀಗೊಂದು ಶ್ಲೋಕವಿದೆ-

"ಅಗ್ನೌ ಹುತಂ ತು ದೇವಾನಾಂ ಸ್ವಃಸ್ಥಾನಾಂ ವಿಪ್ರಭೋಜನಂ
ದಕ್ಷಿಣಾಭ್ಯೋ ಮನುಷ್ಯಾಣಾಂ ಅಸುರೇ ಭೂರಿ ಭೋಜನಂ।
ಯಮಸ್ಥಾನೇ ಪಿಂಡದಾನಂ ನರಕೇ ವಿಕಿರಂ ತಥಾ
ಪ್ರೇತಸ್ಥಾನಾಂ ವಾಯಸಂ ಚ ಸಪ್ತೈತೆ ಪಿತೃತೃಪ್ತಯಃ ॥"

ದೇವಲೋಕದಲ್ಲಿದ್ದ ಪಿತೃಗಳಿಗೆ ಶ್ರಾದ್ಧದಲ್ಲಿನ ಪಾರ್ವಣಹೋಮದಿಂದಲೂ,

ಸ್ವರ್ಗಲೋಕ ದಲ್ಲಿದ್ದವರಿಗೆ ಬ್ರಾಹ್ಮಣಭೋಜನದಿಂದಲೂ, ಮನುಷ್ಯರೂಪದಲ್ಲಿದ್ದವರಿಗೆ ದಕ್ಷಿಣೆಯಿಂದಲೂ, ಅಸುರರೂಪದಲ್ಲಿದ್ದವರಿಗೆ ಇಷ್ಟಬಂಧುಗಳ ಭೋಜನದಿಂದಲೂ, ಯಮಲೋಕದಲ್ಲಿದ್ದವರಿಗೆ ಪಾರ್ವಣ ಪಿಂಡದಿಂದಲೂ, ನರಕದಲ್ಲಿದ್ದವರಿಗೆ ವಿಕಿರದಿಂದಲೂ, ಪ್ರೇತ ರೂಪದಲ್ಲಿದ್ದವರಿಗೆ ವಾಯಸಪಿಂಡದಿಂದಲೂ ತೃಪ್ತಿಯಾಗುವುದು. ಹೀಗೆ ಶ್ರಾದ್ಧದಲ್ಲಿನ ಒಂದೊಂದು ಕ್ರಿಯೆಯೂ ಒಂದೊಂದು ಬಗೆಯಿಂದ ಪಿತೃಗಳಿಗೆ ತೃಪ್ತಿಕರವಾಗುವುದಾದರೆ ಸಮಗ್ರ ಶ್ರಾದ್ಧಕರ್ಮದಿಂದ ಮೃತರಾದ ಮಾತಾಪಿತ್ರಾದಿಗಳಿಗೆ ಅಕ್ಷಯ್ಯವಾದ ತೃಪ್ತಿಯಾಗುವುದು ಎಂದು ಹೇಳತಕ್ಕದ್ದೇನಿದೆ?

ಹೀಗೆ ಶ್ರದ್ಧೆಯಿಂದ ವಸುರುದ್ರಾದಿತ್ಯರೂಪದಿಂದ ಪಿತೃದೇವತೆಗಳನ್ನು ಆರಾಧಿಸಿ, ಅವರನ್ನು ತೃಪ್ತಿಪಡಿಸಿ ಅವರ ಅನುಗ್ರಹದಿಂದ ಎಲ್ಲ ಶ್ರೇಯಸ್ಸನ್ನೂ ಹೊಂದುವುದೇ ಶ್ರಾದ್ಧದ ಉದ್ದೇಶವು.

ಈ ರೀತಿಯಲ್ಲಿ ಶ್ರಾದ್ದದ ಉದ್ದೇಶಗಳನ್ನು ತಿಳಿಸಿಕೊಟ್ಟಂತಹ ಮ.ರಾ.ಶ್ರೀ. ಕೇಶವ ಅವಧಾನೀಗಳ ಪಾದಪದ್ಮಂಗಳಿಗೆ ನನ್ನ ನಮಸ್ಕಾರಗಳು.

ವೇ॥ಬ್ರ॥ಶ್ರೀ ಬಿ.ಎಸ್. ಕಪನಿಪತಯ್ಯ ನವರ ಅಭಿಪ್ರಾಯ:

ಶ್ರದ್ಧೆಯಿಂದ, ವಿಧಿಪೂರ್ವವಾಗಿ, ದೇಶ, ಕಾಲ, ಪಾತ್ರಗಳಿಗೆ, ತಕ್ಕಂತೆ, ಪಿತೃವರ್ಗವನ್ನು ಉದ್ದೇಶಿಸಿ, ವಿಪ್ರರಿಗೆ, ದಾನ ಮಾಡುವುದೇ ಶ್ರಾದ್ಧವು. ಈ ಪಿತೃವರ್ಗವೆಂಬುದು ಪರಬ್ರಹ್ಮದ 'ಈಕ್ಷಣ' ದಿಂದಲೂ, ಮತ್ತು ಅನಾದಿ ಜೀವರುಗಳ, ಅನಾದಿ ಕರ್ಮಗಳ ಫಲೋನ್ಮುಖತೆಯಿಂದಲೂ, ಸೃಷ್ಟಿಹೊಂದಿ, ಪ್ರಥಮದಲ್ಲಿ, ವ್ಯಷ್ಟಿ ಸಮಷ್ಟಿ ರೂಪದಲ್ಲಿ, ಸಂಸಾರಮಂಡಲವನ್ನೆಲ್ಲಾ, ಹಿರಣ್ಯಗರ್ಭರೂಪದಿಂದ ವ್ಯಾಪಿಸಿ, ಅನಂತರ ಚತುರ್ಮುಖ ಬ್ರಹ್ಮನಾಗಿ ತೋ–ರಿತು. ಈ ಬ್ರಹ್ಮನಿಗೆ ಮಾನಸ ಪುತ್ರರಾಗಿ, ಸಪ್ತರ್ಷಿಗಳೂ, ಅಮೂರ್ತ, ಅಪ್ರಕಾಶ, ಜ್ಯೋತಿಷ್ಮಂತರೆಂಬ, ಗಣಗಳೂ ವಸು, ರುದ್ರ, ಆದಿತ್ಯರೂ, ಅಷ್ಟದಿಕ್ಪಾಲಕರೂ, ಜಯಾದಿ ದ್ವಾದಶ ದೇವತೆಗಳೂ, 'ಸೋಮಪ'ರೆಂಬ ಸುಮನಸಲೋಕದ ಪಿತೃಗಳೂ, ಅಗ್ನಿಪುತ್ರನಾದ ಅಂಗಿರೋಮುನಿಯ ವಂಶಜರೂ, ಪ್ರಜಾಪತಿಗಳೂ, ಮನುಗಳೂ, ಹತ್ತುಜನ ವಿಶ್ವೇದೇವರುಗಳೂ, ಕಾವ್ಯ, ಉಪ ಹೂತ, ಅಜ್ಯಪ, ಸುಕಾಲರೆಂಬ ಪಿತೃಗಣಗಳೂ ಆವಿರ್ಭವಿಸಿದರು. ಇವರಿಗೆ "ಲೋಕಪಿತೃ" ಗಳೆಂದು ಹೆಸರು. ಇವರು ವಾಯುರೂಪರೂ, ಯೋಗಚಕ್ಷುಗಳೂ ಆಗಿ, ಸರ್ವತ್ರ ಸಂಚರಿಸುತ್ತಾ, ಮೂರ್ತ, ಅಮೂರ್ತರೆನಿಸಿರುವರು. ಇವರಿಗಿಂತ ಬೇರೆ, ಭೂಲೋಕದಲ್ಲಿ ಜನ್ಮವೆತ್ತಿ, ದೇಹಾವಸಾನಾನಂತರ, ಪ್ರೇತರೂಪ ಕಳೆದಮೇಲೆ, ಸ್ವರ್ಗಲೋಕವನ್ನು ಸೇರುವಂತಹ ಎರಡು ವಿಧದ "ಲೌಕಿಕ" ಪಿತೃಗಳಿರುವರು,

ಮೊದಲನೆಯವರು "ಬಾರ್ಹಿಷದವರು" ಇವರು ಭೂಲೋಕದಲ್ಲಿ ತಾವು ಆಚರಿಸಿದ ಯಜ್ಞಯಾಗಾದಿಗಳ ಆಚರಣೆಯಿಂದಲೂ, ಸ್ವಧರ್ಮ ಪರಿಪಾಲನೆಯಿಂದಲೂ, ಸ್ವರ್ಗವನ್ನು ಸೇರಿ, ಪ್ರಳಯದವರೆಗೂ, ಅಲ್ಲಿ ಇರುವರು. ಎರಡನೆಯವರು "ಅಗ್ನಿಷ್ವಾತ್ತರು". ಇವರು ಭೂಲೋಕದಲ್ಲಿ ತಮ್ಮ ತಮ್ಮ ಆಶ್ರಮ ಧರ್ಮಗಳಲ್ಲಿ ನಿರತರಾಗಿದ್ದು, ವೇದಾಂತ ಚಿಂತನಾಪರರಾಗಿ, ತೀರ್ಥ ಯಾತ್ರಾದಿಗಳಿಂದ ಹೆಚ್ಚು ಪುಣ್ಯಾರ್ಜನೆ ಮಾಡಿ, ತತ್ಫಲವಾಗಿ, ಸ್ವರ್ಗವನ್ನು ಸೇರಿ, ಅಲ್ಲಿ ತಮ್ಮ ಪುಣ್ಯ ತೀರುವವರೆಗೂ ಇರುವರು.

ಈ ಎರಡು ವಿಧದ ಪಿತೃಗಳೂ, ಸ್ವರ್ಗದಲ್ಲಿ, ತಪೋಧ್ಯಾನಾದಿಗಳನ್ನು ಆಚರಿಸುತ್ತಾ ಬಂದರೆ, ಅಲ್ಲಿಂದ ಮುಂದೆ ವೈಕುಂಠಕ್ಕೂ, ಅನಂತರ ಹಿರಣ್ಯಗರ್ಭನ ಲೋಕಕ್ಕೂ ಹೋಗಬಹುದು. ಇಲ್ಲವಾದಲ್ಲಿ ತಮ್ಮ ಪುಣ್ಯ ತೀರುತ್ತಲೇ ಪುನಃ ಭೂಲೋಕದಲ್ಲಿ ಜನಿಸಿ, ಆತ್ಮಜ್ಞಾನ ಸಂಪಾದನೆಗೆ ಪ್ರಯತ್ನಿಸಬೇಕು. ಇಂಥ ಎರಡು ವಿಧದ ಪಿತೃಗಳಿಗೂ ಇವರ ಪುತ್ರರು ಆಚರಿಸುವ ಶ್ರಾದ್ಧ ಕರ್ಮಗಳು, ಇವರುಗಳ ಮನಸ್ಸಿನ ಮೇಲೆ, ಒಂದು ಅಪೂರ್ವ ಪರಿಣಾಮವನ್ನು ಬೀರಿ, ಅದರಿಂದ ಇವರ ಮನಸ್ಸು ಸತ್ವಗುಣ ಪ್ರಧಾನವಾಗಿ ಮಾರ್ಪಟ್ಟು, ಇವರು ಸ್ವರ್ಗದಲ್ಲಿ ತಪೋಧ್ಯಾನ ನಿರತರಾಗಿರುವಂತೆ ಪ್ರೋತ್ಸಾಹಿಸುವವು. ಇದರಿಂದ ಇವರು ಸ್ವರ್ಗವನ್ನು ಅತಿಕ್ರಮಿಸಿ, ಹಿರಣ್ಯಗರ್ಭನ ಲೋಕಕ್ಕೆ ಹೋಗಿ ಅಲ್ಲಿ ತಮ್ಮ ಸ್ವಪ್ರಯತ್ನದಿಂದ "ಕ್ರಮಮುಕ್ತಿ"ಯನ್ನು ಪಡೆಯಬಹುದು. ಸತ್ತು ಪುನಃ ಭೂಲೋಕದಲ್ಲಿ ಜನ್ಮವೆತ್ತಿರುವ ಪಿತೃಗಳಿಗೆ, ಹಿಂದಿನ ಜನ್ಮದ ಅರಿವು ಇಲ್ಲವಾದರೂ, ಹಿಂದಿನ ಜನ್ಮದ ಪುತ್ರರು ಮಾಡುವ ಶ್ರಾದ್ಧಾಚರಣೆಯಿಂದ, ಒಂದು ಅಪೂರ್ವಶಕ್ತಿ ಉದ್ಭವಿಸಿ, ಅದು ಇವರು ಈಗ ಪಡೆದಿರುವ ದೇಹಕ್ಕೆ ಇಚ್ಛೆಯಾದ ಆಹಾರ ರೂಪವಾಗಿ ಪರಿಣಮಿಸಿ, ವಸು –ರುದ್ರ – ಆದಿತ್ಯ ರೂಪಿಗಳಾದ "ಲೋಕ ಪಿತೃಗಳ" ಮೂಲಕ, ಇವರಿಗೆ ತಲುಪಿ, ತಾತ್ಕಾಲಿತವಾಗಿ, ಇವರಿಗೆ ತೃಪ್ತಿಯನ್ನುಂಟು ಮಾಡುತ್ತದೆ. "ಲೋಕ ಪಿತೃಗಳು" ಭೂಲೋಕದಲ್ಲಿ ಜನ್ಮವೆತ್ತಿರುವ ಪಿತೃಗಳ ಶ್ರಾದ್ಧದಲ್ಲಿ ಪ್ರತಿನಿಧಿಸುವರು, ಭೂಲೋಕದ ಕಾಲಮಾನವನ್ನೇ ಹೊಂದಿರುವ ನರಕದಲ್ಲಿ, ಯಾತನೆ ಅನುಭವಿಸುತ್ತಿರುವ ಪಿತೃಗಳಿಗೆ ಭೂಲೋಕದಲ್ಲಿ ಅವರಿಗೆ ಹಿಂದಿನ ಜನ್ಮದ ಅವಸಾನದ ದಿನದಲ್ಲಿಯೂ ಮತ್ತು ಪಿತೃಪಕ್ಷದಲ್ಲಿಯೂ, ಅಮಾವಾಸ್ಯೆ ದಿನಗಳಲ್ಲೂ, ಶಿಕ್ಷೆ ತಪ್ಪಿ, ಹೊರಬರಲು ಅವಕಾಶವಿರುವುದು ಮತ್ತು ಆಗ ಅವರಿಗೆ, ಆ ದಿನ ಹಿಂದಿನ ಜನ್ಮದ ಸ್ಮರಣೆಯು ಬರುವುದು. ಆ ದಿನ ಅವರು ವಾಯು ರೂಪದಿಂದ ಹೊರಗೆ ಬಂದು, ಕ್ಷುತ್ಪಿಪಾಸೆ ಗಳಿಂದ ಬಳಲುತ್ತಾ ತಮ್ಮ ತಮ್ಮ ಪುತ್ರರ ಮನೆಯ ಬಾಗಿಲಲ್ಲಿ ನಿಂತು, ಶ್ರಾದ್ಧವನ್ನು ಅಪೇಕ್ಷಿಸುತ್ತಾ, ಹಂಬಲಿಸುವರು. ಸೂರ್ಯನು ಅಸ್ತಂಗತನಾಗುವವರೆಗೂ ಆಪಿತೃಗಳು ತಮ್ಮ ತಮ್ಮ ಮನೆಗಳ ಬಾಗಿಲಲ್ಲಿ ಕಾದು ಶ್ರಾದ್ಧಾಚರಣೆ ನಡೆಯದಿದ್ದರೆ, ನಿರಾಶರಾಗಿ

ಹಸಿವು ಬಾಯಾರಿಕೆಗಳಿಂದ ಸಂಕಟ ಪಡುತ್ತಾ ನಿಟ್ಟುಸಿರು ಬಿಟ್ಟುಕೊಂಡು, ತಮ್ಮ ವಂಶಜರನ್ನು ನಿಂದಿಸುತ್ತಾ ಪುನಃ ಶಿಕ್ಷೆ ಅನುಭವಿಸಲು ನರಕಕ್ಕೆ ಹಿಂದಿರುಗುವರು. ಹಾಗಲ್ಲದೆ, ಶ್ರಾದ್ಧಾಚರಣೆ ನಡೆದರೆ ಆ ಪಿತೃಗಳು ಕರುಣಾಮಯರೂ, ಸರ್ವ ವ್ಯಾಪಿಗಳೂ ಆದ ವಸು – ರುದ್ರ – ಆದಿತ್ಯರುಗಳನ್ನೂ, ವಿಶ್ವೇದೇವರುಗಳನ್ನೂ, ಅನುಸರಿಸಿಕೊಂಡು ನಿಮಂತ್ರಿತ ವಿಪ್ರರಲ್ಲಿ ಆವಾಹಿತರಾಗಿ ತೃಪ್ತಿ ಪಡುವರು. ಇಷ್ಟಲ್ಲದೆ ಶ್ರಾದ್ಧಾಚರಣೆಯಿಂದ ಉದ್ಭವಿಸುವ ಅಪೂರ್ವ ಶಕ್ತಿಯು ಆ ಪಿತೃಗಳು ನರಕದಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿರುವಾಗ ಅವರ ಮನಸ್ಸಿನ ಮೇಲೆ, ತನ್ನ ಪ್ರಭಾವವನ್ನು ಬೀರಿ, ಆ ಮನಸ್ಸು ಸತ್ವಗುಣ ಪ್ರಧಾನವಾಗುವಂತೆ ಮಾಡಿ, ತತ್ಪ್ರಭಾವದಿಂದ ಅವರು ದೇಹಾಭಿಮಾನವನ್ನು ತಾತ್ಕಾಲಿಕವಾಗಿ ಮರೆತವರಾಗಿ, ತಮ್ಮ ಯಾತನಾ ದೇಹಕ್ಕೆ ಉಂಟಾಗುವ ಯಾತನೆಯನ್ನು ಹೊಂದದೇ ಇರುವರು. ಸ್ವರ್ಗದಲ್ಲಿರುವ ಅಗ್ನಿಷ್ವಾತ್ರ, ಬರ್ಹಿಷದ ಪಿತೃಗಳಿಗೆ ಪುತ್ರರು, ವರ್ಷಕ್ಕೆ ಒಂದು ದಿನ ಕೊಡುವ ಕವ್ಯಾದಿಗಳು, ಅವರ ಅಲ್ಲಿನ ಕಾಲಮಾನರೀತ್ಯಾ (ಮಾನವರ ಒಂದು ವರ್ಷ ಸ್ವರ್ಗದಲ್ಲಿನ ಪಿತೃಗಳಗೆ ಒಂದು ದಿನ) ಪ್ರತಿದಿನವೂ ಸಂದಂತೆ ಆಗುವುದು. ನರಕಲೋಕದಲ್ಲಿ ಶಿಕ್ಷೆ ಅನಿಭವಿಸಿದ ಜೀವಿಗಳು ಪುನಃ ಭೂಲೋಕದಲ್ಲಿ ಜನ್ಮ ತಾಳಬೇಕು. ಅಲ್ಲಿ ಸತ್ಕರ್ಮಗಳನ್ನು ಮಾಡಿ ಅಗ್ನಿಷ್ವಾತ್ವರೋ, "ಬರ್ಹಿಷದರೋ" ಆಗಿ ಸ್ವರ್ಗಾದಿಗಳಿಗೆ ಹೋಗಬೇಕು. ಇಲ್ಲದಿದ್ದರೆ, ಪುನರ್ಜನ್ಮ, ನರಕ ಶಿಕ್ಷೆಗಳು ಅವರಿಗೆ ತಪ್ಪಿದ್ದಲ್ಲ.

ಅಗ್ನಿಗೆ ಉಷ್ಣವೂ, ಸೂರ್ಯನಿಗೆ ಕಿರಣವೂ, ಚಂದ್ರನಗೆ ಬೆಳದಿಂಗಳೂ, ಹೇಗೆ ಸ್ವಭಾವವೂ, ಸಿರ್ಥವೂ ಆಗಿರುವುದೋ ಹಾಗೆಯೇ ಪರಬ್ರಹ್ಮನಿಗೆ ಪರಾಶಕ್ತಿಯು ಸ್ವಭಾವವೂ, ಸ್ಥಿರವೂ ಆಗಿರುವುದು.

ಸಕಲ ಲೋಕದ ಸೃಷ್ಟಿಗೂ ಆದಿಕಾರಣವಾದ ಈ ಪರಾಶಕ್ತಿಯು "ಲೋಕಪಿತೃ"ವಾಗಿ ಬ್ರಹ್ಮಲೋಕಕ್ಕೂ ಮೇಲೆ ಏರುವ ಸುಮನಸ ಲೋಕದಲ್ಲಿ ಇರುವಳು. ಈ ದೇವಿಯೇ ಪರಬ್ರಹ್ಮ ಶಕ್ತಿರೂಪವಾದ "ಲೋಕ ಪಿತೃ" "ಸೋಮ" ಪಿತೃಪೀತರೆಂಬ ಆದಿಲೋಕದ ಪಿತೃರೂಪದಿಂದ ಹಿಡಿದು ನಮ್ಮಗಳ ಮಾತಾ ಪಿತೃಗಳವರೆಗಿನ ಎಲ್ಲಾ ಪಿತೃಗಣಗಳನ್ನು ನಾವು ಶ್ರಾದ್ಧಕಾಲದಲ್ಲಿ "ಪಿತೃಣಾಂ ಅನುಪೂರ್ವೇಣ ಸರ್ವೇಷಾಂ" ಎಂಬಂತೆ ಒಂದಲ್ಲ ಒಂದು ರೀತಿಯಲ್ಲಿ ಎಲ್ಲರನ್ನೂ ಆವಾಹಿಸುತ್ತೇವೆ. ಶ್ರಾದ್ಧಕರ್ಮವನ್ನು ಶ್ರದ್ದೆ ಮತ್ತು ಭಕ್ತಿಯಿಂದ ನೆರವೇರಿಸಿದರೆ ತಾನು

ಆಯುಃ ಪ್ರಜಾಂ ಧನಂ ವಿದ್ಯಾಂ। ಸ್ವರ್ಗಂ ಮೋಕ್ಷಂ ಸುಖಾನಿ ಚ ।
ಯಚ್ಛಂತಿ ಪಿತರಃ ಪುಷ್ಟಿಂ । ಪ್ರಜಾಶ್ಚ ವಿಪುಲಾಸ್ತಥಾ ।
ಸ್ವರ್ಗಮಾರೋಗ್ಯವೃದ್ಧಿಂಚ । ಯದನ್ಯದಪಿ ಚೇಪ್ಸಿತಂ ।

ಎಂಬಂತೆ ಪರಾಶಕ್ತರೂಪವಾದ ಲೋಕಪಿತೃಗಳಿಂದ, ಪುಷ್ಟಿಯನ್ನೂ, ಪ್ರಜೆಗಳನ್ನೂ, ಸ್ವರ್ಗವನ್ನೂ, ವೃದ್ಧಿಯನ್ನೂ ಮತ್ತು ಇಷ್ಟವಾದುದೆಲ್ಲವನ್ನೂ, ಮೋಕ್ಷವನ್ನೂ ಸಹ ಪಡೆಯುವನು. ಈ ಶ್ರಾದ್ಧಕರ್ಮವು ನಮ್ಮ ಮಾತಾಪಿತೃಗಳ ವ್ಯಾಜದಿಂದ ಆಚರಿಸುವ ಆದಿಕಾರಣಳಾದ ಆ ಎಲ್ಲಕ್ಕೂ ಪರಾಶಕ್ತಿ ಪೂಜೆಯೇ ಆಗಿರುತ್ತದೆ.

ಈ ರೀತಿಯಲ್ಲಿ ನಮಗೆ ಅತ್ಯುತ್ತಮ ವಿಚಾರಗಳನ್ನು ತಿಳಿಸಿಕೊಟ್ಟಂತಹ ವೇ॥ ಬ್ರ॥ಶ್ರೀ. ಬಿ. ಎಸ್. ಕಪನೀಪತಯ್ಯರವರ ಪಾದಪದ್ಮಂಗಳಿಗೆ ನನ್ನ ನಮಸ್ಕಾರಗಳು.

ಜ್ಯೋತಿಷ್ಯ ಶಾಸ್ತ್ರದಲ್ಲಿ ಪಿತೃಕರ್ಮದ ವಿವರಣೆ

ಜ್ಯೋತಿಷ್ಯ ಶಾಸ್ತ್ರದಲ್ಲಿಯೂ ಸಹ ಜಾತಕವನ್ನು ನಾವು ವಿಮರ್ಷಿಸುವಾಗ ಅದರಲ್ಲಿ ಮಾತೃಶಾಪ, ಪಿತೃಶಾಪ, ಸರ್ಪಶಾಪ, ಭ್ರಾತೃಶಾಪ, ಮಾತುಲಶಾಪ, ಸೋದರಶಾಪ, ಬ್ರಹ್ಮಶಾಪ, ಪತ್ನಿಶಾಪ (ಪೂರ್ವಜನ್ಮ), ಪ್ರೇತಶಾಪ, ಮುಂತಾದ ವಿಚಾರಗಳನ್ನು ತಿಳಿಯಲು ಸಾಧ್ಯವಾಗುತ್ತದೆ.

ಈ ರೀತಿಯ ಶಾಪಗಳಿಗೆ ಪರಿಹಾರಗಳೆಂದರೆ:-

1. ಸರ್ಪಶಾಪಕ್ಕೆ ನಾಗಪೂಜೆ, ನಾಗಪ್ರತಿಷ್ಠೆ, ದಶದಾನಗಳು ಮುಂತಾದವುಗಳು.

2. ಬ್ರಾತೃಶಾಪ ವಿಮೋಚನೆಗೆ ವಿಷ್ಣು ಕೀರ್ತನೆ, ಕಾವೇರಿನದಿ ತೀರದಲ್ಲಿ ವಿಷ್ಣುಕ್ಷೇತ್ರದಲ್ಲಿ ನಿಕಟಚಾಂದ್ರಯಾನ ವ್ರತ, ಅಶ್ವಥ್ಥವೃಕ್ಷ ಉಪನಯನ, ವಿವಾಹ, 10 ಆಕಳ ದಾನ ಅವಶ್ಯಕ.

3. ಪಿತೃಶಾಪ ವಿಮೋಚನೆಗೆ ಗಯಾಶ್ರಾದ್ಧ, ಸಾವಿರ ಅಥವಾ ಹತ್ತು ಸಾವಿರ ಬ್ರಾಹ್ಮಣರ ಭೋಜನ ಅಥವಾ ಕನ್ಯಾದಾನ, ಕರುಸಹಿತ ಆಕಳು ದಾನ ಮಾಡಬೇಕು.

4. ಮಾತುಲಶಾಪಕ್ಕೇ ವಿಷ್ಣು ಪ್ರತಿಮೆ ಸ್ಥಾಪನೆ, ಕೆರೆ, ಬಾವಿ, ಸರೋವರ ನಿರ್ಮಾಣ ಮುಂತಾದವುಗಳನ್ನು ಮಾಡಬೇಕು.

5. ಯಾವುದೇ ಕಾರಣಕ್ಕೂ ಬ್ರಾಹ್ಮಣರಗೆ ಅವಮಾನ ಮಾಡಿದ ಶಾಪ ಪರಹಾರಕ್ಕಾಗಿ ಚಾಂದ್ರಾಯಣ ವ್ರತ (ಕಾವೇರಿ ತೀರದಲ್ಲಿ), ಸುರ್ವಣ ಸಹಿತ ಪಂಚರತ್ನ ದಾನ ಮಾಡಿ ಬ್ರಾಹ್ಮಣರಿಗೆ ಅನ್ನಧಾನವನ್ನು ಮಾಡಬೇಕು.

6. ಪತ್ನಿಶಾಪ (ಪೂರ್ವಜನ್ಮ) ಪರಹಾರಕ್ಕಾಗಿ, ಕನ್ಯಾಧಾನ ಅಥವಾ ಲಕ್ಷ್ಮೀನಾರಾಯಣ ಸುವರ್ಣ ಪ್ರತಿಮಾದಾನ, ಬ್ರಾಹ್ಮಣರಿಗೆ ಆಕಳದಾನ, ಹಾಸಿಗೆ ಹಾಗೂ ವಸ್ತ್ರ ದಾನದಿಂದ ಶಭದಾಯಕ.

7. ಪ್ರೇತಶಾಪದಿಂದ ವಿಮೋಚನೆಗಾಗಿ ಗಯಾಶ್ರಾದ್ಧ, ಸರ್ವಶ್ರೇಷ್ಠವಾದ ರುದ್ರಾಭಿಷೇಕ ಅಥವಾ ಬ್ರಹ್ಮಮೂರ್ತಿ ದಾನ, ಆಕಳ ದಾನ, ಬೆಳ್ಳಿಪಾತ್ರಾದಾನ, ನೀಲಮಣಿ ದಾನ, ಬ್ರಾಹ್ಮಣ ಭೋಜನ ಹಾಗೂ ಯತೇಚ್ಛ ದಕ್ಷಿಣೆ ದಾನದಿಂದ ಶುಭದಾಯಕ.

ನಿಃಸಂತಾನ ದೋಷಕ್ಕೆ ಯಾವ ಗ್ರಹದಿಂದ ತೊಂದರೆ ಎಂದು ತಿಳಿದು ಶಾಂತಿಯನ್ನು ಮಾಡುವುದುಂಟು. ಅದರಂತೆ ಮಾಡಿದರೆ ಖಂಡಿತವಾಗಿಯೂ ಸಂತಾನ ಪ್ರಾಪ್ತಿಯಾಗುತ್ತದೆ. ಶಾಂತಿಯ ವಿವರಗಳು ಈ ಕೆಳಗಿನಂತಿವೆ.

* ಗುರು, ಚಂದ್ರನಿಂದ ಉಂಟಾಗುವ ದೋಷಕ್ಕೆ ಮಂತ್ರ– ಯಂತ್ರ–ಔಷಧ ಸೇವನೆಯಿಂದ ಶುಭ.

* ರಾಹುವುನಿಂದ ಆಗುವ ದೋಷಕ್ಕೆ ಕನ್ಯಾದಾನ.

* ಸೂರ್ಯಜನಿತ ದೋಷಶಾಂತಿಗೆ ವಿಷ್ಣುಪೂಜೆ, ವಿಷ್ಣು ಸಹಸ್ರನಾಮ ಪಾರಾಯಣ.

* ಕೇತುವಿನಿಂದಾಗುವ ದೋಷಕ್ಕೆ ಗೋದಾನ.

* ಶನಿ ಅಥವಾ ಕುಜನಿಂದಾಗುವ ದೋಷಕ್ಕೆ ರುದ್ರಜಪ, ಶತರುದ್ರಾಭಿಷೇಕ, ರುದ್ರಹೋಮ.

* ಸರ್ವದೋಷನಿವಾರಣೆಗೆ ಹರಿವಂಶ ಶ್ರವಣ, ಭಾಗವತ ಸಪ್ತಾಹ, ಗುರುಚರಿತ್ರೆ ಪಾರಾಯಣ,

ವಿಶೇಷ ಪೂಜೆಯಿಂದ ಎಲ್ಲಾವಿಧವಾದ ದೋಷಗಳೂ ನಿವಾರಣೆಯಾಗುತ್ತದೆ (ಭೃ.ಪ. ಹೋರಾಶಾಸ್ತ್ರ 83ನೇ ಅದ್ಯಾಯ).

* ಮೋಕ್ಷ ವಿಚಾರ *

ಈ ಭಾಗದಲ್ಲಿ ಮೋಕ್ಷ ವಿಚಾರವನ್ನು ಭಾರತೀಯ ದರ್ಶನ ಶಾಸ್ತ್ರದ ಅಡಿಯಲ್ಲಿ ಅತ್ಯಂತ ಸಂಗ್ರಹವಾಗಿ ಪ್ರಸ್ತಾಪಿಸಲಾಗಿದೆ.

"ಮೋಕ್ಷ" ಎಂಬ ಪರಿಕಲ್ಪನೆಯು ಭಾರತೀಯ ವಿಚಾರಧಾರೆಯಲ್ಲಿ ಅತ್ಯಂತ ವಿಸಿಷ್ಟವಾದದ್ದು. ಸಾಮಾನ್ಯ ಅರ್ಥದಲ್ಲಿ ಮೋಕ್ಷ ಎಂದರೆ ಬಿಡುಗಡೆ ಎಂದು ಭಾವಿಸಲಾಗುತ್ತದೆ. ಆದರೆ ವೇದಾಂತದ ಪರಿಭಾಷೆಯಲ್ಲಿ ಮೋಕ್ಷ ಎಂದರೆ ಜೀವನು ತನ್ನ ಸ್ವಸ್ವರೂಪವನ್ನು ಕಂಡು ಕೊಳ್ಳುವುದೇ ಆಗಿದೆ. ವೇದಾಂತ ಎಂದರೆ ವೇದಗಳ ಕೊನೆಯ ಭಾಗ ಎಂದರ್ಥ. ವೇದದ ಕೊನೆ ಭಾಗವು ಉಪನಿಷತ್ತುಗಳನ್ನು ಒಳಗೊಂಡಿದೆ. ಈ ಉಪನಿಷತ್ತುಗಳ ನಂತರ ಬಂದ ಬ್ರಹ್ಮಸೂತ್ರಗಳು, ಅದರ ನಂತರ ಬಂದ ಭಗವದ್ಗೀತೆಯು ಮೋಕ್ಷ ವಿಚಾರವನ್ನು ವಿಸ್ತಾರವಾಗಿ ಪ್ರಸ್ತಾಪಿಸಿದೆ. ಉಪನಿಷತ್ತು, ಬ್ರಹ್ಮಸೂತ್ರ, ಭಗವದ್ಗೀತೆ ಈ ಮೂರನ್ನು ಸೇರಿಸಿ ಪ್ರಸ್ಥಾನತ್ರಯವೆಂದು ಕರೆಯುತ್ತಾರೆ. ಇವುಗಳ ಮೇಲೆ ನಮ್ಮ ಆಚಾರ್ಯತ್ರಯರು ವಿಶಾಲವಾದ ಬಾಷ್ಯಗಳಲ್ಲಿ ತಮ್ಮ ನಿಲುವನ್ನು ಪ್ರತಿಪಾದಿಸಿದ್ದಾರೆ.

ಶ್ರೀ ಆದಿಶಂಕಾಚಾರ್ಯರು ಪ್ರತಿಪಾದಿಸಿರುವ ಸಿದ್ಧಾಂತಕ್ಕೆ ಅದ್ವೈತ ಸಿದ್ಧಾಂತವೆಂದೂ, ಶ್ರೀ ರಾಮಾನುಜಚಾರ್ಯರು ಪ್ರತಿಪಾದಿಸಿರುವ ಸಿದ್ಧಾಂತಕ್ಕೆ ವಿಷಿಷ್ಟಾದ್ವೈತವೆಂದೂ, ಶ್ರೀ ಮಧ್ವಾಚಾರ್ಯರು ಪ್ರತಿಪಾದಿಸಿರುವ ಸಿದ್ಧಾಂತಕ್ಕೆ ದ್ವೈತ ಸಿದ್ಧಾಂತವೆಂದೂ ಹೆಸರಿಸಲಾಗಿದೆ. ಈ ಮೂರು ಸಿದ್ಧಾಂತಗಳ ಪ್ರಕಾರ ಮೋಕ್ಷದ ಕಲ್ಪನೆಯಲ್ಲಿ ಸ್ವಲ್ಪ ವ್ಯತ್ಯಾಸ ಉಂಟಾಗುತ್ತದೆ.

1) **ಅದ್ವೈತ ಸಿದ್ಧಾಂತದಲ್ಲಿ ಮೋಕ್ಷದ ಪರಿಕಲ್ಪನೆ:** ಅದ್ವೈತ ಸಿದ್ಧಾಂತದ ಪ್ರಕಾರ ಪರಬ್ರಹ್ಮ ವಸ್ತುವಿಗೆ ಮಾತ್ರ ಮಾನ್ಯತೆ ಇರುತ್ತದೆ. ಬ್ರಹ್ಮ ಎಂಬ ಪದವು "ಬೃಹ್" ಎಂಬ ಧಾತುವಿನಿಂದ ವ್ಯುತ್ಪತ್ತಿಯಗಿರುತ್ತದೆ. "ಬೃಹ್" ಎಂದರೆ ಅತ್ಯಂತ ದೊಡ್ಡದು, ವ್ಯಾಪಕವಾದದ್ದು ಆಗಿರುತ್ತದೆ. ಇದರ ವ್ಯಾಪ್ತಿಯನ್ನು ಊಹಿಸಲೂ ಸಾಧ್ಯವಿಲ್ಲ. ಈ ತತ್ವವು ಮಾತಿಗೂ ಮನಸ್ಸಿಗೂ ನಿಲುಕದ್ದಾಗಿರುತ್ತದೆ. "ಯತೋವಾಚಾ ನಿವರ್ತಂತೆ ಅಪ್ರಾಪ್ಯ ಮನಸಾಸಹ" ಎಂಬ ಉಪನಿಷದ್ ವಾಕ್ಯದಂತೆ ಮಾತು ಮತ್ತು ಮನಸ್ಸು ಈ ತತ್ವವನ್ನು ಅರಿಯಲು ಹೊರಟು ಅರಿಯಲಾರದೆ ಹಿಂತಿ-ರುಗಿದವು ಎಂಬ ವ್ಯಾಖ್ಯಾನವು ಇದರ ಅಗಮ್ಯತೆಯನ್ನು ತೋರಿಸುತ್ತದೆ. ಈ ಪರಬ್ರಹ್ಮ ತತ್ವವು ಸಕಲ ಚರಾಚರಜಗತ್ತಿಗೂ ಅಧಿಷ್ಟಾನವಾಗಿದ್ದರೂ ತಾನು ಸ್ವತಃ ನಿರಾಕಾರವೂ, ನಿರ್ಗುಣವೂ ಹಾಗೂ ನಿರ್ವಿಶೇಷವೂ ಆಗಿರುತ್ತದೆ. ಸಕಲ ದೃಶ್ಯಪ್ರಪಂಚವೂ ಈ ಬಹ್ಮವಸ್ತುವಿನ ವ್ಯಕ್ತ ಸ್ವರೂಪವಾಗಿ ಕೇವಲ ಒಂದು

ಅಂಶವಾಗಿರುತ್ತದೆ. ಸಾಮಾನ್ಯವಾಗಿ ಮಹಾವಾಕ್ಯಗಳೆಂದು ಪರಿಗಣಿಸಲ್ಪಡುವ "ಅಹಂ ಬ್ರಹ್ಮಾಸ್ಮಿ", "ತತ್ವಮಸಿ", "ಸರ್ವಂ ಖಲ್ವಿದಂ ಬ್ರಹ್ಮ", "ಅಯಮಾತ್ಮಾ ಬ್ರಹ್ಮ". ನಾಲ್ಕು ವೇದಗಳಲ್ಲಿ ಬರುವ ಈ ನಾಲ್ಕು ಮಹಾ ವಾಕ್ಯಗಳ ಆಧಾರದ ಮೇಲೆ ಅದ್ವೈತ ಸಿದ್ದಾಂತವು ಹೆಣೆದುಕೊಂಡಿದೆ. 'ದೃಷ್ಟಿಂ ಜ್ಞಾನಮಯೀಂ ಕೃತ್ವ ಪಶ್ಯೇತ್ ಬ್ರಹ್ಮಮಯಂ ಜಗತ್' ಎಂಬ ವಾಕ್ಯದಂತೆ ಜ್ಞಾನದ ಮೂಲಕ ಜಗತ್ತನ್ನು ಬ್ರಹ್ಮಮಯವಾಗಿ ಕಾಣಬೇಕಾಗಿರುತ್ತದೆ. 'ಬ್ರಹ್ಮಸತ್ಯಂ' – 'ಜಗನ್ಮಿತ್ಯ' ಎಂಬ ವಾಣಿಯಂತೆ, ತೋರುವ ಜಗವೆಲ್ಲವೂ ವಾಸ್ತವವಾಗಿ ಬ್ರಹ್ಮವೇ ಆಗಿರುತ್ತದೆ. ಎಂದರೆ ತೋರುವ ಜಗತ್ತಿಗೆ ಸ್ವತಂತ್ರವಾದ ಅಸ್ತಿತ್ವ ಇಲ್ಲ. ಬ್ರಹ್ಮವೇ ಮಾಯೆಯಿಂದ ಜಗತ್ತಾಗಿ ತೋರುತ್ತದೆ. ಇದಕ್ಕೆ ಅನಾದಿಕಾಲದಿಂದ ಆವರಿಸಿರುವ ಅವಿದ್ಯೆಯೇ ಕಾರಣ. ಈ ಅವಿದ್ಯೆಯನ್ನು ತೊಲಗಿಸಿದರೆ ಬ್ರಹ್ಮವು ಅನುಭವಕ್ಕೆ ಬರುತ್ತದೆ. ಇಡೀ ವಿಶ್ವವೇ ಬ್ರಹ್ಮವಾಗಿರುವಾಗ ಜೀವರುಗಳೂ ಸಹ ಬ್ರಹ್ಮವೇ. ಈ ರೀತಿಯ ಜ್ಞಾನವನ್ನು ಪಡೆಯುವುದೇ ಮೋಕ್ಷವೆಂದು ಅದ್ವೈತದ ಪ್ರತಿಪಾದನೆ. ಇದಕ್ಕೆ ಬ್ರಹ್ಮಜ್ಞಾನ ಪ್ರಾಪ್ತಿ ಎನ್ನಲಾಗುತ್ತದೆ. ಈ ಬ್ರಹ್ಮಜ್ಞಾನ ಪ್ರಾಪ್ತಿಯಾಗಬೇಕಾದರೆ ಅವಿದ್ಯಾ ನಿವೃತ್ತಿಯಾಗಬೇಕು. ಇದಕ್ಕೆ ಆಧ್ಯಾತ್ಮಿಕ ಸಾಧನೆ ಅತ್ಯಗತ್ಯ. ಈ ಹೊತ್ತಿಗೆಯಲ್ಲಿ ಹಿಂದೆಯೇ ತಿಳಿಸಿರುವಂತೆ ನಿಷ್ಕಾಮ ಕರ್ಮಾಚರಣೆಯಿಂದಲೂ, ದೇವತೋಪಾಸನೆಯಿಂದಲೂ ಚಿತ್ತ ಶುದ್ಧಿಯನ್ನು ಪಡೆದವರು ಸದ್ಗುರುವನ್ನು ಆಶ್ರಯಿಸಿ, ಭಗವದ್ಗೀತೆಯಲ್ಲಿ ತಿಳಿಸಿರುವಂತೆ 'ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ' ಎಂದರೆ ವಿನೀತನಾಗಿ ಗುರುಗಳ ಸೇವೆ ಮಾಡುತ್ತಾ ನಮಸ್ಕರಿಸುತ್ತಾ ಅತ್ಯಂತ ಶ್ರದ್ಧೆಯಿಂದ ವೇದಾಂತ ಶ್ರವಣ, ಮನನ, ನಿದಿಧ್ಯಾಸನ ಮತ್ತು ಪರಿಪ್ರಶ್ನೆಗಳಿಂದ ಈ ಜ್ಞಾನವನ್ನು ಪಡೆಯಬಹುದು. ಒಂದು ಸಲ ಈ ಜ್ಞಾನ ಪ್ರಾಪ್ತವಾದರೆ ಅದೇ ಮೋಕ್ಷ. ಎಂದರೆ ಒಬ್ಬ ಸಾಧಕನು ಈ ದೇಹದಲ್ಲಿ ಜೀವಂತವಾಗಿರುವಾಗಲೇ ಈ ಜ್ಞಾನವನ್ನು ಪಡೆದು ಮುಕ್ತನಾಗಲು ಸಾಧ್ಯ. ಇದಕ್ಕೆ 'ಜೀವನ್ಮುಕ್ತಿ' ಎನ್ನುತ್ತಾರೆ. ಈ ಪರಿಕಲ್ಪನೆ ಅದ್ವೈತ ವೇದಾಂತಕ್ಕೆ ಮಾತ್ರ ವಿಶೇಷವಾಗಿದೆ.

2) **ವಿಶಿಷ್ಟಾದ್ವೈತ ಸಿದ್ಧಾಂತದಲ್ಲಿ ಮೋಕ್ಷದ ಪರಿಕಲ್ಪನೆ:** ಈ ಸಿದ್ಧಾಂತದಲ್ಲಿ ಜೀವನ್ಮುಕ್ತಿ ಎಂಬ ಕಲ್ಪನೆಗೆ ಅವಕಾಶವಿಲ್ಲ. ಈ ಸಿದ್ಧಾಂತದ ಪ್ರಕಾರ ಪರಬ್ರಹ್ಮವೆಂದರೆ ಶ್ರೀಮನ್ನಾರಾಯಣನೇ. ಜೀವಿಗಳೆಲ್ಲಾ ಬ್ರಹ್ಮದ ಭಾಗವೆಂದು ಒಪ್ಪಿದರೂ, ಜೀವಿಗಳು ಅಸ್ವತಂತ್ರರು ಮತ್ತು ಶ್ರೀಮಾನ್ ನಾರಾಯಣನಕಿಂಕರರು. ಆಯುಶ್ಯದ ಕೊನೆಯಲ್ಲಿ ದೇಹತ್ಯಾಗವಾದ ಮೇಲೆ ಶ್ರೀಮನ್ನಾರಾಯಣನ ಲೋಕವಾದ, ವೈಕುಂಠವನ್ನು ಸೇರುವುದೆ ಮೋಕ್ಷವೆಂದು ಭಾವಿಸಲಾಗುತ್ತದೆ. ಈ ಗುರಿಯನ್ನು ಸಾಧಿಸಬೇಕಾದರೆ ಭಕ್ತಿಮಾರ್ಗದಿಂದ ಶ್ರೀಮನ್ನಾರಾಯಣನಲ್ಲಿ ಸಂಪೂರ್ಣ ಶರಣಾಗತಿಯನ್ನು

ಸಾಧಿಸಿ ಕೊನೆಗೆ ಶ್ರೀಮನ್ನಾರಾಯಣನ ಲೋಕವನ್ನು ಪಡೆಯಬಹುದು. ಈ ಸಿದ್ಧಾಂತದ ಪ್ರಕಾರ ಜೀವನು ನಾಲ್ಕು ವಿಧವಾದ ಮುಕ್ತಿಯ ಹಂತಗಳನ್ನು ಅನುಭವಿಸಬಹುದು.

- ಸಾಲೋಕ್ಯ: ಸಾಲೋಕ್ಯ ಎಂದರೆ ಜೀವನು ಶ್ರೀಮನ್ನಾರಾಯಣನ ಲೋಕವಾದ ವೈಕುಂಠವನ್ನು ಪಡೆಯುವುದು.
- ಸಾಮೀಪ್ಯ: ಸಾಮೀಪ್ಯ ಎಂದರೆ ಶ್ರೀಮನ್ನಾರಾಯಣನಿಗೆ ಅತ್ಯಂತ ಸಮೀಪದಲ್ಲಿದ್ದು ಆನಂದವನ್ನು ಅನುಭವಿಸುವುದು. ಇದು ಸಾಲೋಕ್ಯಕ್ಕಿಂತ ಉತ್ತಮ ಮಟ್ಟದ್ದು.
- ಸಾರೂಪ್ಯ: ಇದರ ವಿಶೇಷತೆ ಎಂದರೆ ಶ್ರೀಮನ್ನಾರಾಯಣನಂತೆಯೆ ರೂಪವನ್ನು ಪಡೆಯುವುದು. ಈ ಹಂತವು ಸಾಮಿಪ್ಯಕ್ಕಿಂತಲೂ ಉತ್ತಮವಾದದ್ದು.
- ಸಾಯುಜ್ಯ: ಈ ಹಂತದಲ್ಲಿ ಸಾಧಕನು ಶ್ರೀಮನ್ನಾರಾಯಣನ ದಿವ್ಯ ಶರೀರವನ್ನು ಪ್ರವೇಶಿಸುತ್ತಾನೆ. ಇದು ಅತ್ಯಂತ ಉನ್ನತ ಮಟ್ಟದ ಮುಕ್ತಿ.

ಈ ಎಲ್ಲಾ ನಾಲ್ಕು ಮುಕ್ತಿಗಳು ಸಗುಣಬ್ರಹ್ಮದ ಪರಿಮಿತಿಯಲ್ಲಿಯೇ ಬರುತ್ತದೆ.

3) **ದ್ವೈತಸಿದ್ಧಾಂತದಲ್ಲಿ ಮೋಕ್ಷದ ಪರಿಕಲ್ಪನೆ:** ಈ ಸಿದ್ಧಾಂತವು ನಿರಾಕಾರ ನಿರ್ಗುಣ ಬ್ರಹ್ಮವನ್ನು ಒಪ್ಪುವುದಿಲ್ಲ. ದ್ವೈತ ಸಿದ್ಧಾಂತದಲ್ಲಿ ಶ್ರೀಹರಿಯೇ ಪರಬ್ರಹ್ಮ. ಈ ಸಿದ್ಧಾಂತದಲ್ಲಿ ಶ್ರೀಹರಿಯು ಬಿಂಬವಾದರೆ ಜೀವರುಗಳೆಲ್ಲಾ ಪ್ರತಿಬಿಂಬರು. ಜೀವರುಗಳೆಲ್ಲಾ ಅಸ್ವತಂತ್ರರು. ಶ್ರೀಹರಿಯೇ ಸ್ವತಂತ್ರನು. ಈ ಬಿಂಬ, ಪ್ರತಿಬಿಂಬ ಜ್ಞಾನವನ್ನು ಸರಿಯಾದ ರೀತಿಯಲ್ಲಿ ಪಡೆಯುವುದು, ಮೋಕ್ಷದ ಹಾದಿಯಲ್ಲಿ ಅತ್ಯಂತ ಪ್ರಮುಖ ಘಟ್ಟವಾಗಿದೆ. ಇದರ ಪ್ರಕಾರ ಬ್ರಹ್ಮವನ್ನು ತಿಳಿಯುವುದೆಂದರೆ, ಶ್ರೀಹರಿಯ ಬಗ್ಗೆ ಸಂಪೂರ್ಣ ಜ್ಞಾನವನ್ನು ಪಡೆಯುವುದೇ ಆಗಿದೆ. ಅನಂತಕಲ್ಯಾಣಗುಣಪರಿಪೂರ್ಣನಾದ, ಪುರುಷೋತ್ತಮನಾದ ಶ್ರೀಹರಿಯ ಜ್ಞಾನವನ್ನು ಪಡೆಯುವುದು ಅಷ್ಟೇನೂ ಸುಲಭವಲ್ಲ. ಆದರೆ ನಿಷ್ಕಲ್ಮಷಭಕ್ತಿ, ಸೇವೆ, ಸ್ವಧರ್ಮಾನುಷ್ಠಾನ ಇವುಗಳಿಂದ ಶ್ರೀಹರಿಯನ್ನು ಮೆಚ್ಚಿಸಿದರೆ ಆಗ ಶ್ರೀಹರಿಯೇ ಆ ಜೀವಿಯ ಯೋಗ್ಯತಾನುಸಾರವಾಗಿ ತನ್ನ ಸ್ವರೂಪದ ತಿಳುವಳಿಕೆಯನ್ನು ಜೀವನಿಗೆ ಕೊಡುತ್ತಾನೆ. ಈ ಸಿದ್ಧಾಂತದಲ್ಲಿ ಕೂಡ ವೈಕುಂಠ ಲೋಕ ಪ್ರಾಪ್ತಿಯೆ ಮೋಕ್ಷ ಎಂದು ಪರಿಗಣಿಲಾಗುತ್ತದೆ.

ಈ ಸಿದ್ಧಾಂತದ ಪ್ರಕಾರ ಜೀವಿಗಳನ್ನು, ಮೋಕ್ಷದ ದೃಷ್ಟಿಯಿಂದ ಮೂರು ಗುಂಪುಗಳಾಗಿ ವಿಂಗಡಿಸುತ್ತಾರೆ. ಅವುಗಳೆಂದರೆ:–

- ಮುಕ್ತಿಯ್ಯೋಗ್ಯ ಜೀವರು
- ನಿತ್ಯಸಂಸಾರಿಗಳು
- ತಮೋಯೋಗ್ಯ ಜೀವಿಗಳು.

ಸನಾತನ ಧರ್ಮದ ಪ್ರಮುಖ ಸಿದ್ಧಾಂತಗಳಾದ ಅದ್ವೈತ, ವಿಷಿಷ್ಟಾದ್ವೈತ ಮತ್ತು ದ್ವೈತ ಸಿದ್ಧಾಂತಗಳ ಪ್ರಕಾರ ಮೋಕ್ಷದ ಪರಿಕಲ್ಪನೆಯನ್ನು ಅತ್ಯಂತ ಸಂಗ್ರಹ ರೂಪದಲ್ಲಿ ಓದುಗರ ಅವಗಾಹನೆಗಾಗಿ ಇಲ್ಲಿ ಕೊಡಲಾಗಿದೆ. ಆಸಕ್ತರಾದ ಜಿಜ್ಞಾಸುಗಳು ಹೆಚ್ಚಿನ ಜ್ಞಾನಕ್ಕಾಗಿ ಆಚಾರ್ಯತ್ರಯರ ಪ್ರಸ್ಥಾನತ್ರಯ ಭಾಷ್ಯವನ್ನು ಪರಿಶೀಲಿಸಬೇಕೆಂದು ಸೂಚಿಸಲಾಗಿದೆ.

* ಲೇಖಕರ ಬಗ್ಗೆ *

ಶ್ರೀಯುತಶ್ರೀನಿವಾಸಮೂರ್ತಿ ಪೆರಮಾಚನಹಳ್ಳಿಯವರು ಮೂಲತಃ ಚಿಂತಾಮಣಿ ತಾಲ್ಲೂಕಿನವರು. ಶ್ರೀಮತಿ ಪದ್ಮಾಕ್ಷಮ್ಮ ಹಾಗೂ ಕೀರ್ತಿಶೇಷ ಹೆಚ್. ಕೆ ವೆಂಕಟನಾರಾಯಣಪ್ಪ ನವರ ಸುಪುತ್ರರು. ಇವರು ಬಾಲ್ಯದ ವಿದ್ಯಾಭ್ಯಾಸವನ್ನು ಚಿಂತಾಮಣಿಯಲ್ಲಿ ನಡೆಸಿ ನಂತರ ಃ.ಅಔಏ, ಒ.ಂ(ಜ್ಯೋತೀಷ್ಯ), ಒ.ಂ (ಸಂಸ್ಕೃತ), ಒ.ಂ (ಪರ್ಯಾಯ ಚಿಕಿತ್ಸೆ), ಪದವಿಯನ್ನು ಪಡೆದಿದ್ದಾರೆ. ಇವರ ಬಾಲ್ಯ ವೇದಾಧ್ಯಯನವನ್ನು ತಮ್ಮ ತಂದೆಯವರ ಬಳಿಯೇ ಕಲಿತು ನಂತರ ಚಿಂತಾಮಣಿಯ ವೇ॥ಬ್ರ॥ಶ್ರೀ॥ ವೆಂಕಟೇಶ ಶಾಸ್ತ್ರಿಗಳ ಬಳಿ ನಡೆಸಿರುತ್ತಾರೆ. ಹೆಚ್.ಎಸ್. ನಾಗಭೂಷಣ ರಾವ್ ರವರ ಬಳಿ ಜ್ಯೋತೀಷ್ಯಶಾಸ್ತ್ರದ ಅಧ್ಯಯನವನ್ನು ನೆಡೆಸಿ ನಂತರ ಭಾರತೀಯ ವಿಧ್ಯಾಭವನದಲ್ಲಿ (ಖಓಆಖಂಓ ಖಓಖಖಿಖಖಿಗಖಿಖಔಓ ಔಈ ಂಖಖಿಖಔಐಔಉಖಅಂಐ ಖಅಖಇಓಅಇ) ಜ್ಯೋತಿಷ್ಯ ಪ್ರವೀಣ, ಜ್ಯೋತಿಷ್ಯ ವಿಶಾರದ, ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ತಮ್ಮ ಹೆಚ್ಚಿನ ವೇದಾಧ್ಯಯನವನ್ನು ವೇ॥ಬ್ರ॥ಶ್ರೀ॥ ಪ್ರೊ ಎಮ್. ಎನ್. ಚಂದ್ರಶೇಕರ್ ರವರ ಬಳಿ ಮುಂದುವರಿಸುತ್ತಿದ್ದಾರೆ. ಕೆಲವು ವರ್ಷಗಳ ಕಾಲ ಇವರು ಆಯುರ್ವೇದ ವೈದ್ಯಕೀಯ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿದ್ದು, ಪ್ರಸ್ತುತ ಇವರು ಜ್ಯೋತಿಷ್ಯಾಧ್ಯಯನ ಹಾಗೂ ಬೋಧನೆಯನ್ನು ನಡೆಸುತ್ತಿದ್ದಾರೆ.

ಇವರಿಗೆ ಜ್ಯೋತಿಷ್ಯ ರತ್ನ, ಜ್ಯೋತಿಷ್ಯ ಪ್ರವೀಣ, ಜ್ಯೋತಿಷ್ಯ ವಿಶಾರದ, ಜ್ಯೋತಿಷ್ಯ ವಿದ್ಯಾಪೋಷಕ, ಜ್ಯೋತಿಷ್ಯ ಜ್ಞಾನಭೋಧಕ, ಜ್ಯೋತಿರ್ ಶಿರೋಮಣಿ, ಜ್ಯೋತಿಷ್ಯ ಉಪಾಧ್ಯಾಯ, ನಾಡಿ–ಹಸ್ತಸಾಮುದ್ರಿಕಾ ಜ್ಯೋತಿಷ್ಯ ಪಂಡಿತ್, ನಾಡಿ–ಜ್ಯೋತಿಷ್ಕ, ಸಾಮುದ್ರಿಕಾ ವಿದ್ವಾನ್, ಮಹೂರ್ತ ಪ್ರವೀಣ, ಮಹೂರ್ತ ಚೂಡಾಮಣಿ, ಜ್ಯೋತಿರ್ ಭೂಷಣ ಮುಂತಾದ ಬಿರುದುಗಳು ಇವರ ಮುಡಿಗೇರಿವೆ.

ವೇ॥ಬ್ರ॥ಶ್ರೀ॥ ಹೆಚ್. ವಿ. ಶ್ರೀನಿವಾಸಮೂರ್ತಿ ಪೆರಮಾಚನಹಳ್ಳಿ
+919980598580, +919449238771
ಇಮೇಲ್: hvskantheti@gmail.com

ವಿ.ಸೂ:– ಈ ಕಿರುಹೊತ್ತಿಗೆಯಲ್ಲಿ ಪ್ರಸ್ತಾಪಿಸಲಾಗಿರುವ ವಿಚಾರಗಳಬಗ್ಗೆ ಸ್ಪಷ್ಟೀಕರಣ ಅಥವಾ ಮಾಹಿತಿ ಬೇಕಿದ್ದಲ್ಲಿ ಮೇಲೆ ಕೊಟ್ಟಿರುವ ಈಮೆಲ್ ವಿಳಾಸಕ್ಕೆ ಸಂಪರ್ಕಿಸಬಹುದು.

ಪರಮಾತ್ಮನೇ ಸತತಮೇಕರೂಪಿಣೇ ದಶರೂಪಿಣೇ ಶತಸಹಸರೂಪಿಣೇ।
ಅವಿಕಾರಿಣೇ ಸ್ಫುಟಮನಂತರೂಪಿಣೇ ಸುಖಚಿತ್ಸಮಸ್ತತನವೇ ನಮೋ ನಮಃ॥

ದಶಾವತಾರ



ಶ್ರೀ ಗುರುಸಾರ್ವಭೌಮರು

ಶ್ರೀ ವೈಕುಂಠನಾರಾಯಣ

ರಾಯರ ಪಾದುಕೆ

ಈ ಪ್ರಕಟಣೆಯ ಫಲವನ್ನು ಮಂತ್ರಾಲಯ ಪ್ರಭುಗಳಾದ
ಶ್ರೀ ಶ್ರೀ ಶ್ರೀ ರಾಘವೇಂದ್ರ ಗುರು ಸಾರ್ವಭೌಮರ
ದಿವ್ಯ ಚರಣ ಕಮಲದಲ್ಲಿ ಅರ್ಪಿಸಲಾಗಿದೆ.

॥ಶ್ರೀ ಕೃಷ್ಣಾರ್ಪಣಮಸ್ತು॥